# ಕಲ್ಯಾಣ ಕಿರಣ

ಜುಲೈ - 2006

ಬೆಲೆ : ರೂ. 6/-



ಬಸವ ಪೀಠವು ಎದ್ದು।






ಒಸೆದು ನಾಣ್ಯವು ಹುಟ್ಟಿ।






ಬಸವನ ಮುದ್ರೆ ಮೆರೆದಾವು।

ಧರೆಯವಗೆ ವಶವಾಗದಿಹುದೇ ? ಸರ್ವಜ್ಞ



ದಿನಾಂಕ 30-6-2006 ರಂದು ಬೆಂಗಳೂರಿನ ಬಸವ ಮಂಟಪದಲ್ಲಿ ಜರುಗಿದ ಪೂಜ್ಯ ಲಿಂ. ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ
11 ನೆಯ ಲಿಂಗೈಕ್ಯ ಸಂಸ್ಮರಣೆ ನಿಮಿತ್ತ ಪೂಜ್ಯ ಮಾತಾಜಿಯವರಿಂದ ಪ್ರವಚನ


|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ-36 ಸಂಚಿಕೆ-3 | ಬಸವ ಶಕೆ-873 ಜುಲೈ-2006 | ಆಜೀವ ಸದಸ್ಯತ್ವ 600 ರೂ. ವಾರ್ಷಿಕ ಚಂದಾ 60/- ರೂ.


# ನಾಣ್ಯ ಬಿಡುಗಡೆಗಾಗಿ ಕೇಂದ್ರ ಸರ್ಕಾರಕ್ಕೆ ಅಭಿನಂದನೆ

**ರಾಷ್ಟ್ರಮಟ್ಟದಲ್ಲಿ ಕ್ರಾಂತಿಪುರುಷ
ಭಾರತದ ಮೊಟ್ಟಮೊದಲ ಸ್ವತಂತ್ರ ವಿಚಾರವಾದಿ,
ಸಮತಾವಾದಿ ಗುರು ಬಸವಣ್ಣನವರನ್ನು ಪರಿಚಯಿಸುವಂತೆ
5 ರೂ ಬಸವ ನಾಣ್ಯವನ್ನು**



**ದಿ.23-6-2006ರಂದು
ಬಿಡುಗಡೆ ಮಾಡಿದ್ದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಅಭಿನಂದನೆ
ಬಿಡುಗಡೆ ಮಾಡಿದ
ಪ್ರಧಾನಿ ಶ್ರೀ ಮನಮೋಹನ್ ಸಿಂಗ್ ಅವರಿಗೆ,
ಮಾಡಿಸಿದ ಅರ್ಥಮಂತ್ರಿ
ಶ್ರೀ.ಪಿ.ಚಿದಂಬರಂಗೆ ಶುಭಹಾರೈಕೆಗಳು.**

ಬಸವ ಪೀಠವು ಎದ್ದು
ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು
ಧರೆಯವಗೆ ವಶವಾಗದಿಹುದೆ? ಸರ್ವಜ್ಞ

– ಪರವಾಗಿ
ಬಸವ ಧರ್ಮಪೀಠ
ಲಿಂಗಾಯತ ಧರ್ಮ ಮಹಾಸಭಾ
ರಾಷ್ಟ್ರೀಯ ಬಸವ ದಳ
ಬಸವ ಧರ್ಮ ಸಂಸ್ಥೆ ಸದಸ್ಯರು

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ 36 ಬಸವ ಶಕೆ 873 ಆಜೀವ ಸದಸ್ಯತ್ವ 600ರೂ

ಸಂಚಿಕೆ 3 ಜುಲೈ- 2006 ವಾರ್ಷಿಕ ಚಂದಾ 60/-ರೂ.

ಲೇಖನಗಳು ಕಿರಣ ಗನ್ನಡಿ ಪುಟ





ದಿ. 30-7-2006 ರಂದು ಬಂದಿರುವ
811ನೆಯ ಬಸವ ಪಂಚಮಿಯ
ಶುಭಾಶಯಗಳು.

**KALYANA KIRANA**-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010



# ವಿಶ್ವಗುರು ಬಸವಣ್ಣನವರು (1134-1196)

ವಿಶ್ವಗುರು ಬಸವಣ್ಣನವರು ಪರಮಾತ್ಮನ ಕರುಣೆಯ ಕಂದರಾಗಿ ಅವತರಿಸಿ, ಲೋಕಕ್ಕೆ ಹೊಸ ಧರ್ಮವೊಂದನ್ನು ಕೊಟ್ಟರು. ಇಂಗಳೇಶ್ವರ ಬಾಗೇವಾಡಿಯಲ್ಲಿ ಶೈವಬ್ರಾಹ್ಮಣ ದಂಪತಿಗಳಾದ ಮಾದರಸ-ಮಾದಲಾಂಬಿಕೆಯರ ಮಗನಾಗಿ ಆನಂದನಾಮ ಸಂವತ್ಸರದಲ್ಲಿ ವೈಶಾಖಮಾಸದ ಅಕ್ಷಯ ತೃತೀಯಾದಂದು (30-4-1134) ರೋಹಿಣಿ ನಕ್ಷತ್ರದಲ್ಲಿ ಜನಿಸಿ ಯಾವುದೇ ಅಂಧಶ್ರದ್ಧೆ-ಜಡಸಂಪ್ರದಾಯಗಳನ್ನೊಪ್ಪದೆ ಸತ್ಯಾನ್ವೇಷಕರಾಗಿ ಹೆತ್ತವರನ್ನು, ಬಂಧು ಬಾಂಧವರನ್ನು ತೊರೆದು ವಿದ್ಯಾಕಾಂಕ್ಷಿಯಾಗಿ ಕೂಡಲ ಸಂಗಮದ ಗುರುಕುಲಕ್ಕೆ ಬಂದರು. ಶಾಸ್ತ್ರಾಧ್ಯಯನ, ಯೋಗಾಭ್ಯಾಸಗಳಲ್ಲಿ ಬಾಲ್ಯವನ್ನು ಕಳೆದು ತಾರುಣ್ಯಕ್ಕೆ ಕಾಲಿರಿಸಿದರು. ಜನರಲ್ಲಿ ಮನೆ ಮಾಡಿಕೊಂಡಿದ್ದ ಮೌಢ್ಯತೆ, ಕಂದಾಚಾರ, ಜಾತೀಯತೆಗಳನ್ನು ಕಂಡು ಮನನೊಂದು ಪರಿಹಾರವನ್ನು ಅರಸತೊಡಗಿದರು.

ಒಂದು ದಿನ (14-1-1155) ಪರಮಾತ್ಮನ ದಿವ್ಯ ದರ್ಶನವಾಯಿತು ; ಅನುಗ್ರಹಿತರಾದರು. ಬ್ರಹ್ಮ-ವಿಷ್ಣು-ಮಹೇಶ್ವರರೆಂಬ ತ್ರಿಮೂರ್ತಿಗಳನ್ನು ಮೀರಿದ ಸೃಷ್ಟಿಕರ್ತನೇ ಶ್ರೇಷ್ಠನೆಂದು ಘೋಷಿಸಿ ಆ ದೇವನನ್ನು ಲಿಂಗದೇವ ಎಂದು ಕರೆದರು. ನಿರಾಕಾರ ದೇವನಿಗೆ ಮನುಷ್ಯರ, ಪ್ರಾಣಿಗಳ ಆಕಾರ ಕೊಡುವುದು ಸರಿಯಲ್ಲ ಎಂಬ ಭಾವ ತಳೆದು, ದೇವನ ಸಾಕಾರ ಕೃತಿಯೇ ಬ್ರಹ್ಮಾಂಡ, ಇದು ಗೋಲಾಕಾರದಲ್ಲಿದೆ. ಆದ್ದರಿಂದ ಲಿಂಗದೇವನನ್ನು ವಿಶ್ವದಾಕಾರದಲ್ಲಿ ಪೂಜಿಸುವುದು ಸರಿ ಎಂದು ಇಷ್ಟಲಿಂಗದ ಪರಿಕಲ್ಪನೆ ಕೊಟ್ಟರು. ದೇವರ ಕುರುಹಾದ ಇಷ್ಟಲಿಂಗವು ಮಾನವನ ಜಾತಿ, ವರ್ಣ, ವರ್ಗ ಭೇದಗಳನ್ನು ಕಳೆದು ಶರಣನನ್ನಾಗಿ ಮಾಡುವ ಸಾಧನವಾಗಬೇಕೆಂದು ಅದನ್ನು ಗಣ ಲಾಂಛನವನ್ನಾಗಿ ಮಾಡಿದರು.

ದಿವ್ಯಾನುಭವ ಪಡೆದು, ನವ ಸಮಾಜ ನಿರ್ಮಾಣದ ರೂಪುರೇಷೆಗಳನ್ನು ತಮ್ಮ ಮನದಲ್ಲಿ ಹೊಂದಿ ಕಲ್ಯಾಣದ ಕಾರ್ಯಕ್ಷೇತ್ರವನ್ನು ಪ್ರವೇಶಿಸಿದರು. ಸೋದರ ಮಾವನ ಮಗಳು ನೀಲಗಂಗಳನ್ನು ವಿವಾಹವಾಗಿ ಕರಣಿಕ ಕಾಯಕ ಕೈಗೊಂಡರು. ಅಲ್ಲಿಂದ, ಮುಂದೆ ಭಂಡಾರಿಯಾಗಿ, ಪ್ರಧಾನಿ (ದಂಡನಾಯಕ) ಯಾಗಿ ಕಾಯಕ ನಿರ್ವಹಿಸಿದರು. ಅನುಭವ ಮಂಟಪ ರಚಿಸಿ ಧರ್ಮಪ್ರಚಾರ ಮಾಡಿದರು. ಎಲ್ಲರ ಮನೆ, ಮನಗಳ ಬಾಗಿಲಿಗೂ ಧರ್ಮಗಂಗೆ ಹರಿಯುವಂತೆ ಮಾಡಿದರು. ಇಷ್ಟಲಿಂಗವೆಂಬ ಗಣಲಾಂಛನವನ್ನು ಧರಿಸಿ ಲಿಂಗಾಯತರಾದ ಎಲ್ಲ ಶರಣ ಬಂಧುಗಳನ್ನು ಸಮಾನ ಭಾವದಿಂದ ಕಂಡರು. ಹುಟ್ಟಿನಿಂದ ಬ್ರಾಹ್ಮಣರಾಗಿ, ಸಂಸ್ಕಾರದಿಂದ ಶರಣರಾದ ಮಧುವರಸರ ಮಗಳನ್ನು ಹುಟ್ಟಿನಿಂದ ಸಮಗಾರರಾಗಿ ಸಂಸ್ಕಾರದಿಂದ ಶರಣರಾದ ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಲು ಪ್ರೇರಣೆ ನೀಡಿದರು. ಈ ವಿವಾಹದಿಂದ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳ ಮಹಾರಾಜನನ್ನು ಪ್ರೇರೇಪಿಸಿ ಧರ್ಮಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ನೀಡುವಂತೆ ಮಾಡಿದರು. ಧರ್ಮಪಿತರು ಗಡಿಪಾರು ಶಿಕ್ಷೆ ಸ್ವೀಕರಿಸಿ ಕಲ್ಯಾಣದಿಂದ ಹೊರಟ ನಂತರ ಹರಳಯ್ಯ, ಮಧುವರಸ, ಶೀಲವಂತರ ಬಂಧನವಾಗಿ, ಅವರು ವರ್ಣಾಂತರ ವಿವಾಹದಲ್ಲಿ ಭಾಗಿಯಾದುದಕ್ಕಾಗಿ ಕಣ್ಣು ಕೀಳಿಸುವ ಶಿಕ್ಷೆ, ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶಮಾಡಲು ಸನ್ನದ್ಧರಾದಾಗ ವೀರಮಾತೆ ಅಕ್ಕನಾಗಲಾಂಬಿಕೆ, ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರ ಗಣಾಚಾರಿ ಮಡಿವಾಳ ಮಾಚಯ್ಯನವರು ವೀರಾಗ್ರಣಿಗಳಾಗಿ ಕಾದಾಡಿ ವಚನ ವಾಙ್ಮಯ ನಿಧಿಯನ್ನು ಉಳಿಸಿಕೊಟ್ಟರು. ಅದಿಂದು ನಮ್ಮೆಲ್ಲರ, ಕರ್ನಾಟಕದ, ಭಾರತದ, ವಿಶ್ವದ ಹೆಮ್ಮೆಯ ಆಸ್ತಿಯಾಗಿದೆ.

ಇಂಥ ಮಹಾನ್ ನೇತಾರರಾದ ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕರು; ಧರ್ಮಪಿತರು, ಮಂತ್ರಪುರುಷರು. 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯಲ್ಲಿ ಬಾಳಿದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ (ದಿ.30-7-1196) ಯಂದು ಉರಿಯುಂಡ ಕರ್ಪೂರದಂತೆ ಲಿಂಗೈಕ್ಯರಾದರು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

**ಬೆಂಗಳೂರಿನ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ**

**(ಹಿಂದಿನ ಅಪ್ಸರಾ ಟಾಕೀಸ್, ಚಂದ್ರ ಭವನ ಹೋಟೆಲ್ ಮುಂಭಾಗ)**

## ದೊಡ್ಡಣ್ಣ ಹಾಲ್‌ದಲ್ಲಿ

# ವಿಶ್ವಗುರು ಬಸವಣ್ಣನವರ

# 811ನೆಯ ಲಿಂಗೈಕ್ಯ ಸಂಸ್ಮರಣೆ

ಭಾನು (ದೇವ) ವಾರ ದಿ. 30-7-2006 ರಂದು ವೇಳೆ : ಬೆಳಿಗ್ಗೆ 10-30



*** ಸರ್ವರಿಗೂ ಆದರದ ಸುಸ್ವಾಗತ ***

**ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್**

ಬಸವ ಮಂಟಪ

2035, 20ನೆಯ ಮುಖ್ಯ ರಸ್ತೆ, ಎರಡನೆಯ ವಿಭಾಗ

ರಾಜಾಜಿ ನಗರ, ಬೆಂಗಳೂರು-560010



## ಶ್ರಾವಣ ಮಾಸ-ಶರಣ ಮಾಸ

## ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಅಶುಭವಲ್ಲ, ಶುಭವೂ ಅಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಸ್ವಯಂ ಪ್ರೇರಣೆಯಿಂದ ಬದ್ಧರಾಗಲು ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ, ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ 2 ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು ಅತ್ಯಂತ ಶ್ರೇಯಸ್ಕರ. ಈ ಅವಧಿಯಲ್ಲಿ ಅಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಶ್ರಾವಣ ಮಾಸವು ಶ್ರವಣ ಮಾಸವಾಗುವುದು ಮಾತ್ರವಲ್ಲ ಶರಣ ಮಾಸವೇ ಆಗುತ್ತದೆ.

### ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಬಸವ ಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರು ಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಕಾಲ ಬಸವಣ್ಣನವರ ವಚನಗಳನ್ನು ಬೆಳಿಗ್ಗೆ 54 ಸಂಜೆ 54ರಂತೆ ಭಾಗ ಮಾಡಿ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಧರ್ಮಪಿತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯರಾದ ನೀಲಮ್ಮ ಷಷ್ಠಿಯ ದಿನ. ಅಂದು ಬೆಳಿಗ್ಗೆ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಗೆ ಭಾಗಿಗಳಾಗಿ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು. ಬಸವ ಮಂಟಪ ಅಥವಾ ಸಾಮೂಹಿಕ ಸ್ಥಳಗಳಿದ್ದರೆ ಅಲ್ಲಿಯೇ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಬಹುದು. ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

## ವಿಶ್ವಗುರು ಬಸವಣ್ಣನವರ 811ನೆಯ ಲಿಂಗೈಕ್ಯ ದಿನಾಚರಣೆ

### ಭಾನು (ದೇವ )ವಾರ ದಿ. 30-7-2006ರಂದು ಬೆಳಿಗ್ಗೆ 10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ.1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 811ನೆಯ ಲಿಂಗೈಕ್ಯ ದಿನವು ಭಾನು (ದೇವ)ವಾರ ದಿ.30-7-2006ರಂದು ಒದಗಿ ಬಂದಿದೆ.

### ನೀಲವ್ವ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆ

ಧರ್ಮಪಿತ ಬಸವಣ್ಣನವರು ಕೊಟ್ಟ ಅಮೂಲ್ಯವಾದ ಒಂದು ಧಾರ್ಮಿಕ ಲಾಂಛನ ಇಷ್ಟಲಿಂಗ. ಏಕೇಶ್ವರವಾದವನ್ನು ಪ್ರತಿಪಾದಿಸಿದ ಮಹಾಪುರುಷ ಬಸವಣ್ಣನವರು. ಇಷ್ಟಲಿಂಗದ ಮೂಲಕ ಏಕದೇವೋಪಾಸನೆಗೆ ಅನುವು ಮಾಡಿಕೊಟ್ಟರು. ನಿರಾಕಾರನಾದ ದೇವನಿಗೆ ಮನುಷ್ಯರ, ಪಶುಪಕ್ಷಿಗಳ, ಕ್ರಿಮಿ ಕೀಟಗಳ ಆಕಾರ ಕೊಡುವುದು ಸೃಷ್ಟಿಕರ್ತ ಲಿಂಗದೇವನಿಗೆ ಮಾಡುವ ಅಪಚಾರವಾಗುವುದೆಂದು ಸಾರಿ, ವಿಶ್ವದಾಕಾರದಲ್ಲಿ ದೇವನನ್ನು ಪೂಜಿಸಲು ಕಲಿಸಿದರು. ಇಷ್ಟಲಿಂಗವನ್ನು ಗಣಲಾಂಛನವಾಗಿ ಮಾಡಿ, ಜಾತಿ-ವರ್ಣ-ವರ್ಗರಹಿತ ಧರ್ಮ ಸಹಿತ ಶರಣ ಸಮಾಜ ರಚನೆಗೆ ಅನುಕೂಲವಾಗುವ ಲಿಂಗಾಯತ ಧರ್ಮವನ್ನು ಕೊಟ್ಟರು.

ಪವಿತ್ರ ಹಬ್ಬ ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಶರಣ ಬಂಧುಗಳು ಮಾಡುವುದು ಕಡ್ಡಾಯವಾದ ಕರ್ತವ್ಯವಾಗಿರುವುದು. ಆದ್ದರಿಂದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಸೋಮ(ಶಿವ)ವಾರ ದಿ.31-7-2006ರಂದು ಬೆಳಿಗ್ಗೆ 10 ಗಂಟೆಗೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ಏರ್ಪಡಿಸಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಯಾಗಲು ಅನಾನುಕೂಲತೆ ಇದ್ದವರು ತಮ್ಮ

### ★ ಸರ್ವರಿಗೂ ಆದರದ ಸುಸ್ವಾಗತ ★

ಶರಣ ಎನ್. ಪುಟ್ಟರುದ್ರ, ಅಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು
ಪೀಠಾಧ್ಯಕ್ಷರು, ಬಸವ ಕಲ್ಯಾಣ



## 811ನೆಯ ಬಸವ ಲಿಂಗೈಕ್ಯ ಸಂಸ್ಮರಣೆ

### ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿ ಜನೋಪಕಾರಿ ಶ್ರೀ ದೊಡ್ಡಣ್ಣಶೆಟ್ಟಿ ಹಾಲ್‌ನಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 811ನೆಯ ಬಸವ ಪಂಚಮಿಯ ಆಚರಣೆ ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣ ದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ: ಜನೋಪಕಾರಿ ಶ್ರೀ ದೊಡ್ಡಣ್ಣ ಶೆಟ್ಟರ ಹಾಲ್‌ನಿಂದ ಹೊರಟು ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು. ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನ ಮೇಲೆ ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲೂ ಅವಕಾಶ ಉಂಟು.

### ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು, ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿ ನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ(ಸಿಟಿ ಆಸ್ಪತ್ರೆ ಪಕ್ಕ) ಇದೆ. ಕಾರ್ಯಕ್ರಮ ಏರ್ಪಾಡಾಗಿರುವ ಜನೋಪಕಾರಿ ಶ್ರೀ ದೊಡ್ಡಣ್ಣ ಶೆಟ್ಟಿ ಹಾಲ್ ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದ ಚಂದ್ರಭವನ ಹೋಟೆಲ್ ಮುಂಭಾಗದಲ್ಲಿದೆ. ಇದು ಮೊದಲು ಅಪ್ಸರಾ ಚಲನಚಿತ್ರ ಮಂದಿರವಾಗಿದ್ದಿತು.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

**ಕಾರ್ಯಕ್ರಮ ವ್ಯವಸ್ಥಾಪಕರು :**
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ
ಬೆಂಗಳೂರು-560010
ದೂರವಾಣಿ: 080-23325335 / 23322790

**ಬಸವ ಮಂಟಪಕ್ಕೆ ಬಸ್ ಮಾರ್ಗ**
ಮೆಜೆಸ್ಟಿಕ್‌ನಿಂದ
251, 80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹ ವಿನ್ನಬಹುದೆ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನ ಸಂಗಯ್ಯ
ನಿಮ್ಮಶರಣ ಬಸವಣ್ಣನ ನಿಲವು.
-ಚೆನ್ನಬಸವಣ್ಣ

# ಚರಿಸಿದ ಜ್ಞಾನ ದೇಗುಲ

## ಪೂಜ್ಯ ಲಿಂಗಾನಂದ ಸ್ವಾಮೀಜಿ

- ವರದಿ : ಬಸವರಸ

ಹರಿಯುವ ನದಿ ಭೂಮಿಯನ್ನು ಬೆಳೆಯಿಂದ ಸಂಪದ್ಭರಿತವಾಗಿ ಮಾಡುವಂತೆ ಜ್ಞಾನಗಂಗೆಯಾಗಿ ನಿರಂತರವಾಗಿ ಸಂಚರಿಸಿ ಜನರಿಗೆ ಜ್ಞಾನ ಸಂಪದವನ್ನು ನೀಡಿದ ಪ್ರವಚನ ತಪಸ್ವಿ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು. 1956ರಲ್ಲಿ ಸನ್ಯಾಸ ದೀಕ್ಷೆಯನ್ನು ಪಡೆದ ಪೂಜ್ಯರು ಒಂದು ದಿನವೂ ತಪ್ಪದೆ ನಗರ, ಪಟ್ಟಣ, ಗ್ರಾಮ ಮಟ್ಟದಲ್ಲೂ ಸಂಚರಿಸಿ ಜನತೆಯಲ್ಲಿ ಅಧ್ಯಾತ್ಮಿಕ ಪ್ರಜ್ಞೆಯನ್ನು ಮಾತ್ರವಲ್ಲದೆ ವೈಚಾರಿಕ ಚಿಂತನೆಯನ್ನು ಉದ್ದೀಪಿಸಿದರು. ಬಾಲ್ಯದಿಂದಲೂ ಮಾರ್ಕ್ಸ್‌ವಾದ, ಕಮ್ಯುನಿಸ್ಟ್ ಚಿಂತನೆಯನ್ನು ರೂಢಿಸಿಕೊಂಡಿದ್ದ ಸಂಗಮೇಶ್ ಬಿ.ಎ.ಆನರ್ಸ್ ಓದುವಾಗ ಆಸ್ತಿಕರಾಗಿ ಪರಿವರ್ತನೆ ಹೊಂದಿ, ಬಸವ ತತ್ತ್ವದ ಪ್ರಭಾವಕ್ಕೆ ಒಳಗಾದುದು ಒಂದು ಪವಾಡವೇ ಸರಿ. ಹೀಗಾಗಿ ಅವರ ಪ್ರವಚನಗಳಲ್ಲಿ ಮಾನವೀಯ ತುಡಿತ, ಮೌಢ್ಯತೆಯ ವಿರುದ್ಧ ಜಾಗೃತಿ, ಸಮಾಜ-ಸ್ವಾಸ್ಥ್ಯದ ಹಂಬಲ, ಸುಂದರ ರಾಷ್ಟ್ರ ನಿರ್ಮಾಣದ ಕನಸು ತುಂಬಿ ತುಳುಕುತ್ತಿದ್ದವು. ರಾಷ್ಟ್ರೀಯ ಬಸವ ದಳವು ಪೂಜ್ಯ ಸ್ವಾಮೀಜಿಯವರ ಚಿಂತನೆಯಲ್ಲಿ ಮೂಡಿ ಬಂದ ಸಂಘಟನೆ." ಎಂದು ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳ ಹನ್ನೊಂದನೆಯ ಲಿಂಗೈಕ್ಯ ಸಂಸ್ಮರಣೆಯ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

"ಮಹಿಳೆಯು ಶಬರಿ ಮಲೈಯಲ್ಲಿ ವಿಗ್ರಹವನ್ನು ಮುಟ್ಟಿದುದೇ ಒಂದು ಘೋರ ಅಪರಾಧವೆಂಬಂತೆ ದೇವಾಲಯ ಸಮಿತಿಯವರು ಇಂಥ ಮುಂದುವರಿದ ಕಾಲದಲ್ಲೂ ಬಡಬಡಿಸುತ್ತ ಕಡ್ಡಿಯನ್ನು ಗುಡ್ಡವಾಗಿ ಮಾಡುತ್ತಿರುವಾಗ, ಪೂಜ್ಯ ಗುರುಗಳು ಮಹಿಳೆಯರಿಗಾಗಿ ಜಗದ್ಗುರು ಪೀಠವನ್ನು ಸ್ಥಾಪಿಸಿದುದು ಅತ್ಯಂತ ದಿಟ್ಟಹೆಜ್ಜೆ.

12ನೆಯ ಶತಮಾನದಲ್ಲಿ ಕ್ರಾಂತಿಪುರುಷ ಬಸವಣ್ಣನವರು ಸ್ತ್ರೀಯರಿಗೆ ಸಮಾನವಾಗಿ ಸಾಮಾಜಿಕ ಮತ್ತು ಧಾರ್ಮಿಕ ಹಕ್ಕುಗಳನ್ನು ಕೊಡಮಾಡಿದ್ದು ನಿಜ; ಅಕ್ಕಮಹಾದೇವಿಯನ್ನು ಆಚಾರ್ಯಪುರುಷಳ ಸ್ಥಾನದಲ್ಲಿ ಗೌರವಿಸಿದ್ದೂ ಸತ್ಯ. ಆದರೆ, ಎಂಟು ನೂರು ವರ್ಷಗಳ ಅವಧಿಯಲ್ಲಿ ಈ ಎಲ್ಲ ಕ್ರಾಂತಿಕಾರಿ ವಿಚಾರಗಳು ಭೂಗತವಾಗಿದ್ದ ಸನ್ನಿವೇಶದಲ್ಲಿ ಪೂಜ್ಯ ಲಿಂಗಾನಂದ ಗುರುಗಳು ಅನುಭವ ಮಂಟಪದ ಮೌಲ್ಯಗಳನ್ನು ಪುನರ್ ಪ್ರತಿಷ್ಠಾಪಿಸುವ ಉದ್ದೇಶದಿಂದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಮಹಿಳಾ ಜಗದ್ಗುರು ಪೀಠ ಸ್ಥಾಪನೆಗೆ ಪ್ರೇರಣೆ ನೀಡಿದರು. ಸಾಂಪ್ರದಾಯಿಕ ಮಠಾಧೀಶರಿಂದ ಮತ್ತು ಅವರ ಹಿಂಬಾಲಕರಿಂದ ಟೀಕೆ-ಟಿಪ್ಪಣಿ, ವಿರೋಧ ಬಂದರೂ ಗುರುಗಳು ಹೆದರದೆ ಬಸವ ಪಥದಲ್ಲಿ ಸಾಗಿದರು. ಹೀಗಾಗಿ ಪೂಜ್ಯ ಗುರುಗಳ ತತ್ತ್ವನಿಷ್ಠೆ ಸತ್ಯ ಪ್ರಿಯತೆ, ಸಮಾಜೋದ್ಧಾರದ ಕಳಕಳಿ ಅನುಕರಣೀಯ." ಎಂದು ಮಾತೆ ಮಹಾದೇವಿಯವರು ವ್ಯಾಖ್ಯಾನಿಸಿದರು.

ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷರಾದ ಎನ್.ಪುಟ್ಟರುದ್ರ ಅವರು ಜ್ಯೋತಿಯನ್ನು ಬೆಳಗಿಸಿ ಉದ್ಘಾಟಿಸಿ, "ಪೂಜ್ಯ ಲಿಂಗಾನಂದ ಸ್ವಾಮಿಗಳು ವೀರ ಸೇನಾನಿ. ಪ್ರವಚನದ ಶಸ್ತ್ರವನ್ನು ಹಿಡಿದು ಜನರ ಮನ ಬುದ್ಧಿಗಳಲ್ಲಿ ನೆಲೆಗೊಂಡಿದ್ದ ಜಾತಿ ಪ್ರಜ್ಞೆ, ಮೂಢ ನಂಬಿಕೆ, ಅಸಮಾನತೆ, ಬೌದ್ಧಿಕ ದಾಸ್ಯ ಎಂಬ ಶತ್ರುಗಳನ್ನು ನಿರ್ಮೂಲನೆ ಮಾಡುತ್ತಿದ್ದ ಕ್ರಾಂತಿಕಾರಿ ಧರ್ಮಬೋಧಕರು. ಅವರ ಕಂಚಿನ ಕಂಠ, ನಿರ್ಭೀತ ನಿಲುವು, ಉಪಕಥೆಗಳೊಡನೆ ಆಳವಾದ ತತ್ತ್ವಜ್ಞಾನವನ್ನು ಪಂಡಿತ ಪಾಮರರೆಲ್ಲರಿಗೂ ಮನದಟ್ಟಾಗುವಂತೆ ವಿವರಿಸುತ್ತಿದ್ದ ರೀತಿ ಅನನ್ಯ. ಅವರು ಸ್ಥಾಪಿಸಿದ ವಿಶ್ವಕಲ್ಯಾಣ ಮಿಷನ್ ಮತ್ತು ರಾಷ್ಟ್ರೀಯ ಬಸವ ದಳಗಳು ವ್ಯಾಪಕವಾಗಿ ಬೆಳೆದಿದ್ದು, ಪೂಜ್ಯರ ಆಶಯಕ್ಕೆ ತಕ್ಕಂತೆ ಕಾರ್ಯ ಮಾಡುವ ಹೊಣೆಯುಳ್ಳದ್ದಾಗಿವೆ." ಎಂದು ಪೂಜ್ಯರನ್ನು ಬಣ್ಣಿಸಿದರು.

ಅತಿಥಿಗಳಾಗಿ ಆಗಮಿಸಿದ್ದ ಎಂ.ಜಯದೇವ್, ಕೆ.ಎಂ.ವೀರೇಶ್, ಸತ್ಯಾನಂದ, ಎಸ್.ಎನ್.ನೀಲಕಂಠ ಪೂಜ್ಯರ ಪ್ರವಚನಗಳಿಂದಾದ ಸಾಮಾಜಿಕ ಪರಿವರ್ತನೆ ಕುರಿತು ಮಾತನಾಡಿದರು. ಆರಂಭದಲ್ಲಿ ಪೂಜ್ಯ ಲಿಂಗಾನಂದ ಮಹಾ ಸ್ವಾಮಿಗಳ ಭಾವಚಿತ್ರದ ಮೇಲೆ ಪುಷ್ಪವೃಷ್ಟಿ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಿ.ಜಯದೇವ ಧ್ವಜಾರೋಹಣ ಮಾಡಿದರು, ಸಿದ್ಧರಾಮಪ್ಪ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು.



# ಬಸವ ಕೇಂದ್ರ - ಗುರು ಬಸವಣ್ಣನವರ ಪವಿತ್ರ ನಾಮಕ್ಕೆ ಚ್ಯುತಿ ತರುವ (ಗೂಂಡಾ) ಪಡೆಯೆ ?

- ಮಾತಾಜಿ

ಬೆಂಗಳೂರು ರಾಷ್ಟ್ರೀಯ ಬಸವ ದಳದ ಅಂಗವಾದ ಗಣಾಚಾರ ದಳದ ತರುಣರು ವಿದ್ಯಾವಂತರು, ಸುಸಂಸ್ಕೃತರು, ಸಂಸ್ಕಾರವಂತರು, ಒಳ್ಳೆಯ ನೌಕರಿಗಳಲ್ಲಿರುವವರು; ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಬೆಂಗಳೂರಿಗೆ ಬಂದು ಉದ್ಯೋಗ ಮಾಡುತ್ತಲಿರುವ ಇವರು ಶಿಸ್ತಿನ ಸಿಪಾಯಿಗಳು. ಶರಣ ಸಂಗಮ-ವಾರದ ಪ್ರಾರ್ಥನೆಯ ನಿರ್ವಹಣೆ, ನಂತರ ಪ್ರಸಾದ ನೀಡುವಿಕೆ, ಸೇವೆ, ಬಸವ ಕಿರಣ ಪಾಕ್ಷಿಕ ಪತ್ರಿಕೆಯ ಜವಾಬ್ದಾರಿ ಎಲ್ಲವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಕಲ್ಯಾಣ ಕಿರಣ ಮಾಸಪತ್ರಿಕೆ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯದಾದರೆ ಬಸವ ಕಿರಣವು ಸ್ವಯಂ ಪ್ರೇರಣೆಯಿಂದ ಗಣಾಚಾರ ದಳದ ಯುವ ಸದಸ್ಯರು ಹೊರಡಿಸುವ ಪತ್ರಿಕೆ. ಹೀಗಾಗಿ ಅದರ ಪ್ರಚಾರದಲ್ಲಿ ಅವರು ಆಸಕ್ತರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಾಣ್ಯ ಬಿಡುಗಡೆ ಸಮಾರಂಭ; ಅತಿಥಿಗಳು ಬಂದು ಕಾರ್ಯಕ್ರಮವು ಇನ್ನೂ ಶುರುವಾಗುವ ಮೊದಲು ಕಾರ್ಯಕರ್ತರು "ಬಸವ ಕಿರಣ" ಪತ್ರಿಕೆಯ ಪ್ರತಿಗಳನ್ನು ಪ್ರಚಾರಾರ್ಥವಾಗಿ ಉಚಿತವಾಗಿ ಹಂಚುತ್ತಿದ್ದರಂತೆ. ಜನರೂ ಸಂತೋಷದಿಂದ ತೆಗೆದುಕೊಳ್ಳುತ್ತಿದ್ದರಂತೆ. ಆಗ ಬಸವ ಕೇಂದ್ರ ಎಂಬ ಚಿತ್ರದುರ್ಗ ಮುರುಘಾಮಠ ಪೋಷಿತ ಸಂಘಟನೆಯ ಕೆಲವರು ಬಂದು ಪತ್ರಿಕೆ ಹಂಚುತ್ತಿದ್ದ ಓರ್ವ ಲೆಕ್ಚರರ್ ಕಾರ್ಯಕರ್ತನಿಗೆ ಹೊಡೆದುದಲ್ಲದೆ ಬಸವ ಕಿರಣ ಪತ್ರಿಕೆಯನ್ನು ಹರಿದು, ಕಾಲಿನಲ್ಲಿ ಹಾಕಿಕೊಂಡು ತುಳಿದರಂತೆ! ಇದು ಗೂಂಡಾ ಮತ್ತು ರಾಕ್ಷಸರ ವರ್ತನೆಯಲ್ಲವೆ ? ಅವರಲ್ಲಿದ್ದ ಮೊಬೈಲ್ ದೂರವಾಣಿಯ ಯುವ ಪ್ರಮುಖರಿಗೆ ಫೋನ್ ಮಾಡಿ "ನಿನ್ನನ್ನು ಕೊಲ್ಲುತ್ತೇವೆ; ತಲೆ ಕತ್ತರಿಸುತ್ತೇವೆ." ಎಂದರಂತೆ. ಆಗ ಆತ ಹೇಳಿದರಂತೆ, "ನೋಡ್ರಿ, ಅಂದಿನ ಸಭೆಗೆ ಬಂದವರಲ್ಲಿ ನಿಮ್ಮ ಸಂಘಟನೆ(ಬಸವ ಕೇಂದ್ರ)ಯ ಜನರಿಗಿಂತ ನಮ್ಮ ಸಂಘಟನೆ (ರಾ.ಬ.ದಳ)ಯವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದರೆ ಸಭೆಯಲ್ಲಿ ಅಶಾಂತಿಯಾಗಬಾರದು, ಅನಾಗರಿಕತ್ವ ಪ್ರದರ್ಶನವಾಗಬಾರದು. ಇದರಿಂದ ಗುರು ಬಸವಣ್ಣನವರ ಹೆಸರಿಗೆ ಕಲಂಕ ಬರಬಾರದು ಎಂದು ನಾವು ತಾಳಿಕೊಂಡು ಸುಮ್ಮನಾದೆವು. ಎರಡನೆಯದಾಗಿ ನಮ್ಮ ಮಾತಾಜಿಯವರು ನಮಗೆ ಒಳ್ಳೆಯ ಸಂಸ್ಕಾರ ನೀಡಿದ್ದಾರೆ. ನಿಮ್ಮಂತೆ ಅವಾಚ್ಯ ಪದ ಬಳಕೆ, ಅಸಭ್ಯ ವರ್ತನೆ ನಮಗೆ ಕಲಿಸಿಲ್ಲ, ನನ್ನನ್ನು ಕೊಲ್ಲುವಿರಾ? ಎಲ್ಲಿಗೆ ಬರಬೇಕು ಹೇಳಿ. ಗಾಂಧಿ ನಗರದಲ್ಲಿರುವ ನಿಮ್ಮ ಮುರುಘಾಕೇಂದ್ರಕ್ಕೆ ಬರಲೆ?" ಎಂದು ಕೇಳಿದರಂತೆ. ಗುರು ಬಸವಣ್ಣನವರ ಪವಿತ್ರ ನಾಮ, ಭಾವಚಿತ್ರ ಇರುವ ಪತ್ರಿಕೆಯನ್ನು ಕಾಲಲ್ಲಿ ಹಾಕಿಕೊಂಡು ತುಳಿಯಬಹುದೆ? ಕನಿಷ್ಠ ಸಂಸ್ಕಾರವನ್ನೂ ಅವರು ಪಡೆದಂತೆ ತೋರದು.

ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದಂತೆ ಚಿತ್ರದುರ್ಗದ ಬೃಹನ್ಮಠದ ಮುರುಘಾ ಶರಣರು ರಿಮೋಟ್ ಕಂಟ್ರೋಲ್ ಇಟ್ಟುಕೊಂಡು ಗೂಂಡಾಗಿರಿ ಮಾಡಿಸುವುದು ಅವರ ಮಠಕ್ಕಾಗಲೀ, ಲಾಂಛನಕ್ಕಾಗಲಿ ಕೀರ್ತಿ ತರುವಂಥದಲ್ಲ. ಪಾಪ-ಪುಣ್ಯಗಳಲ್ಲಿ ಅವರಿಗೆ ನಂಬಿಕೆ ಇಲ್ಲದಿರಬಹುದು. ಪಾಪ- ಪುಣ್ಯಗಳಲ್ಲಿ ನಂಬಿಕೆ ಇದ್ದವರು ಕೆಟ್ಟ ಕೆಲಸಗಳನ್ನು ಮಾಡಿ ಆನಂದ ಪಡುವ ವಿಘ್ನ ಸಂತೋಷಿಗಳಲ್ಲ. ಇವತ್ತಿನ ಲಿಂಗಾಯತ ಸಮಾಜದ ದುಃಸ್ಥಿತಿ ಧಾರ್ಮಿಕವಾಗಿ, ತಾತ್ತ್ವಿಕವಾಗಿ, ಆಚಾರಾತ್ಮಕವಾಗಿ ನೋಡಿದರೆ ಮಠಾಧೀಶರು ಅಕ್ಷರಶಃ ಕಣ್ಣೀರು ಸುರಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜ್ ಒಡೆಯರಾಗಿರಬಹುದು; ಶ್ರೀಮಂತರಾಗಿರಬಹುದು, ರಾಜಕೀಯವಾಗಿ ಮಂತ್ರಿಗಿರಿ ಪಡೆಯುತ್ತಿರಬಹುದು. ಆದರೆ ಆಚಾರ, ಐಕ್ಯತೆ, ತತ್ತ್ವದ ದೃಷ್ಟಿಯಿಂದ ಏನೇನೂ ಇಲ್ಲ. ಮಹಾರಾಷ್ಟ್ರದಲ್ಲಿ ಹಳ್ಳಿ ಹಳ್ಳಿಗಳಲ್ಲಿ ನೂರಕ್ಕೆ ನೂರು ಸಂಖ್ಯೆಯಲ್ಲಿದ್ದಾರೆ. ತಮ್ಮ ಧರ್ಮದ ಬಗ್ಗೆ, 'ತಾವು ಲಿಂಗಾಯತ ಜಾತಿಯವರು' ಎಂದು ಹೇಳುವುದು ಬಿಟ್ಟರೆ ಇನ್ನೇನೇನೂ ಗೊತ್ತಿಲ್ಲ. ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ; ವಿಧಾಯಕವಾಗಿ ಕೆಲಸ ಮಾಡಲು ಸಾವಿರಾರು ಕೈಗಳ ಅಗತ್ಯವಿದೆ. ಹೀಗಿದ್ದಾಗ ಮತ್ತೊಬ್ಬರು ಕೆಲಸ ಮಾಡುವುದನ್ನು ಕೆಡಿಸುವುದು ಇವರಿಗೆ ಸರಿ ಎನಿಸುವುದೆ? ಬಸವ ಕೇಂದ್ರ ಎಂದು

ಗುರು ಬಸವಣ್ಣನವರ ಹೆಸರನ್ನು ಇಟ್ಟುಕೊಂಡ ಸಂಸ್ಥೆಯವರಿಗೆ ತಮ್ಮ ವರ್ತನೆಯಿಂದ ವಿಚಾರಶೀಲರು, ಸಾತ್ವಿಕ ಭಕ್ತರು ಅಸಹ್ಯ ಪಡುವರು ಎಂಬ ತಿಳುವಳಿಕೆ ಬೇಡವೆ?

ಹುಚ್ಚನಂತಿರುವ ಒಬ್ಬ ವಿಭೂತಿ ...ಮಠನನ್ನು ಕಂಡ ಕಂಡಲ್ಲಿ ದೂತನನ್ನಾಗಿ ಅಟ್ಟುವರು. ಅವನು ದೆಹಲಿಗೂ ಬಂದಿದ್ದ ಸಮ್ಮೇಳನದ ಸಮಯದಲ್ಲಿ; ಪ್ರಥಮ ಲಿಂಗಾಯತ ಗಣ ಮೇಳವನ್ನು ಮಹಾರಾಷ್ಟ್ರದ ಅಲ್ಲಮ ಪ್ರಭುಗಿರಿಯಲ್ಲಿ ಮಾಡಿದಾಗ ಕೊಲ್ಹಾಪುರಕ್ಕೂ ಬಂದಿದ್ದ. ಅವನನ್ನು ನೋಡಿದರೆ ಎಂತಹವರಿಗೂ ತಿರಸ್ಕಾರ ಬರುವಂತಿದ್ದು, ಇಂಥವನನ್ನು ಮುಂದೆ ಬಿಟ್ಟರೆ ತಮ್ಮ ಘನತೆ, ಮಠದ ಘನತೆ ಹಾಳಾಗುತ್ತದೆ ಎಂಬ ಸಾಮಾನ್ಯ ಜ್ಞಾನವೂ ಸ್ವಾಮಿಗಳಿಗೆ ಬೇಡವೆ? ಅಥವಾ ಅಂಥ ಹುಚ್ಚನನ್ನೂ ನಿಗ್ರಹಿಸಲಾರದಷ್ಟು ಸ್ವಾಮಿಗಳು ಅಸಮರ್ಥರೆ? ಇಂಥ ಕೆಟ್ಟ ಕೆಲಸಗಳಿಗೆ ಹಣ ಅಪವ್ಯಯ ಮಾಡಲೆಂದೇ ಅವರ ಭಕ್ತರು ಮಠಕ್ಕೆ ಕಾಣಿಕೆ ಕೊಡುವರೆ?

ಬೀದರ್ ಜಿಲ್ಲೆಯ ಹುಮನಾಬಾದಿನಲ್ಲಿ ಪೂಜ್ಯ ಗಂಗಾ ಮಾತಾಜಿಯವರು ಪ್ರವಚನ ಮಾಡುತ್ತಿದ್ದರು. ಒಂದು ದಿನ ಆಗಲೇ ಸಂಜೆ ಆರೂ ಮುಕ್ಕಾಲು ಗಂಟೆ; ಪ್ರವಚನಕ್ಕೆ ಹೊರಡಬೇಕು ಎಂದು ಪೂಜ್ಯ ಗಂಗಾ ಮಾತಾಜಿ ಹೊರಡುವಾಗ, "ಪಿ.ಎಸ್.ಐ ಬಂದು ಮೈಕ್ ಎಲ್ಲಾ ಕಿತ್ತು ಹಾಕಿ, ಪ್ರವಚನ ಮಾಡಕೂಡದು (ಪೋಲೀಸ್ ಮಹಾನಿರೀಕ್ಷರಿಗಿಂತಲೂ ಹೆಚ್ಚಿನ ಅಧಿಕಾರವಾಣಿಯಿಂದ) ನಿಲ್ಲಿಸಿ. .ಎಂದು ಹೇಳಿದ್ದಾನೆ." ಎಂದು ಮೈಕ್ ಹಚ್ಚುವ ಹುಡುಗರು ತಿಳಿಸಿದ್ದಾರೆ. ಪೋಲೀಸ್ ಇಲಾಖೆಯವರನ್ನು ಜೇಬಿಗೆ ಹಾಕಿಕೊಳ್ಳುವ ತಂತ್ರ ಕೆಲವರಿಗೆ ಅದ್ಭುತವಾಗಿ ಸಿದ್ಧಿಸಿರುತ್ತದೆ. ಯಾರನ್ನೂ ಸಂಪರ್ಕಿಸಲೂ ಸಮಯವಿಲ್ಲ. ನಮ್ಮ ದೇಶದ ರಾಜಕೀಯ ವ್ಯವಸ್ಥೆ ಎಷ್ಟರ ಮಟ್ಟಿಗೆ ಕೆಟ್ಟಿದೆ ಎಂದು ವರ್ಣಿಸಲೇ ಸಾಧ್ಯವಿಲ್ಲ. ಮೊದಲು ಕಾಂಗ್ರೆಸ್, ಎದುರು ಪಕ್ಷ ಎರಡೇ ಇದ್ದವು. ಈಗ ನಾಲ್ಕಾರು ಹೋಳು; ಯಾರಾದರೊಬ್ಬರು ಮುಂದೆ ನಿಂತು ಮಾಡಿಸಿದರೆ ಇನ್ನೊಂದು ಪಕ್ಷದ ನೇತಾರರಿಗೆ ಅಸಹನೆ. ಈ ರಾಜಕೀಯ ಜನರ ಸಹವಾಸವೇ ಬೇಡ; ಸಹಜವಾಗಿ ಜ್ಞಾನ ಕೊಡೋಣ ಎಂದರೆ ಅದಕ್ಕೂ ಆ ಜನರು ಬಿಡರು. ಈ ರಾಜಕೀಯ ಕೊಳಕಿಗೆ ಇನ್ನಷ್ಟು ದುರ್ಗಂಧ ಸೇರಿಸಲು ಮುರುಘಾ(ಬಸವ) ಕೇಂದ್ರ ಮುಂತಾದವು ಬೇರೆ. ಅದ್ದೂರಿಯ ಉತ್ಸವಗಳಿಂದ ಧರ್ಮದ ಜ್ಞಾನ ಉಂಟಾಗದು. ಸತತವಾಗಿ ಒಂದು ತಿಂಗಳುಗಟ್ಟಲೆ ಕ್ರಮಬದ್ಧ ಪ್ರವಚನ ಕೇಳಿದರೆ ಮಾತ್ರ ನಿಜ ಅನುಯಾಯಿಗಳು ತಯಾರಾಗುವುದು. ಮುರುಘಾ ಕೇಂದ್ರದಲ್ಲಿ ತಯಾರಾಗಿರುವ ಯಾರಾದರೂ ಈ ವರೆಗೂ ತಿಂಗಳುಗಟ್ಟಳೆ ಕ್ರಮಬದ್ಧ ಜ್ಞಾನ ನೀಡುವ ಪ್ರವಚನ ಮಾಡಿರುವರೆ? ತಮಗೆ ಜ್ಞಾನ ಕೊಡಲು ಆಗದೆ ಇದ್ದಾಗ ಬೇರೆಯವರು ಜ್ಞಾನದಾಸೋಹ ಮಾಡುವುದನ್ನು ಈ ಕೇಂದ್ರಗಳವರು ಕೆಡಿಸಲು ಯತ್ನಿಸುವುದೇಕೆ? ಇದೇ ಚಾಳಿ ಬಸವ ಕೇಂದ್ರಗಳವರು ಮುಂದುವರಿಸಿದರೆ ಅವರ ಮಠದಲ್ಲಿ ತಯಾರಾದ ಸ್ವಾಮಿಗಳನ್ನು ಜನರು ನಾಳೆ ಗೌರವಿಸುವುದನ್ನೇ ಬಿಡುತ್ತಾರೆ. ಅಲ್ಲಿ ತಯಾರಾಗಿರುವವರಲ್ಲಿ ಕೆಲವರು ನಿಜ ಸಾಧಕರು, ಸಾತ್ತ್ವಿಕರು ಇದ್ದಾರೆ ಎಂದೂ ಕೇಳಿದ್ದೇನೆ.

ಧನದ ಮೇಲೆ ಬಂದವರೆಲ್ಲ ಅನುಸರಿಗಳಲ್ಲದೆ
ಆಗುಮಾಡ·ಬಂದವರಲ್ಲ.
ಮನದ ಮೇಲೆ ಬಂದು ನಿಂದು, ಜರಿದು ನುಡಿದು
ಪಥವ ತೋರಬಲ್ಲಡಾತನೆ ಸಂಬಂಧಿ
ಹಾಗಲ್ಲದೆ ಅವರಿಚ್ಛೆಯ ನುಡಿದು ತನ್ನುದರವ ಹೊರೆವ
ಬಚ್ಚಣಿಗಳ ಮೆಚ್ಚುವನೆ ಚನ್ನಮಲ್ಲಿಕಾರ್ಜುನ -ಮ.ಅ.ವ.-131

ಎಂದು ಹೇಳಿದಂತೆ ಅಂಥ ಸಾತ್ವಿಕರಾದರೂ ಮುರುಘಾಸ್ವಾಮಿಗಳ ಆಶ್ರಯದ ಬಸವ ಕೇಂದ್ರಗಳ ದುಂಡಾವೃತ್ತಿಯನ್ನು ಖಂಡಿಸಬೇಕು, ಪ್ರತಿಭಟಿಸಬೇಕು. ಮಹಿಳೆಯರು ಜಂಗಮ ಮೂರ್ತಿಗಳಾಗಿ, ಗುರುಗಳಾಗಿ ತಮ್ಮ ಸಿಬ್ಬಂದಿ, ಸಾಮಗ್ರಿ ಸಹಿತ ಹೊಸ ಊರು, ಹೊಸ ಪ್ರದೇಶಗಳಿಗೆ ಹೋಗಿ ಪ್ರವಚನ ಜ್ಞಾನ ನೀಡಿ, ದೀಕ್ಷೆ ನೀಡಿ, ಜನರನ್ನು ಧರ್ಮವಂತರನ್ನಾಗಿ ಮಾಡುವಾಗ



ಇದೇನನ್ನೂ ಮಾಡಲಾರದೆ ಕೆಡಿಸಲು ಪೋಲೀಸ್ ಬಲ ಉಪಯೋಗಿಸಲು ಸ್ವಾಮಿಗಳಿಗೆ, ಬಸವ ಕೇಂದ್ರಗಳಿಗೆ ನಾಚಿಕೆಯಾಗದೆ?

ನಡೆಯದ ನುಡಿಗಡಣ, ಮಾಡದ ಕಲಿತನ,
ಚಿತ್ರದ ಸತಿಯ ಶೃಂಗಾರವದೇತಕ್ಕೆ ಪ್ರಯೋಜನ?
ಎಲೆಯಿಲ್ಲದ ಮರನು, ಜಲವಿಲ್ಲದ ನದಿ,
ಗುಣವಿಲ್ಲದ ಅವಗುಣಿಯ ಸಂಗವದೇತಕ್ಕೆ ಪ್ರಯೋಜನ?
ದಯವಿಲ್ಲದ ಧರ್ಮ, ಉಭಯವಿಲ್ಲದ ಭಕ್ತಿ
ನಯವಿಲ್ಲದ ಶಬ್ದವದೇತಕ್ಕೆ ಪ್ರಯೋಜನ,
ಎನ್ನ ದೇವ ಚನ್ನಮಲ್ಲಿಕಾರ್ಜುನ - ಮ.ಅ. ವ-129

ಅಂಗುಲಿ ಮಾಲ ತಾನು ಎಷ್ಟು ಜನರನ್ನು ಕೊಂದೆ ಎಂದು ಲೆಕ್ಕವಿಡಲು ಹೆಬ್ಬೆಟ್ಟು ಕತ್ತರಿಸಿ ಕೊರಳಿಗೆ ಸರದಂತೆ ನೇತು ಹಾಕಿಕೊಳ್ಳುತ್ತಿದ್ದನಂತೆ. ಹಾಗೆ ಬಸವ ಕೇಂದ್ರದವರಿಗೆ ತಾವೆಷ್ಟು ಜನರ ಪ್ರವಚನ ಕೆಡಿಸಿದೆವು, ಹೊಡೆದೆವು, ಹೊಡೆಸಿದೆವು ಎಂದು ದಾಖಲೆ ನಿರ್ಮಿಸುವ ಇಷ್ಟವಿದ್ದಂತೆ ತೋರುತ್ತದೆ. ಕೆಲವು ಸ್ಥಳಗಳ ಬಸವ ಕೇಂದ್ರಗಳ ಪದಾಧಿಕಾರಿಗಳು ಸಾತ್ವಿಕರು, ಬಸವ ತತ್ತ್ವನಿಷ್ಠರೂ, ವಿಧಾಯಕ ಚಿಂತಕರೂ ಇದ್ದಾರೆ. ಆದರೆ, ಗೂಂಡಾಗಿರಿ ಮಾಡುವ ಬಸವ ಕೇಂದ್ರಗಳಿಂದ ಸಾತ್ವಿಕ ಮುಂದಾಳುಗಳಿಗೂ ಕೆಟ್ಟ ಹೆಸರು ಬರದೆ ಇರದು.

ಈ ಗೂಂಡಾಗಿರಿಗೆ ಅವರ ನೆಪ "ಲಿಂಗದೇವ." ಇದು ಪ್ರಜಾಪ್ರಭುತ್ವ. ಮೈದಾನವಿರುತ್ತೆ, ವೇದಿಕೆ ಇರುತ್ತೆ. ರಾಜಕೀಯ ಪಕ್ಷಗಳವರು ತಮ್ಮ ತಮ್ಮ ಪಕ್ಷದ ಪ್ರಣಾಳಿಕೆಯನ್ನು ವೇದಿಕೆಯ ಮೇಲೆ ಪ್ರತಿಪಾದಿಸಿ ಜನತೆಯ ಮುಂದೆ ಇಡುವಂತೆ, ಇವರೂ ಪ್ರತಿಪಾದಿಸಲಿ. ರಾಜಕೀಯ ಜನರ ಬಗ್ಗೆ ಜನರಲ್ಲಿ ಒಂದು ವಿಲಕ್ಷಣವಾದ ತಿರಸ್ಕಾರ ಬೆಳೆಯುತ್ತಲಿದೆ. ಆದರೆ ಅಂಥ ರಾಜಕೀಯದವರು ಸಹ ಇನ್ನೊಂದು ಪಾರ್ಟಿಯವರು ತಮ್ಮ ಪಕ್ಷದ ಪ್ರಚಾರ ಮಾಡುತ್ತಿದ್ದರೆ ಕೆಡಿಸಲು ಹೋಗುವುದಿಲ್ಲ. ಅವರಿಗಿಂತಲೂ ಈ ಬಸವ ಕೇಂದ್ರದವರು ಕೀಳೆ?

ಸೋಪು ತಯಾರಕರು, ಬಟ್ಟೆ ವ್ಯಾಪಾರಿಗಳು, ಬೇರೆ ಬೇರೆ ವಸ್ತುಗಳನ್ನು ಮಾರುಕಟ್ಟೆಗೆ ಬಿಡುವವರು ತಮ್ಮ ಕಂಪೆನಿಯ ವಸ್ತು ಎಲ್ಲಕ್ಕಿಂತ ಶ್ರೇಷ್ಠ ಎಂದು ಪ್ರಚಾರ ಮಾಡುತ್ತಾರೆ. ಇತರರ ವಸ್ತುಗಳನ್ನು ಕೊಳ್ಳಬೇಡಿರಿ ಎನ್ನುವುದಿಲ್ಲ. ಆ ಕಂಪೆನಿಗಳವರು ಮಾಡುವ ಪ್ರಚಾರಕ್ಕೆ ಅಡ್ಡಗಾಲು ಹಾಕುವುದಿಲ್ಲ. ಆಯ್ಕೆ ಮಾಡಿಕೊಳ್ಳುವ ಹಕ್ಕು ಮತ್ತು ಸ್ವಾತಂತ್ರ್ಯ ಜನರದ್ದು. ಹಾಗೆ, ತಮಗೆ ಸರಿ ಎನಿಸದ ವಿಚಾರಗಳನ್ನು ಗಂಭೀರವಾಗಿ ಪ್ರತಿಪಾದಿಸಬೇಕು. ಇದು ಬಿಟ್ಟು ಸದಾ ಕೆಡುಕು ಮಾಡಲಿಕ್ಕೇ ಬಸವ ಕೇಂದ್ರದವರು ತಮ್ಮ ಶಕ್ತಿ, ಹಣ ಮತ್ತು ಸಮಯವನ್ನು ಅಪವ್ಯಯ ಮಾಡಿದರೆ ಹೇಗೆ?

ಇದ್ದಕ್ಕಿದ್ದಂತೆಯೇ ಪಿ.ಎಸ್.ಐ ಪ್ರವಚನ ನಿಲ್ಲಿಸಿದಾಗ ಕೇಳುತ್ತಿದ್ದ ಜನರು ರಾತ್ರಿ ಇಡೀ ಅತ್ತವರೆಷ್ಟೋ, ಮಮ್ಮಲ ಮರುಗಿದವರೆಷ್ಟೋ. ಎಂಥಾಜ್ಞಾನ ಸಿಗುವುದನ್ನು ಈ ದುರ್ಜನರು ತಪ್ಪಿಸಿದರು ಎಂದು ಶಾಪ ಹಾಕಿದವರೆಷ್ಟೋ. ಪೂಜ್ಯ ಗಂಗಾ ಮಾತಾಜಿಗೆ ನಾನು ಹೇಳಿದೆ, "ನೀವೇನೂ ಟೆನ್ಷನ್ ಮಾಡಿಕೋ ಬೇಡಿರಿ. ಇಂಥ ದುಷ್ಟ ಸಂಘ -ಸಂಸ್ಥೆಗಳ ನಿಜ ರೂಪ ಜನರಿಗೆ ತಿಳಿಯುತ್ತದೆ. ನೋಡೋಣ." ಎಂದೆ.

ಮರುದಿನ ಬೀದರಿನ ಶರಣರಾದ ಗಂಗ ಶೆಟ್ಟಿ ಪಾಟೀಲ್ ವಕೀಲರು, ಶಿವರಾಜ ಪಾಟೀಲ್ ಅತಿವಾಳ, ಶಿವಶರಣಪ್ಪ ಪಾಟೀಲ್, ರಾಮಲಿಂಗಪ್ಪ ದೇವಣೆ ಮುಂತಾದವರೆಲ್ಲ ಡಿ.ಸಿ, ಎಸ್.ಪಿ ಅವರನ್ನು ಬೀದರದಲ್ಲಿ ಕಂಡು ಪಿ.ಎಸ್.ಐನ ರಾಕ್ಷಸಿ ನಡೆಯನ್ನು ವಿವರಿಸಿ, ಅಲ್ಲಿಂದಲೇ ಆತನಿಗೆ ಫೋನ್ ಮಾಡಿಸಿ, ತೊಂದರೆ ಕೊಡದಿರಲು, ಪ್ರವಚನ ನಿರ್ವಿಘ್ನವಾಗಿ ನಡೆಯುವಂತೆ ಆದೇಶ ನೀಡಿಸಿದರು.

ಅಂದು ಬೆಳಿಗ್ಗೆ ನಾನು ಧರ್ಮಪಿತರಿಗೆ ಸವಾಲು ಹಾಕಿದ್ದೆ. "ನಿನ್ನ ತತ್ತ್ವ, ನೀನು ಕೊಟ್ಟ ಲಿಂಗಾಯತ ಧರ್ಮ ನಶಿಸಿಹೋಗುವುದನ್ನು ಕಂಡು ನೊಂದು, ಪೂಜ್ಯ ಅಪ್ಪಾಜಿ ತಮ್ಮನ್ನು ತಾವು

ಸಮರ್ಪಿಸಿಕೊಂಡು ದುಡಿದರು. ನಾನು, ಗಂಗಾ ಮಾತಾಜಿ, ನಮ್ಮ ಸಂಸ್ಥೆಯ ಇನ್ನಿತರ ಜಂಗಮ ಮೂರ್ತಿಗಳು, ಸಾಧಕ-ಸಾಧಕಿಯರು ಒಂದೂ ದಿವಸ ಬಿಡದೆ ದುಡಿಯುತ್ತಿದ್ದಾರೆ. ಇದು ನಿನಗೆ ಇಷ್ಟವಿಲ್ಲವೆ? ದುಷ್ಟ ಶಕ್ತಿಗಳ ಕೈ ಮೇಲಾಗುವಂತೆ ಅವಕಾಶ ಕೊಡಬಹುದೆ?

ಒಂದು ವೇಳೆ ಈ ಹುಮ್ನಾಬಾದ್ ಪ್ರವಚನ ನಿಂತರೆ, ಮುಂದುವರಿಯದಿದ್ದರೆ ಇನ್ನು ಪ್ರವಚನ ಕಾಯಕವನ್ನೇ ನಿಲ್ಲಿಸುತ್ತೇವೆ. ನಮ್ಮ ಸಂಸ್ಥೆಯ ಯಾರನ್ನೂ ಪ್ರವಚನಕ್ಕೆ ಕಳಿಸುವುದಿಲ್ಲ." ನಾನು ಎಂದೂ ಇಷ್ಟು ಕಟುವಾಗಿ ಅಪ್ಪ ಬಸವಣ್ಣನವರ ಮುಂದೆ ಸವಾಲು ಹಾಕಿರಲಿಲ್ಲ.

ಪ್ರವಚನವು ಬೀದರ್ ಶರಣರ ಪ್ರಯತ್ನದಿಂದ ಸಂಜೆಗೆ ಯಥಾ ಪ್ರಕಾರ ಶುರುವಾದರೆ, ಏನು ಆಶ್ಚರ್ಯ ಅದಕ್ಕೆ ಹೊಸ ಕಳೆ ಬಂದಂತೆ ಹೆಚ್ಚು ಜನ ಸೇರಿದ್ದಲ್ಲದೆ, ದಿನ ದಿನಕ್ಕೂ ಶ್ರೋತೃಗಳು ಹೆಚ್ಚಾಗುತ್ತಾ ಹೋದರು. ಆಗ ನಾವು ವಿಶ್ಲೇಷಿಸಿದೆವು. "ಬಹುಶಃ ಬಸವ ಕೇಂದ್ರದ ದುರ್ಜನರು ನಾವು ಹಾಗೆ ಮಾಡ್ತೀವಿ, ಹೀಗೆ ಮಾಡ್ತೀವಿ" ಎಂದು ಕೊಚ್ಚಿಕೊಳ್ಳುತ್ತಿದ್ದರೇನೂ. ಹೀಗಾಗಿ ಜನರಲ್ಲಿ ಏನಾದರೂ ಆತಂಕವಿತ್ತೇನೊ! ದೃಷ್ಟಿ ತೆಗೆದಂತೆ ಎಂಬ ಗಾದೆ ಮಾತಿನಂತೆ ಆ ವಿಭೂತಿ ಬಡುಕ ಹುಚ್ಚನ ಕಿತಾಪತಿ ನಿಲ್ಲಿಸಲ್ಪಟ್ಟ ಮೇಲೆ ಪ್ರವಚನಕ್ಕೆ ಹೊಸ ಕಳೆ ಬಂದಿತು. ಪ್ರವಚನವು ಯಶಸ್ವಿಯಾಯಿತು. ತನ್ಮೂಲಕ, "ನೀವು ಪ್ರವಚನ ಮಾಡಲೇಬೇಕು." ಎಂದು ಧರ್ಮಪಿತರು ತಮ್ಮ ಇಷ್ಟವನ್ನು ತಿಳಿಸಿದಂತಾಯಿತು. ಬಸವ ಕೇಂದ್ರ, ಅವರ ಜೊತೆ ತೆರೆಯ ಹಿಂದೆ ಕೈ ಜೋಡಿಸಿದ್ದ ಬಸವ ಸೇವಾ ಪ್ರತಿಷ್ಠಾನ - ಎಲ್ಲರ ನಿಜ ರೂಪಗಳೂ ಈ ಘಟನೆಯಿಂದ ಬಯಲಿಗೆ ಬಂದವು.

ಒಂದು ವೇಳೆ ಚಿತ್ರದುರ್ಗದ ಶ್ರೀಗಳು, ಅಮಾಯಕರಂತೆ "ನಮಗೆ ಇದೇನೂ ಗೊತ್ತೇ ಇಲ್ಲ, ಸ್ಥಳೀಯರು ಮಾಡುತ್ತಾರೆ." ಎಂದೇನಾದರೂ ವಿವರಣೆ ಕೊಡಹೋದರೆ ಅವರು ಅವರ ಕೇಂದ್ರಗಳಿಗೆ ಆದೇಶ ಹೊರಡಿಸಬೇಕು. "ವಿಧಾಯಕ ಕೆಲಸ ಮಾಡಿ ನೀವೂ ಹೆಸರು ತೆಗೆದುಕೊಳ್ಳಿ, ನಮ್ಮ ಮಠಕ್ಕೂ ಕೀರ್ತಿ ತನ್ನಿ, ವಿಧ್ವಂಸಕ ಕೆಲಸಗಳಲ್ಲಿ ತಲ್ಲೀನರಾಗಿ ನೀವೂ ಗೂಂಡಾವೃತ್ತಿಯವರು ಎನ್ನಿಸಿಕೊಂಡು, ನಮ್ಮ ಮಠಕ್ಕೂ ಕೆಟ್ಟ ಹೆಸರು ತರಬೇಡಿ.". "ಇಲ್ಲ ಇಂಥದಕ್ಕೆ ನಮ್ಮದೂ ಒಪ್ಪಿಗೆ ಇದೆ. ಅಂಥ ಸಂಘಟನೆಯನ್ನೇ ನಾವು ಬೆಳೆಸುವುದು." ಎನ್ನುವುದಾದರೆ "ಬಸವ ಕೇಂದ್ರ" ದಲ್ಲಿರುವ "ಬಸವ" ಎಂಬ ಪವಿತ್ರ ನಾಮವನ್ನು ತೆಗೆದು ಬೇರೆನನ್ನಾದರೂ ಇಟ್ಟುಕೊಳ್ಳಿರಿ. ಏಕೆಂದರೆ ಇಂಥ ದುಷ್ಟ ಕೆಲಸಗಳನ್ನು ಟೀಕಿಸುವಾಗ ಅಂಥ ಸಂಸ್ಥೆಯ ಹೆಸರು ಹೇಳುವಾಗ ಧರ್ಮಪಿತರ ಮಂತ್ರ ಸ್ವರೂಪಿ ಪವಿತ್ರ ನಾಮವನ್ನು ಬಳಸಲು ನಮಗೆ ಮಾನಸಿಕ ಹಿಂಸೆಯಾಗುತ್ತದೆ.

---

**ವಚನ ಪ್ರಭೆ :** [ಒಬ್ಬ ಶರಣೆಯ ಬೇಡಿಕೆ ಮೇರೆಗೆ]

## ಅಲ್ಲಮ ಪ್ರಭು ವಚನ - ವ್ಯಾಖ್ಯಾನ

- ಮಾತಾಜಿ

ಅರಸುವ ಬಳ್ಳಿ ಕಾಲ ಸುತ್ತಿತ್ತೆಂಬಂತೆ,
ಬಯಸುವ ಬಯಕೆ ಕೈಸಾರಿದಂತೆ,
ಬಡವ ನಿಧಾನವನೆಡಹಿ ಕಂಡಂತೆ
ನಾನರಸುತ್ತಲರಸುತ್ತ ಬಂದು ಭಾವಕ್ಕಗಮ್ಯವಾದ ಮೂರ್ತಿಯ ಕಂಡೆ ನೋಡಾ.
ಎನ್ನ ಅರಿವಿನ ಹರಿವ ಕಂಡೆ ನೋಡಾ.
ಎನ್ನ ಒಳಹೊರಗೆ ಎಡದೆರಹಿಲ್ಲದೆ ಥಳಥಳಿಸಿ ಬೆಳಗಿ
ಹೊಳೆವುತ್ತಿಪ್ಪ ಅಖಂಡ ಜ್ಯೋತಿಯ ಕಂಡೆ ನೋಡಾ.
ಕುರುಹಳಿದ ಕರಸ್ಥಲದ ನಿಬ್ಬೆರಗಿನ ನೋಟದ
ಎನ್ನ ಪರಮ ಗುರುವ ಕಂಡು ಬದುಕಿದೆನು ಕಾಣಾ ಗುಹೇಶ್ವರಾ.

-ಅಲ್ಲಮ ಪ್ರಭುದೇವರ ವಚನ-753



ವೀರ ವೈರಾಗ್ಯ ನಿಧಿ ಅಲ್ಲಮ ಪ್ರಭುದೇವರ ಈ ವಚನವು ಬಹಳ ಮಹತ್ವಪೂರ್ಣವಾದುದು. ವಿಚಾರವಾದಿಯೂ, ವೈರಾಗ್ಯ ಪ್ರೇರಿತರೂ ಆದ ಅಲ್ಲಮ ಪ್ರಭು ಸತ್ಯಾನ್ವೇಷಕರಾಗಿ ಬಹಳ ಚಿಂತನೆಯನ್ನು ಮಾಡುತ್ತ ಒಂದು ಮಾರ್ಗವನ್ನು, ಮಾರ್ಗದರ್ಶಕ ಗುರುವನ್ನು ಅರಸುತ್ತ ಸಂಚರಿಸುತ್ತಿರುತ್ತಾರೆ. ಬಳ್ಳಿಗಾವಿ (ಶಿವಮೊಗ್ಗ ಜಿಲ್ಲೆಯ ಶಿರಾಳ ಕೊಪ್ಪ ತಾಲ್ಲೋಕಿನಲ್ಲಿರುವ ಕುಗ್ರಾಮ) ಆಗ ಶಿಕ್ಷಣ ಕೇಂದ್ರವಾಗಿದ್ದು ಶೈವ ಗುರುಕುಲದಲ್ಲಿ ಆಗಮ ಪುರಾಣಗಳು, ತಂತ್ರ ವಿದ್ಯೆಗಳೂ ಕಲಿಸಲ್ಪಡುತ್ತಿದ್ದವು. ಸಾಧಕ ಹೃದಯಿಯಾದ ಅಲ್ಲಮ ಪ್ರಭುವಿಗೆ ಗುರುಕುಲದ ಯಾಂತ್ರಿಕ ಶಿಕ್ಷಣದಿಂದ ಸಮಾಧಾನ-ಸಂತೃಪ್ತಿ ದೊರಕದೆ ಅವರು ನಿಜಗುರುವಿಗಾಗಿ ಹಂಬಲಿಸುತ್ತಿದ್ದರು. ಮಲೆನಾಡಿನ ದಟ್ಟ ಅರಣ್ಯದ ಮಧ್ಯೆ ಸಂಚರಿಸುತ್ತಿರುವಾಗ ಮುಳ್ಳಿನ ಪೊದೆಗಳಿಂದ ಆವೃತವಾದ ಮಣ್ಣಿನ ದಿಬ್ಬವೊಂದು ಕಂಡಿತು. ಕುತೂಹಲಗೊಂಡು ಹುಡುಕಿದಾಗ ಅದರ ಕೆಳಗೆ ಒಂದು ಗವಿಯೂ, ಒಳಗೆ ಹೋಗಲು ಚಿಕ್ಕ ದ್ವಾರವು ಕಂಡಿತು. ಒಳಗೆ ಪ್ರವೇಶಿಸಿದಾಗ ಒಳಗೆ ಸಮಾಧಿಸ್ತರಾಗಿದ್ದ ಅನಿಮಿಷಯೋಗಿಯು ತ್ರಾಟಕಯೋಗದಲ್ಲಿ ಮಗ್ನರಾಗಿದ್ದುದು, ಅಂಗೈಯಲ್ಲಿ ಹೊಳಪಿನ ಕಂಥೆಯುಳ್ಳ ಇಷ್ಟಲಿಂಗವು ಕಾಣಬಂದಿತು. ಕಂಡು ಪುಳಕಿತರಾದ ಅಲ್ಲಮಪ್ರಭುವು ಆ ಇಷ್ಟಲಿಂಗವನ್ನು ತಾವು ಗುರುವಿನ ಎದುರು ಕುಳಿತು ತಮ್ಮ ಅಂಗೈಗೆ ಇರಿಸಿಕೊಂಡರು. ಅದನ್ನು ಕೈಯಲ್ಲಿ ಇಟ್ಟುಕೊಳ್ಳುತ್ತಲೇ ಅವರಿಗೆ ಮಿಂಚು ಹೊಡೆದಂತೆ ರೋಮಾಂಚನವಾಯಿತು. ಈವರೆಗೂ ಅವರು ಅರಸುತ್ತಿದ್ದಂತಹ ಗುರುವು ಮತ್ತು ಮಾರ್ಗವು ಸಿಕ್ಕಿದಂತಾಯಿತು ಎಂದು ಹರ್ಷಭರಿತರಾದರು. ಅದನ್ನು ಈ ವಚನದಲ್ಲಿ ಬಿಂಬಿಸಿದ್ದಾರೆ.

ಗಿಡ ಮೂಲಿಕೆಗಳಿಂದ ಔಷಧಿ ತಯಾರಿಸುವ ವೈದ್ಯರು ಅವುಗಳನ್ನು ಹುಡುಕಿಕೊಂಡು ಗುಡ್ಡ ಅರಣ್ಯಗಳಲ್ಲಿ ತಿರುಗುತ್ತಾರೆ. ಕೆಲವಂತೂ ತುಂಬಾ ಅಪರೂಪದ ಮೂಲಿಕೆಗಳಿರುತ್ತವೆ. ಅಂಥವನ್ನು ಹುಡುಕುತ್ತ ಶ್ರಮಿಸುವಾಗ ಯಾವುದೋ ಒಂದು ಬಳ್ಳಿ ಕಾಲಿಗೆ ತೊಡರಿಕೊಳ್ಳುತ್ತದೆ. ತಿರುಗಿ ತಿರುಗಿ ದಣಿದವನಿಗೆ ಅಸಹನೆ, ನಿರಾಶೆ ಕಾಡುತ್ತ ಆ ಬಳ್ಳಿಯನ್ನು ಕಿತ್ತೆಸೆಯಬೇಕು ಎಂಬ ಭಾವ ಉಂಟಾಗಿ, ಬಗ್ಗಿದಾಗ ಅವನು ಹುಡುಕುತ್ತಿರುವ ಮೂಲಿಕೆಯೇ ಅದಾಗಿದ್ದರೆ ಹೇಗನ್ನಿಸಬಹುದು? ಯಾವುದೋ ಒಂದು ವಸ್ತುವನ್ನು ಪಡೆಯಲು ಅಥವಾ ಸಾಧಿಸಲು ಶ್ರಮಿಸುವ ಸಾಧಕನಿಗೆ ತಾನಾಗಿಯೇ ಅದು ಒಲಿದು ಬಂದು ಬಿಟ್ಟರೆ? ಬಡತನದಲ್ಲಿ ಸಾಕಷ್ಟು ನೊಂದು ಬೆಂದು ಬದುಕು ಸಾಕೇ ಸಾಕು ಎಂದು ನಿರಾಶನಾಗಿ ಹೆಜ್ಜೆ ಎತ್ತಿಡಲೂ ಸಾಧ್ಯವಿಲ್ಲದಷ್ಟು ಹತಚೇತನನಾಗಿ ಇರುವವನು ಎಡವುತ್ತಾನೆ; ಅವನು ಎಡವಿದ್ದು ಏನನ್ನು ಎಂದು ನೋಡಿದಾಗ ಅದು ಬಂಗಾರದ ನಾಣ್ಯಗಳಿಂದ ತುಂಬಿದ ಕೊಡವೇ ಆಗಿದ್ದರೆ ಎಷ್ಟು ಸಂತೋಷವಾಗಲಿಕ್ಕಿಲ್ಲ? ಗುರುವನ್ನು ಅರಸುತ್ತ ಬಂದ ಅಲ್ಲಮ ಪ್ರಭು ಅವರ ನಿರೀಕ್ಷೆಗೂ ಮೀರಿದ ನಿಧಿಯನ್ನು ಕಂಡುಬಿಟ್ಟರು. ಭಾವಕ್ಕೆ ಅಗಮ್ಯವಾದವು ಇಲ್ಲಿ ಎರಡು ವಸ್ತುಗಳು 1.ಮಹಾಮಹಿಮನಾದ ಗುರು 2. ಅಮೂಲ್ಯ ಕುರುಹಾದ ಇಷ್ಟಲಿಂಗ. ಅಲ್ಲಮ ಪ್ರಭುವಿನ ಅರಿವು ಯಾವ ದಿಕ್ಕಿನಲ್ಲಿ ಹರಿಯುತ್ತಿತ್ತೋ ಅದೇ ವಿಸ್ತಾರಗೊಂಡು ನಿಂತ ಸಮುದ್ರದಂತೆ, ಗುರು ಮತ್ತು ಲಿಂಗ ಎರಡೂ ಒಮ್ಮೆಗೇ ಲಭ್ಯವಾಗಿವೆ. ಅವರ ಒಳ ಹೊರಗೆ ಸರ್ವಾಂಗದಲ್ಲಿ ಪರಮ ಪ್ರಕಾಶವಾಗಿ ಬೆಳಗುತ್ತಿದ್ದ ದೇವ ಚೈತನ್ಯ ಸಾಕಾರಗೊಂಡು ಗುರು ಅನಿಮಿಷಯ್ಯ ಮತ್ತು ಇಷ್ಟಲಿಂಗ ರೂಪದಲ್ಲಿ ಪ್ರಕಾಶಿಸುತ್ತಿವೆ.

ಅನಿಮಿಷಯ್ಯನು ತ್ರಾಟಕಯೋಗ ಮಗ್ನನಾಗಿದ್ದಾನೆ. ಕುರುಹಿನಲ್ಲಿ ದೃಷ್ಟಿ ನಟ್ಟಿದ್ದರೂ, ಕರಸ್ಥಲದ ಆ ಜ್ಯೋತಿಯಲ್ಲಿ ನಿಬ್ಬೆರಗಿನ ನೋಟವನ್ನು ಹೊಂದಿದ್ದಾನೆ. ಆಗಲೇ ಮಾತು ನಿಂತ ಸ್ಥಿತಿ ಆತನದು. ಆತನ ಕಂಗಳಿನ ಪ್ರಭೆ ಅಲ್ಲಮರ ಮೇಲೆ ಬೀಳುತ್ತದೆ. ಅದ್ಭುತವಾದ ವಿದ್ಯುತ್ ಸಂಚಾರವಾಗುತ್ತದೆ. ಆ ದಿವ್ಯಾನಂದದಲ್ಲಿ ಮಿಂದು ಅಲ್ಲಮ ಪ್ರಭುವು ಬರೆದ ವಚನವಿದು.

* * *



## ಗುರು ಚರಣಕೆ ನುಡಿ ನಮನ

### ಲಿಂ|| ಪೂಜ್ಯ ಶ್ರೀಮನ್ ನಿರಂಜನ
### ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು

15-9-1131 ರಿಂದ 30-6-1995

ಶ್ರೀಗುರು ರೂಪಾಗಿ ಜಂಗಮ ಜ್ಯೋತಿಯಾಗಿ
ಲೋಕ ಕಲ್ಯಾಣವ ಮಾಡಿದ ಶ್ರೀಗುರು
ಲಿಂಗಾನಂದರ ನೆನೆಯೋಣ, ಶ್ರೀಗುರು ಲಿಂಗಾನಂದರ ನೆನೆಯೋಣ ||ಲಿಂ ನೆನೆಯೋಣ||

ಬಸವ ಗುರುವು ತಾನು ಪರಮ ಕರುಣೆಯ ತೋರಿ
ಜಗದ ಉದ್ಧಾರಕ್ಕೆ ಕಳುಹಿದ ಶ್ರೀಗುರು ||ಲಿಂ ನೆನೆಯೋಣ||

ಮನುಗೂಳಿಯೊಳು ಜನಿಸಿ ಕಲ್ಯಾಣಗುಣ ಬೆಳೆಸಿ
ವಿಶ್ವ ಕಲ್ಯಾಣದ ಚಿಂತನೆಯ ಮಾಡಿದ ||ಲಿಂ ನೆನೆಯೋಣ||

ಬಸವ ತತ್ತ್ವಸುಧೆಯ ಜಗಕ್ಕೆಲ್ಲ ಚೆಲ್ಲುತ್ತ
ಪ್ರವಚನ ಕಾಯಕ ಕೈಗೊಂಡ ಜಂಗಮ ||ಲಿಂ ನೆನೆಯೋಣ||

ಅರಿವಿನ ತಂಗಾಳಿಯಾಗಿ ಬೀಸುತ್ತ ಬಂದು
ಮರೆವಿನ ಮಾನವರ ಹೃದಯವ ಅರಳಿಸಿದ ||ಲಿಂ ನೆನೆಯೋಣ||

ಅಜ್ಞಾನ ತಿಮಿರದಿ ಗುರಿ ತಪ್ಪಿ ನಡೆವವಗೆ
ಅರಿವಿನ ಕಣ್ಣಕೊಟ್ಟು ನಡೆಸಿದ ಶ್ರೀಗುರು ||ಲಿಂ ನೆನೆಯೋಣ||

ಜಾತಿ ಭೇದವ ತೊರೆದು ಮೇಲು ಕೀಳನು ಜರಿದು
ಎಲ್ಲರು ನನ್ನವರು ಎಂದಪ್ಪಿಕೊಂಡಂಥ ||ಲಿಂ ನೆನೆಯೋಣ||

ಕೂಡಲದ ಸಂಗಮದಿ ಶರಣ ಮೇಳವ ಮಾಡಿ
ಶರಣರ ಸಂಕುಲ ನಿರ್ಮಿಸಿದ ನಿಜ ಗುರು ||ಲಿಂ ನೆನೆಯೋಣ||

ಜಗದ್ಗುರು ಪೀಠದಿ ಮಾತೆಯ ಕೂರಿಸಿ
ಸ್ತ್ರೀಕುಲದ ಹಿರಿಮೆಯನ್ನು ಉತ್ತುಂಗಕ್ಕೇರಿಸಿದ ||ಲಿಂ ನೆನೆಯೋಣ||

ಸಚ್ಚಿದಾನಂದ ಪ್ರಿಯೆ ಮಾತೆಯ ಗುರುವಾಗಿ
ಬಸವಾತ್ಮಜೆಯೆಂಬ ಅಮೂಲ್ಯ ನಿಧಿಯ ಕೊಟ್ಟ ||ಲಿಂ ನೆನೆಯೋಣ||

– ಶಾರದಾ ಬಸವರಾಜು, ರಾ.ಬ.ದಳ, ಭದ್ರಾವತಿ

ಸಾತ್ವಿಕ ಜನಗಳ ಮನವ ನೋಯಿಸುತ್ತ
ಪರರ ಮನೆಗಳ ಘಾತವ ಮಾಡುತ್ತ
ಗುರು ಜಂಗಮರ ಪಾದ ಪೂಜೆಯ ಮಾಡಿದೊಡೆ
ಬಸವ ಗುರು ಪೂಜೆ, ಲಿಂಗಪೂಜೆಯ ಮಾಡಿದೊಡೆ
ಬಸವ ತತ್ತ್ವಗಳ ಬೋಧೆಯ ಮಾಡಿದೊಡೆ
ಬಸವ ಕಾರುಣ್ಯ ಲಿಂಗದೊಲುಮೆ ಬಯಸಿದೊಡೆ
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವೆ
ಬಸವ ಗುರುವಿನ ತತ್ವ ಬಾಳಲ್ಲಿ ಬೆಳಗದಿದ್ದೊಡೆ
ನಿನ್ನೊಲುಮೆ ದೊರಕದೆಂದು ಅರಿಯಬೇಕಯ್ಯ.

– ಬಸವ ಕಂದ, ರಾ.ಬ.ದಳ, ಮೈಸೂರು



## ಬಸವ ನಾಣ್ಯ ಬಿಡುಗಡೆಯ ಪುರಾಣ

-ಮಾತಾಜಿ

ಶರಣ(ಶನಿ)ವಾರ ದಿ.17-6-2006ರಂದು ಬೆಂಗಳೂರಿನಿಂದ ಬಳ್ಳಾರಿಯ ಕಡೆಗೆ ಪ್ರಯಾಣ ಮಾಡುತ್ತಿದ್ದೆ. ಮರು ದಿವಸ ಬಳ್ಳಾರಿಯ ರಾಘವ ಕಲಾಮಂದಿರದಲ್ಲಿ ಬೆಳಗಾಂವ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ.ಕೆ.ಬಸವರಾಜ್ ಅವರ ಮಕ್ಕಳಾದ ಬಸವ ಕಿರಣ ಮತ್ತು ಶರಣ ಪ್ರಸಾದರ ವಿವಾಹ ಕಾರ್ಯಕ್ರಮ. ಅದು ಕೇವಲ ಒಂದು ವಿವಾಹ, ಒಂದು ಕೌಟುಂಬಿಕ ಮಟ್ಟದ ಕಾರ್ಯಕ್ರಮವಾಗದೆ ವಿಶೇಷ ಶರಣ ಸಮಾಗಮ, ಒಂದು ಸಮ್ಮೇಳನದಂತೆಯೇ ಏರ್ಪಾಡಾಗಿತ್ತು. ಅತ್ಯಂತ ಸುಂದರವೂ ಅರ್ಥಗರ್ಭಿತವೂ ಆದ ಆಹ್ವಾನ ಪತ್ರವನ್ನು ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಮುದ್ರಿಸಿದ್ದರು. ಪ್ರಯಾಣದಲ್ಲಿರುವಾಗ ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರ ಕರೆ ನನ್ನ ಜಂಗಮ ದೂರವಾಣಿಗೆ ಬಂದಿತು.

"ಸಂತೋಷದ ಸುದ್ದಿ; ಬಸವ ನಾಣ್ಯದ ಬಿಡುಗಡೆ ಇದೆ." ಎಂದರು.

"ಬಹಳ ಸಂತೋಷ; ಚೆನ್ನಾಗಿ ಆಗಲಿ." ಎಂದೆ.

"ನೀವು ಇದ್ದರೆ ಚೆನ್ನಾಗಿರುತ್ತದೆ. ಆದರೆ ಯಾರಿಗೂ ವೇದಿಕೆ ಇಲ್ಲ; ಸುತ್ತೂರು ಜಗದ್ಗುರುಗಳಂತಹವರಿಗೂ ಅಷ್ಟೆ. ವೇದಿಕೆ ಮೇಲೆ ಒಟ್ಟು 10 ಜನರಿಗೆ ಮಾತ್ರ ಅವಕಾಶ. ಪ್ರಧಾನಿ ಸೇರಿ 8 ಜನ ರಾಜಕೀಯ ಧುರೀಣರು, ನಾನು (ಜತ್ತಿ) ಮತ್ತು ವಿಶ್ವನಾಥ ರೆಡ್ಡಿ; ಇಷ್ಟೇ ಜನಕ್ಕೆ ಅವಕಾಶ." ಎಂದರು ಜತ್ತಿಯವರು.

ಈ ಆಹ್ವಾನದ ಪರಿ ನೋಡಿ ನನಗೆ ನಗು ಬಂದಿತು. "ಕರೆಯುವಂತಿರಬೇಕು, ಕರೆಯದಂತಿರಬೇಕು." ಎಂಬ ತಂತ್ರ ಮನವರಿಕೆಯಾಯಿತು. ನಾಣ್ಯ ಬಿಡುಗಡೆಯ ಘೋಷಣೆ ಮಾಡಲು ಕಾರ್ಯಕ್ರಮ 2005ರ ಆಗಸ್ಟ್ 6 ರಂದು ಏರ್ಪಾಡಾದಾಗ ನಮ್ಮನ್ನು ಆಹ್ವಾನಿಸಿರಲಿಲ್ಲ. ಈ ಸಂಗತಿಗೆ ಪ್ರೇರಣೆ ನೀಡಿದವರೇ ನಾವು ಎಂಬುದು ಅನೇಕರಿಗೆ ತಿಳಿದಿದ್ದರಿಂದ "ಮಾತಾಜಿಯವರನ್ನು ಏಕೆ ಆಹ್ವಾನಿಸಿಲ್ಲ?" ಎಂದು ಅವರುಗಳು ಕೇಳಿದಾಗ ಅರವಿಂದ ಜತ್ತಿಯವರು "ಆಹ್ವಾನಿಸಿದ್ದೆವು, ಅವರೇ ಬಂದಿಲ್ಲ." ಎಂದು ಸುಳ್ಳು ಹೇಳಿದ್ದು ಹಲವರಿಂದ ನಮಗೆ ತಿಳಿಯಿತು. ಇದನ್ನು ಕಲ್ಯಾಣ ಕಿರಣದಲ್ಲಿ ಬರೆದಾಗ, ಬಸವ ಪಥ ಎಂಬ ಬಸವ ಸಮಿತಿಯ ಮಾಸ ಪತ್ರಿಕೆಯಲ್ಲಿ "ನಾವು ಯಾರನ್ನೂ ಆಹ್ವಾನಿಸಿರಲಿಲ್ಲ; ಬಂದ (ಕೆಲವು) ಸ್ವಾಮಿಗಳು ಅವರೇ ಸ್ವಯಂ ಪ್ರೇರಣೆಯಿಂದ ಭಾಗವಹಿಸಿದ್ದರು." ಎಂದು ಬರೆದರು. ಆಹ್ವಾನಿಸದೆ ಯಾರಾದರೂ ಏಕೆ ಬರುತ್ತಾರೆ ? ಈ ಸಲ ಪುನಃ ಜನರಿಂದ ಅನ್ನಿಸಿಕೊಳ್ಳಬಾರದು ಎಂದು ಅಂತೂ ಕರೆದಂತೆ ಮಾಡಿದರು.

ಉಳಿದ ಸ್ವಾಮಿಗಳಿಗೂ ಹೀಗೇ ಕರೆದಿದ್ದರೋ! "ದಯವಿಟ್ಟು ವೇದಿಕೆ ಸಿಗದು." ಎಂದು ಮೊದಲೇ ಸೂಚನೆ ನೀಡಿಯೇ ಕರೆದಿದ್ದರೋ ? ಅವರ ಮನೋಭಾವ ಅರ್ಥವಾಯಿತು. "ಏನು ಮಾಡುವುದು ? ದಿ.17ರಿಂದ 27ರವರೆಗೆ ವಿಪರೀತ ಒತ್ತಡದ ಕಾರ್ಯಕ್ರಮ ಹಾಕಿಕೊಂಡು ಬಿಟ್ಟಿದ್ದೇನೆ. ನಿಮ್ಮ ಕಾರ್ಯಕ್ರಮ ಚೆನ್ನಾಗಿ ಆಗಲಿ." ಎಂದು ಶುಭ ಹಾರೈಸಿದೆ.

ಬಳ್ಳಾರಿ ನಗರ ಪ್ರವೇಶಿಸಿ ಗಡಿಯಾರ ಕಂಭದ ಬಳಿ ನಮ್ಮ ವಾಹನ ಹೋಗುವಾಗ ಶ್ರೀರಾಜಶೇಖರನ್ ಅವರ ಫೋನ್ ಬಂದಿತು. "ಶುಕ್ರವಾರ ದಿ.23 ರಂದು ನಾಣ್ಯ ಬಿಡುಗಡೆ. ಪ್ರಧಾನಿ ಬರಲು ಒಪ್ಪಿದ್ದಾರೆ. ಇನ್ನು ವಿಳಂಬ ಮಾಡಬೇಡಿ ಎಂದು ಚಿದಂಬರಂ ಹೇಳಿದ್ದಾರೆ. ಸಿದ್ಧತೆಗೆ ಸಮಯ ಕಮ್ಮಿಯಾಯ್ತು. ಆಹ್ವಾನಿಸಲು ಅರವಿಂದ ಜತ್ತಿಯವರಿಗೆ ಹೇಳಿದ್ದೆ" ಎಂದರು.

"ಫೋನ್ ಮಾಡಿದ್ದರು. ಆದರೆ ನಾನು ಊರಲ್ಲಿ ಇರುವುದಿಲ್ಲ. ಈಗ ಬಳ್ಳಾರಿಯಲ್ಲಿ ಇದ್ದೇನೆ. 27ನೇ ತಾರೀಖು ಬೆಂಗಳೂರಿಗೆ ಬರುತ್ತೇನೆ."

"ಆಗಲಿ, ನೀವು ಇದ್ದರೆ ಚೆನ್ನಾಗಿತ್ತು. ನೀವೇ ಇದಕ್ಕೆ ಕಾರಣ" ಎಂದರು.

"ನಾವೇನು, ಬರೀ ಮೈಕಲ್ಲಿ ಮಾತನಾಡುವವರು. ನಿಮಗೆ ಹೇಳಿದೆವು. ನೀವು ತಾನೇ ಮಾಡಿಸಿದ್ದು."

ಎಂದು ಹೇಳಿದೆ. "ಅಹುದು, ನೀವು ಹೇಳಿದ್ದರಿಂದ ತಾನೇ ಪ್ರೇರಣೆ ಸಿಕ್ಕಿದ್ದು." ನನಗೆ ಆಶ್ಚರ್ಯದ ಸಂಗತಿ ಎನ್ನಿಸುವುದು ಏನೆಂದರೆ ದಿ.17-6-2006ರಂದು ಈ ರೀತಿ ಹೇಳಿದ್ದಲ್ಲದೆ, ದಿ.23-6-2006ರಂದು ಬೆಳಿಗ್ಗೆ ಸಹ ಫೋನ್ ಮಾಡಿ "ನೀವು ಇದ್ದರೆ ಚೆನ್ನಾಗಿತ್ತು. ಈ ಕಾರ್ಯಕ್ಕೆ ನೀವೇ ಪ್ರೇರಕರು." ಎಂದರು. ಗಾಂಧಿವಾದಿಯಾದ ಅವರ ಅಂತರಾತ್ಮ ಬಹುಶಃ ಚುಚ್ಚುತ್ತಿತ್ತೋ ಏನೊ! ಆದರೆ ವೇದಿಕೆಯ ಮೇಲೆ ಆ ರೀತಿ ಹೇಳುವ ಪ್ರಾಮಾಣಿಕತೆ ಇಬ್ಬರಲ್ಲೂ ಇಲ್ಲ. 2005 ಫೆಬ್ರವರಿ' ತಿಂಗಳಿನಲ್ಲಿ ಯಾರೋ ಶಿವಶರಣಪ್ಪ ಎನ್ನುವವರು ಪತ್ರ ಬರೆದು ನಾಣ್ಯದ ಬಗ್ಗೆ ಪ್ರಸ್ತಾಪಿಸಿದಾಗ ಪ್ರೇರಣೆಯಾಗಿ ಬಸವ ಸಮಿತಿಯವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದುದಾಗಿ ಸಭೆಯಲ್ಲಿ ಹೇಳಿದರಂತೆ.

ನಿಜ ಸಂಗತಿ ಎಂದರೆ, 2005ರ ಶರಣ ಮೇಳದಲ್ಲಿ ನಾವು ಹೇಳಿದ ಮೇಲೆ ರಾಜಶೇಖರನ್ ಬಸವ ಸಮಿತಿಯವರಿಂದ ಪತ್ರ ತರಿಸಿಕೊಂಡು ಅದನ್ನು ಪಿ.ಚಿದಂಬರಂ ಅವರ ಗಮನಕ್ಕೆ ತಂದರು ಎಂಬುದು ಕಳೆದ ವರ್ಷ ನಾವು ದೆಹಲಿಯಲ್ಲಿ ಇದ್ದಾಗಲೇ ಅಧಿಕೃತ ಮೂಲಗಳಿಂದಲೇ ತಿಳಿದಿತ್ತು. ಪ್ರಸ್ತಾಪ ಮುಂದಿಟ್ಟ ನಮ್ಮನ್ನೇ ಕೇಳಿ ಪತ್ರ ತರಿಸಿಕೊಳ್ಳಬಹುದಿತ್ತಲ್ಲವೆ? ಕೀರ್ತಿ ಬರುವುದಿದ್ದರೆ ಅದು ಅರವಿಂದ ಜತ್ತಿಯವರು ಮತ್ತು ಬಸವ ಸಮಿತಿಗೆ ಬರಲಿ ಎಂಬುದು ರಾಜಶೇಖರನ್ ಅವರ ಆಶಯವಾಗಿದ್ದರಿಂದ ಕೇಳಿ ಪತ್ರ ತರಿಸಿಕೊಂಡು ಕೆಲಸ ಮಾಡಿಸಿದ್ದಾರೆ. ಬಸವ ನಾಣ್ಯ ಆಯಿತಲ್ಲ ಎಂಬ ಸಂತೋಷ ನಮಗಿದೆ. ಆದರೆ ಈ ಅಪ್ರಾಮಾಣಿಕತನ ಏಕೆ? ಫೋನಲ್ಲಿ ಮಾತನಾಡುವಾಗ "ನೀವೇ ಕಾರಣರು, ಪ್ರೇರಕರು. ನಿಮ್ಮನ್ನು ಬಿಟ್ಟು ಮಾಡುವುದಕ್ಕೆ ಬೇಸರ ಎನಿಸುತ್ತದೆ." ಎಂದು ಹೇಳುವ ಅಗತ್ಯವಾದರೂ ಏನು ? ನಾವು ಎಂದೂ ಬಸವ ಸಮಿತಿ ನಮ್ಮನ್ನು ಪುರಸ್ಕರಿಸುತ್ತದೆ ಎಂಭ ಬಗ್ಗೆ ಕನಸು ಕಂಡಿಲ್ಲ.

ದಿ.17-6-2006 ಬಳ್ಳಾರಿಗೆ ಹೋದೆ. ತಲ್ಪಿದಾಗ 4 ಗಂಟೆ. ಸಂಜೆ 6-30ಕ್ಕೆ ಪೂಜೆ-ದೀಕ್ಷೆ ಮುಂತಾದ ಕ್ರಿಯೆಗಳಲ್ಲಿ ನಿರತಳಾದೆ. ಮರುದಿನ ಬೆಳಿಗ್ಗೆ ಮದುವೆಯ ಕಾರ್ಯಕ್ರಮದಲ್ಲಿ ತೊಡಗಿದೆವು. ಸಂಜೆ ಬಳ್ಳಾರಿ ರಾಷ್ಟ್ರೀಯ ಬಸವ ದಳದವರ ವಿಶೇಷ ಕಾರ್ಯಕ್ರಮ. ವಿವಿಧ ಊರುಗಳ ರಾಷ್ಟ್ರೀಯ ಬಸವ ದಳಗಳ ಶರಣರ ಆಗಮನ. ಹಬ್ಬದ ವಾತಾವರಣ; ಒಬ್ಬರಿಗೊಬ್ಬರು ಭಕ್ತಿ ಸಂಬಂಧದವರು ಅಕೃತ್ರಿಮವಾದ ಸ್ನೇಹದಿಂದ ಕೂಡಿ ನಲಿಯುತ್ತಾರೆ. ಕಾರ್ಯಕ್ರಮ ನಡೆಯುವಾಗ ಮೊಬೈಲ್ ಕರೆ ಬಂತು. ಮಾತೆ ಜ್ಞಾನೇಶ್ವರಿ ಹೊರಗೆ ಹೋಗಿ ಬಂದು ಹೇಳಿದರು ಅರವಿಂದ ಜತ್ತಿಯವರ ದೂರವಾಣಿ; "ಬರಲಿಕ್ಕೆ ಮಾತಾಜಿಯವರಿಗೆ ಹೇಳ್ರಿ; ಬಸವ ದಳದವರಿಗೂ ಹೇಳ್ರಿ."

ಕಾರ್ಯಕ್ರಮ ಮುಗಿಯುತ್ತ ಬಂದಿತ್ತು. ಬೇರೆ ಬೇರೆ ಊರುಗಳವರು ರಿಸರ್ವೇಷನ್ ಆದವರು ಹೋಗುವುದಿತ್ತು. ಚರ್ಚಿಸಲು ಸಮಯವಿರಲಿಲ್ಲ; ಸಭೆಯಲ್ಲಿ ಹೇಳಿದೆ, "ನಾನೂ ಬೆಂಗಳೂರಿಗೆ ಹೋಗುತ್ತೇನೆ. ನೀವೂ ಎಲ್ಲ ಬಿಡುವು ಮಾಡಿಕೊಂಡು ಬನ್ನಿರಿ." ಬಳ್ಳಾರಿಯಿಂದ ಧಾರವಾಡಕ್ಕೆ ಹೋಗಿ ಶರಣ.ಪುಟ್ಟರುದ್ರರಿಗೆ ಫೋನ್ ಮಾಡಿ, ವಿವರ ಪಡೆಯಿರಿ. ಕಾರ್ಯಕ್ರಮ ಎಲ್ಲಿ ಹೇಗೆ ? ಎಂದು ತಿಳಿಸಿದೆನು. ಅಂದು ಬಸವ ಸಮಿತಿಯ ಅಧ್ಯಕ್ಷರಾದ ಅರವಿಂದ ಜತ್ತಿಯವರನ್ನು ಸಂಪರ್ಕಿಸಿದಾಗ ತಿಳಿದು ಬಂದುದೇನೆಂದರೆ 'ಕಾರ್ಯಕ್ರಮವು ಅಂಬೇಡ್ಕರ್ ಭವನದಲ್ಲಿ, ಅಲ್ಲಿ ಸೀಮಿತ ಸಂಖ್ಯೆಯಲ್ಲಿ ಸೀಟುಗಳಿವೆ. ಎಲ್ಲರಿಗೂ ಪ್ರವೇಶವಿಲ್ಲ. ವಿ.ಐ.ಪಿಗಳಿಗೆ ಮಾತ್ರ. ಆದ್ದರಿಂದ ನೀವು ಮುಖ್ಯ ವ್ಯಕ್ತಿಗಳನ್ನು ಆಯ್ಕೆ ಮಾಡಿ ಪಾಸ್ ಕೊಡಬೇಕು. ಎಷ್ಟು ಪಾಸ್ ಬೇಕು ತಿಳಿಸಿರಿ." ಎಂದು ಹೇಳಿದರಂತೆ.

"ಇದೊಳ್ಳೆ ತಾಪತ್ರಯವಾಯಿತು. ಬಳ್ಳಾರಿಯಲ್ಲಿ ರಾಘವ ಕಲಾಮಂದಿರ ತುಂಬಿ ಜನ ಹೊರಗೂ ನಿಂತಿದ್ದರು. ಅವರಿಗೆಲ್ಲ ಬರಲು ಹುರಿದುಂಬಿಸಿದ್ದಾಯಿತು. ಜನ ಸಾಮಾನ್ಯರು ಬಂದೇ ಬಿಡುತ್ತಾರೆ. ಇಲ್ಲಿಗೆ ಬಂದ ಮೇಲೆ ಒಳಗೆ ಬಿಡದಿದ್ದರೆ ತುಂಬಾ ನೋವು." ಎಂದು ಮರುದಿನ ಯಾವ ಯಾವ ರಾಷ್ಟ್ರೀಯ ಬಸವ ದಳಗಳವರು ಬಂದಿದ್ದರು ಎಂಬುದನ್ನು ನೆನಪಿಸಿಕೊಂಡು ಲಿಸ್ಟ್ ಮಾಡಿ ಮತ್ತೆ ಎಲ್ಲರಿಗೂ ಫೋನ್ ಮಾಡಿ "ಎಲ್ಲರಿಗೂ ಅವಕಾಶವಿಲ್ಲವಂತೆ; ಒಂದು ರಾ.ಬ.ದಳದಿಂದ ಯಾರಾದರೂ ಒಬ್ಬರು, ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಬನ್ನಿರಿ. ಪುಟ್ಟರುದ್ರಪ್ಪ ಪಾಸ್‌ಗಳನ್ನು ಪಡೆದಿರುತ್ತಾರೆ." ಎಂದು, ನೂರಾರು ರೂಪಾಯಿ ಖರ್ಚು ಮಾಡಿಕೊಂಡು ಹೇಳಿದ್ದಾಯಿತು. ಆದರೆ ಮರುದಿನ ಪುಟ್ಟರುದ್ರಪ್ಪ ಫೋನಲ್ಲಿ ತಿಳಿಸಿದರು, "ಅರಮನೆ ಮೈದಾನದಲ್ಲಿ ಮಾಡಲಾಗಿದೆಯಂತೆ. ಎಷ್ಟು ಜನ



ಬೇಕಾದರೂ ಬರಬಹುದು. ಪಾಸ್ ಬೇಕಾಗಿಲ್ಲ." ಎಂದು ಹೇಳಿದ್ದಾರೆ. ಅಷ್ಟು ಹೊತ್ತಿಗೆ ಅಲ್ಲಮ ಪ್ರಭುಗಿರಿಗೆ ಬಂದು ತಲುಪಿದ್ದೆ. ಬೆಂಗಳೂರು ಬಸವ ಮಂಟಪಕ್ಕೆ ಫೋನ್ ಮಾಡಿ ನಿಮಗೆ ತಿಳಿಸಲು ಸಾಧ್ಯವಿದ್ದಷ್ಟು ಜನರಿಗೆ ಫೋನ್ ಮಾಡಿ ಕಾರ್ಯಕ್ರಮದಲ್ಲಿ ಭಾಗಿಯಾಗಲು ಹೇಳಿರಿ ಎಂದು ಸೂಚಿಸಿದೆ.

ದಿ.21 ರಂದು ಒಂದು ನೋಂದಣಿ ಇತ್ತು, ಅಂದು ಆಗದೆ ಮರುದಿನ ಮುಂದಕ್ಕೆ ಹೋಯಿತು. ದಿ.22ರಂದು ಅದನ್ನು ಮುಗಿಸಿ ಅಲ್ಲಮ ಪ್ರಭುಗಿರಿ (ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆ) ಯಿಂದ ಸುಮಾರು 630 ಕಿ.ಮೀಟರ್ ಕಾರಿನಲ್ಲಿ ಪ್ರಯಾಣಿಸಿ ಬೆಂಗಳೂರಿಗೆ ಬಂದು, ದಿ.23ರಂದು ಕಾರ್ಯಕ್ರಮದಲ್ಲಿ ಭಾಗವಹಿಸಿ, ದಿ.24ರಂದು ಮಧ್ಯಾಹ್ನ4 ಗಂಟೆ ಒಳಗೆ ಹುಮ್ನಾಬಾದಿಗೆ ಹೋಗಬೇಕಿತ್ತು. ಪೂಜ್ಯ ಗಂಗಾ ಮಾತಾಜಿಯವರ ಪ್ರವಚನ ಮಂಗಲದ ನಿಮಿತ್ತ ದಿ.24ರಂದು ಹುಮ್ನಾಬಾದಿನಲ್ಲಿ ನಮಗೆ ಭವ್ಯವಾದ ಸ್ವಾಗತ ಮತ್ತು ಮೆರವಣಿಗೆ ಇಟ್ಟಿದ್ದರು. ಬೆಂಗಳೂರಿನಿಂದ ಹುಮ್ನಾಬಾದ್ ರಾ.ಹೆದ್ದಾರಿ 13ರಲ್ಲಿ ಹೋದರೆ ಸುಮಾರು ಎಂಟು ನೂರು ಕಿಲೋ ಮೀಟರ್, ಮಳೆಗಾಲದ ರಾತ್ರಿಯ ಪ್ರಯಾಣ ಕಾರಿನಲ್ಲಿ ಸಾಧುವಲ್ಲ, ಸಾಧ್ಯವೂ ಇರಲಿಲ್ಲ.

ದಿನಾಂಕ ಬದಲಾಯಿಸಿರಿ ಎಂದರೆ ಪೂಜ್ಯ ಗಂಗಾ ಮಾತಾಜಿ "ಸಾಧ್ಯವಿಲ್ಲ, ಹೈದ್ರಾಬಾದ್, ಬೀದರ್, ಗುಲಬರ್ಗಾ ಬಸವ ದಳಗಳಿಗೆ ತಿಳಿಸಿಯಾಗಿದೆ. ಅವರಿಗೆಲ್ಲ ಶನಿವಾರ, ಭಾನುವಾರ ಆದರೆ ಒಳ್ಳೆಯದು." ಎಂದು ಬಿಟ್ಟರು. ಹೀಗಾಗಿ ನಾನು ಅಲ್ಲಮಪ್ರಭುಗಿರಿಯಿಂದ ಸೊಲ್ಲಾಪುರ ಮಾರ್ಗವಾಗಿ ಬಸವ ಕಲ್ಯಾಣಕ್ಕೆ, ಅಲ್ಲಿಂದ ಹುಮನಾಬಾದಿಗೆ ಹೋಗುವ ನಿರ್ಧಾರವನ್ನು ಅನಿವಾರ್ಯವಾಗಿ ಕೈಗೊಳ್ಳಬೇಕಾಯಿತು. ದಿ.23ರಂದು ಪುನಃ ರಾಜಶೇಖರನ್ ಫೋನ್ ಮಾಡಿ ನೀವಿದ್ದರೆ ಚೆನ್ನಾಗಿತ್ತು; ಎಂದರು. ನಾನು ಮಹಾರಾಷ್ಟ್ರದ ಅಲ್ಲಮ ಪ್ರಭುಗಿರಿಯಲ್ಲಿ ಇರುವುದನ್ನು ತಿಳಿಸಿದೆ. ವಿಮಾನದಲ್ಲಾದರೂ ಬನ್ನಿರಿ ಎಂದರು. ಬೆಂಗಳೂರು - ಬೆಳಗಾವಿ ಮಧ್ಯೆ ಇರುವ ಒಂದೇ ವಿಮಾನ ಏರ್‌ಡೆಕ್ಕನ್, ಅದು ಓಡಾಡುವ ಬಗ್ಗೆ ಖಾತ್ರಿ ಇಲ್ಲ. ಯಾವಾಗ ಬೇಕಾದರೂ ರದ್ದಾಗುತ್ತದೆ. ಎಂದು ಬುಕ್ ಮಾಡಲು ಬೆಂಗಳೂರಿನಲ್ಲಿ ಟ್ರಾವೆಲ್ ಕಂಪೆನಿಯವರು ಹೇಳಿದ್ದರು.

"ಇಲ್ಲಿಂದ ವಿಮಾನ ಸೌಲಭ್ಯವಿಲ್ಲ; ಬೆಂಗಳೂರಿಂದ ಪುನಃ ಹುಮನಾಬಾದಿಗೆ ಹೋಗುವುದು ಹೇಗೆ? ಸಾಧ್ಯವಾಗದು." ಎಂದು ಅವರಿಗೆ ಹೇಳಿದೆ.

ನಿಮ್ಮಿಂದ ನಾಣ್ಯ ನಿರ್ಮಾಣಕ್ಕೆ ಪ್ರೇರಣೆ ಸಿಕ್ಕಿದ್ದು" ಎಂದು ನಮ್ಮೊಡನೆ ದೂರವಾಣಿಯಲ್ಲಿ ಹಲವು ಬಾರಿ ಹೇಳಿದವರು, ಒಂದು ಮಾತನ್ನೂ ಪ್ರಸ್ತಾವನೆಯಲ್ಲಿ ರಾಜಶೇಖರನ್ ಹೇಳಲಿಲ್ಲ ಎಂದು ಭಾಗವಹಿಸಿದ್ದ ಶರಣರು ಹೇಳಿದರು. ನಿಜ ಸಂಗತಿ ಗೊತ್ತಿರುವ ಎಲ್ಲರೂ ನೊಂದುಕೊಂಡರು. ಮಠಾಧೀಶರಿಗೆ ಅಂದಿನ ಸಭೆಯಲ್ಲಿಸಿಕ್ಕ ಸ್ಥಾನ ಮತ್ತು ಮಾನ ನೋಡಿದ ನಮ್ಮ ಅಭಿಮಾನಿಗಳು "ನೀವು ಬರದಿದ್ದುದೇ ಛಲೊ." ಎಂದು ಫೋನ್ ಮಾಡಿ ಅಭಿನಂದಿಸಿದರು.

ಮಾಡುವಂತಿರಬೇಕು, ಮಾಡದಂತಿರಬೇಕು.
ಮಾಡುವ ಮಾಟದಲ್ಲಿ ತಾನಿಲ್ಲದಿರಬೇಕು.

ಎಂಬ ಧರ್ಮಗುರು ಬಸವಣ್ಣನವರ ವಚನವನ್ನು (ಕ್ಷೇಮೆ ಕೇಳಿ ) ತಿದ್ದಿದರೆ,

ಕರೆಯುವಂತಿರಬೇಕು ಕರೆಯದಂತಿರಬೇಕು
ಕರೆಯುವ ಕ್ರಿಯೆಯಲ್ಲಿ ಒಲವಿಲ್ಲದಿರಬೇಕು.

ಎಂಬ ಶ್ರೀ ಅರವಿಂದ ಜತ್ತಿಯವರ ಜಾಣ್ಮೆಗೆ ನಿಜಕ್ಕೂ ತಲೆದೂಗಬೇಕು. ಇಲ್ಲಿಗೆ ಬಸವ ನಾಣ್ಯ ಬಿಡುಗಡೆಯ ಪುರಾಣ ಅಧ್ಯಾಯ ಸಮಾಪ್ತಿ.

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದಕ್ಕಿಂತ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯ

ಎಂಬ ಧರ್ಮಪಿತರ ವಾಣಿಯಂತೆ

ಆಢ್ಯತೆಯುಳ್ಳ ದೊಡ್ಡವರ ಸ್ಥಾನ ಮಾನಕ್ಕಿಂತಲೂ
ನಿಜ ಶರಣರ ಒಡನಾಟ ಬಹುಲೇಸಯ್ಯ

ಎಂಬುದು ನಮ್ಮ ಅನುಭವ.

# ಭಕ್ತನಾಗಿ ಲಿಂಗ ಜಂಗಮವ ಪೂಜಿಸುವುದು
# ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದೆಂತಯ್ಯ?

- ಮಾತಾಜಿ

1. ಜಂಗಮದ ಸನ್ನಿಧಿಯಲ್ಲಿ
ವಾಹನವನೇರಲಮ್ಮೆ : ಏರಿದಡೆ ಭವ ಹಿಂಗದು ಏನು ಕಾರಣ:
ಮುಂದೆ ಶೂಲವನೇರುವ ಪ್ರಾಪ್ತಿಯುಂಟಾದ ಕಾರಣ!
ಜಂಗಮ ಬರಲಾಸನದಲ್ಲಿರಲಮ್ಮೆ: ಇದ್ದಡೆ ಭವ ಹಿಂಗದು! ಏನು ಕಾರಣ
ಮುಂದೆ ಕಾಯ್ದಿಟ್ಟಿಗೆಯ ಮೇಲೆ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ!
ಜಂಗಮದ ಮುಂದೆ ದಿಟ್ಟತನದಲ್ಲಿ ಬೆರೆತು ನಿಂದಿರಲಮ್ಮೆನು
ನಿಂದಡೆ ಭವ ಹಿಂಗದಾಗಿ ಏನು ಕಾರಣ:
ಮುಂದೆ ಹೆಡಗುಡಿಯ ಕಟ್ಟಿ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ!
ಇಂತೀ ಬಾಧೆ ಭವಂಗಳಿಗಂಜುವೆನಯ್ಯಾ.
ನಿಮ್ಮವರ ಸುಳುಹ ನೀವೆಂದೇ ಭಾವಿಸಿ,
ತೊತ್ತು-ಭೃತ್ಯನಾಗಿಪ್ಪೆನಯ್ಯಾ, ಲಿಂಗದೇವಾ. -ಬ.ವ.ದೀ-397

2. ಭಕ್ತದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಇಪ್ಪನಾಗಿ,
ಆಳ್ದನು ಬರಲು ಆಳು ಮಂಚದ ಮೇಲೆ ಇಪ್ಪುದು ಗುಣವೆ ಹೇಳಾ?
ಲಿಂಗದೇವಾ, ಜಂಗಮರೂಪಾಗಿ ಸಂಗಯ್ಯ ಬಂದಾನೆಂದು
ಎಂದೆಂದೂ ನಾನು ಮಂಚವನೇರದ ಭಾಷೆ!

ಜಂಗಮ ಎನ್ನುವ ಪದವು ಹಲವಾರು ಅರ್ಥಗಳಲ್ಲಿ ಬಳಕೆಯಾಗುತ್ತದೆ. ಜಂಗಮ ಎಂಬ ಪದವು ಚಲನ ಶೀಲತೆಯುಳ್ಳದ್ದು ಎಂಬ ವಾಚ್ಯಾರ್ಥದಿಂದ ಪ್ರಾರಂಭವಾಗಿ ಹಲವು ರೂಪವನ್ನು ಪಡೆಯುತ್ತದೆ. ಈ ಬಗ್ಗೆ ನಾನು ಬಸವ ವಚನ ಪದ ಪ್ರಯೋಗ ಕೋಶದ ಪೀಠಿಕೆ, ಬಸವ ವಚನ ದೀಪ್ತಿಯ ಪೀಠಿಕೆ ಇವುಗಳಲ್ಲಿ ವಿವರವಾಗಿ ಬರೆದಿದ್ದೇನೆ.

ಧರ್ಮಪಿತರ ಮೇಲಿನ ಎರಡು ವಚನಗಳಲ್ಲಿ ಜಂಗಮ ಎಂದರೆ ತ್ಯಾಗಿ, ಯೋಗಿ, ಧರ್ಮ ಪ್ರಚಾರಕ, ಸಮಾಜದ ಹಿತಚಿಂತಕ ಎಂಬ ಭಾವವಿದೆ. ಜಂಗಮತ್ವವು ತಾತ್ವಿಕವಾಗಿ ಭಕ್ತ - ಜಂಗಮ, ಗೃಹಸ್ಥ - ವಿರಕ್ತ ಉಭಯತರಲ್ಲೂ ಅರ್ಹತೆಯ ಆಧಾರದಲ್ಲಿ ಇರುವುದು. ಆದರೆ "ಲಾಂಛನ" ದ ದೃಷ್ಟಿಯಲ್ಲಿ ಜಂಗಮ ಕಾಷಾಯ ವಸ್ತ್ರಧಾರಿ. ವ್ಯಕ್ತಿ ಹೇಗೇ ಇರಲಿ, ಆ ಕಾವಿಯ ಲಾಂಛನ ಅತ್ಯಂತ ಗೌರವಾನ್ವಿತವಾದುದು. ಹೀಗಾಗಿ ಈ 'ಬಣ್ಣ' ದ ಬಟ್ಟೆಗೆ ಅಪಾರ ಗೌರವವುಂಟು.

ಜಂಗಮನಿಗೆ,

1. <u>ಮಾತಾ - ಪಿತೃಗಳಿಲ್ಲ</u> : ಅವರ ಮಮಕಾರವನ್ನು ತೊರೆದಿರುವ ಕಾರಣ
2. <u>ಹೆಂಡತಿ - ಮಕ್ಕಳಿಲ್ಲ</u> : ಜಂಗಮ ವಿರಾಗಿಯಾದ ಕಾರಣ
3. <u>ನಾನು - ನನ್ನದೆಂಬುದಿಲ್ಲ</u> : ತನ್ನನ್ನೇ ತಾನು ಸಮಾಜಕ್ಕೆ ಅರ್ಪಿಸಿಕೊಂಡ ಕಾರಣ
4. <u>ಆಸ್ತಿ - ಪಾಸ್ತಿ ಇರದು</u> : ತಾನು ಸಾಧನವಾಗಿ ಗಳಿಸಿದರೂ ಅದು ಹೆಂಡತಿ ಮಕ್ಕಳಿಗೆ ಸೀಮಿತವಾಗದೆ ಗಳಿಸಿದ್ದೆಲ್ಲವೂ ಗುರು (ಬಸವಣ್ಣ) - ಲಿಂಗದೇವ-ಜಂಗಮ(ಸಮಾಜ)ದ ಸೊತ್ತಾದ ಕಾರಣ
5. <u>ವಿಶ್ವಕುಟುಂಬಿ</u> : ತನ್ನ ಕುಟುಂಬದ ಹಿತ ಚಿಂತನೆಗಷ್ಟೇ ಮೀಸಲಾಗದೆ ಇಡೀ ಸಮಾಜದ ಹಿತಚಿಂತನೆ ಮಾಡುವ ಕಾರಣ

ಧರ್ಮಪಿತ ಬಸವಣ್ಣನವರು ಗೃಹಸ್ಥರಿದ್ದರೂ ವೈರಾಗ್ಯನಿಧಿ ಅಲ್ಲಮಪ್ರಭುದೇವರು ಹೇಳುವಂತೆ



"ಕುಂಡಲಿಗನ ಕೀಡೆ ಮೈಮಣ್ಣಾಗದಂತೆ ಇದ್ದರು;" "ಅಂಗದ ಕೈಯಲ್ಲಿ ಲಿಂಗ ಮನದ ಕೈಯಲ್ಲಿ ನಿಸ್ಸಂಸಾರ". ಈ ನಿಲುವು ಇನ್ನಿತರ ಗೃಹಸ್ಥರಿಗೆ ಬರುವುದು ಕಷ್ಟಸಾಧ್ಯ. ಹೀಗಾಗಿ ಧರ್ಮಪಿತರು ಗೃಹಸ್ಥರಲ್ಲಿ ಆದರ್ಶ ಗೃಹಸ್ಥರು, ವಿರಕ್ತರಲ್ಲಿ ಆದರ್ಶ ವಿರಕ್ತರು. ಇದರಿಂದಲೇ ಅಲ್ಲಮಪ್ರಭು, ಸಿದ್ಧರಾಮೇಶ್ವರರಂಥ ಮಹಾನ್ ವಿರಕ್ತರು ಗುರು ಬಸವಣ್ಣನವರಿಗೆ ಅಪಾರ ಗೌರವವನ್ನು ತೋರಿಸಿದರು. "ನೀನು ಮಾಡಲು ಆನಾದೆನಲ್ಲದೆ ಎನಗೆ ಬೇರೆ ಸ್ವತಂತ್ರ ಉಂಟೆ? " ಎಂದು ಪ್ರಭುದೇವರು ನುಡಿದರು.

ಅಂಥ ಉತ್ತುಂಗ ಮೂರ್ತಿ ಧರ್ಮಪಿತರು ಹೇಳುತ್ತಾರೆ. "ಜಂಗಮದ ಸನ್ನಿಧಿಯಲ್ಲಿ ವಾಹನವ ಏರಲಮ್ಮೆ; ಜಂಗಮ ಬರಲು ಆಸನದಲ್ಲಿ ಇರಲಮ್ಮೆ, ಜಂಗಮದ ಮುಂದೆ ದಿಟ್ಟತನದಲ್ಲಿ ಬೆರೆತು ನಿಂದಿರಲಮ್ಮೆ. ಆಳ್ದನು ಬರಲು ಆಳು ಮಂಚದ ಮೇಲೆ ಇಪ್ಪುದು ಗುಣವೆ?" ತಾವು ನಡೆದು ತೋರಿಸಿದ್ದು ಮಾತ್ರವಲ್ಲ. ನಂತರದ ಸಮಾಜವು ನಡೆಯಲೆಂದೇ ಈ ಮಾತುಗಳನ್ನು "ದಾರಿ ದೀವಿಗೆ" ಯನ್ನಾಗಿ ಧರ್ಮ ಗುರುವು ನೀಡಿದ್ದಾರೆ. ಬಸವ ನಾಣ್ಯ ಬಿಡುಗಡೆ ಸಮಾರಂಭದಲ್ಲಿ (ದಿ.23-6-2006) ಕಾಷಾಯ ವಸ್ತ್ರ ಲಾಂಛನಧಾರಿಗಳಾದ ಸ್ವಾಮಿಗಳನ್ನು ನಗಣ್ಯರನ್ನಾಗಿ ಸಭೆಯಲ್ಲಿ ಕುಳ್ಳಿರಿಸಿದ್ದು ಲಿಂಗಾಯತ ಸಮಾಜದ ಬಹು ಜನರಿಗೆ , ಬಸವ ತತ್ತ್ವಾನುಯಾಯಿಗಳಾದ ಅನೇಕರಿಗೆ ಬಹಳ ನೋವು ಮತ್ತು ವಿಷಾದವನ್ನು ಉಂಟುಮಾಡಿದೆ. ಈ ಬಗ್ಗೆ ಅನೇಕರು ದೂರವಾಣಿಯಲ್ಲಿ ತಿಳಿಸಿದರು. ಯಾರೋ ನಗಣ್ಯರಾದ ಫೋಟಾ ಸ್ವಾಮಿಗಳಲ್ಲ, ಸಮಾಜದಲ್ಲಿ ಗಣನೀಯ ಸಂಖ್ಯೆಯಲ್ಲಿ ಭಕ್ತರನ್ನು ಹೊಂದಿದ "ದೊಡ್ಡ ಸ್ವಾಮಿ" ಗಳೂ ಹಲವರು ಬಂದಿದ್ದರಂತೆ. (ನಾನು ಹೆಸರು ಹೇಳಿ ಅವರಿಗೆ ಇನ್ನಷ್ಟು ಅಪಮಾನ ಮಾಡಲು ಬಯಸುವುದಿಲ್ಲ.) ಟಿ.ವಿ ಕ್ಯಾಮರಾ ಅವರನ್ನು ತೋರಿಸಿತೆಂದು ನಮಗೆ ಕೆಲವರು ತಕ್ಷಣ ಫೋನ್ ಮಾಡಿ, "ನೀವು ಬರದಿದ್ದುದು ಒಳ್ಳೆಯದಾಯಿತು." ಎಂದರು ಆ ಸಮಯದಲ್ಲಿ ನಾನು ಕೊಲ್ಹಾಪುರ(ಅಲ್ಲಮಪ್ರಭುಗಿರಿ) ದಿಂದ ಸೊಲ್ಲಾಪುರದ ಕಡೆಗೆ ಕಾರಿನಲ್ಲಿ ಹೋಗುತ್ತಲಿದ್ದೆ.

ಈ ಮಹತ್ತರವಾದ ಲೋಪಕ್ಕೆ ಕಾರ್ಯಕ್ರಮದ ವ್ಯವಸ್ಥಾಪಕರಾದ ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿ ಮತ್ತು ಕೇಂದ್ರ ಸರ್ಕಾರದ ರಾಜ್ಯ ಸಚಿವ ಶ್ರೀ ಎಂ.ವಿ.ರಾಜಶೇಖರನ್ ಅವರೇ ಜವಾಬ್ದಾರರು. ಒಂದು ವೇಳೆ, ಕೇಂದ್ರ ಸರ್ಕಾರದ ಜವಾಬ್ದಾರಿಯಿತ್ತು, ನಿಯಮವಿತ್ತು, ಹೆಚ್ಚಿನ ಜನರಿಗೆ ವೇದಿಕೆ ಮೇಲೆ ಅವಕಾಶವಿಲ್ಲ ಎನ್ನುವುದಾದರೆ ಮಠಾಧೀಶರನ್ನು ಅರವಿಂದ ಜತ್ತಿ ಆಹ್ವಾನಿಸುವ ಅಗತ್ಯವೇನಿತ್ತು? ತಾವು ತಾವೇ ಸಾಮಾನ್ಯ ಮತ್ತು ಗಣ್ಯ ಶ್ರೋತೃಗಳ ಮಧ್ಯೆ ಬಸವ ನಾಣ್ಯ ಬಿಡುಗಡೆ ಮಾಡಬಹುದಿತ್ತು. ಅರವಿಂದ ಜತ್ತಿಯವರಿಗೆ ತಾವು ಪ್ರದರ್ಶಿಸಿಕೊಳ್ಳುವುದು ಅಗತ್ಯವಿತ್ತೆಂದೋ ಅಥವಾ ತಮಗೆ (ಬಹುಶಃ ರಾಜಕಾರಣ ಪ್ರವೇಶಿಸಲು) ಎಷ್ಟೊಂದು ಕಾವಿ ಬಟ್ಟೆಯವರ ಬೆಂಬಲವಿದೆಯೆಂದು ತೋರಿಸಿಕೊಳ್ಳಲೋ ಮಠಾಧೀಶರನ್ನು ಆಹ್ವಾನಿಸಿದಂತೆ ಕಾಣುತ್ತದೆ. ಇದರ ಮುನ್ಸೂಚನೆ ಅರಿತೇ ನಾನು ಕಾರ್ಯಕ್ರಮಕ್ಕೆ ಹೋಗುವುದಿಲ್ಲ ಎಂದು ಹೇಳಿದಾಗ ನಮ್ಮ ಕೆಲವು ಆತ್ಮೀಯರು ಅಸಂತೋಷ ವ್ಯಕ್ತಪಡಿಸಿದ್ದರೂ, ಕಾರ್ಯಕ್ರಮ ಎಲ್ಲ ಮುಗಿದ ಮೇಲೆ "ಒಳ್ಳೆಯ ನಿರ್ಧಾರ ತೆಗೆದುಕೊಂಡಿರಿ. ನೀವು ಬರದುದು ಒಳ್ಳೆಯದಾಯಿತು." ಎಂದು ಕಾರ್ಯಕ್ರಮದಲ್ಲಿ ಭಾಗಿಯಾದವರು, ಟಿ.ವಿ.ತೆರೆಯ ಮೇಲೆ ನೋಡಿದವರು ತಕ್ಷಣ ಫೋನ್ ಮಾಡಿದರು. ಒಬ್ಬರು ಭಾಗವಹಿಸಿದವರು (ಯುವ ವಕೀಲರು) ಮಠಾಧಿಪತಿಗಳಿಗೆ ತಕ್ಕ ಶಾಸ್ತಿಯಾಯಿತು; ಮುಖಭಂಗವಾಯಿತು ಎಂದು ಹರ್ಷಿಸಿದಾಗ ನಾನು, "ಹಾಗೆ ಹರ್ಷಿಸಬಾರದು. ಇದು ತ್ಯಾಗಿಗಳಿಗೆ, ತ್ಯಾಗ ಲಾಂಛನ (ಕಾವಿ)ಕ್ಕೆ ಆದ ಅವಮಾನ." ಎಂದು ಹೇಳಿದೆ. ಸಿಖ್ಖರಲ್ಲಿ ಕಾವಿ ಧರಿಸುವ ಸನ್ಯಾಸಿಗಳು ಇಲ್ಲವಾದರೂ ಕಾವಿ ಧರಿಸಿದವರಿಗೆ ಬಹಳ ಗೌರವ ಕೊಡುತ್ತಾರೆ ಎಂಬುದನ್ನು ಸ್ವತಃ ಕಂಡಿದ್ದೇವೆ.

ಪ್ರಧಾನಿಯಂತಹ ರಾಷ್ಟ್ರನಾಯಕರು ಬಂದಾಗ ಹೆಚ್ಚಿನ ಸಮಯ ಇರುವುದಿಲ್ಲ; ಹೀಗಾಗಿ ಮಠಾಧೀಶರಿಗೆ ಸಮಯ ಅಥವಾ ಗೌರವ ಕೊಡಲು ಆಗಲಿಲ್ಲ ಎಂಬುದು ಅರವಿಂದ ಜತ್ತಿಯವರ ವಿವರಣೆಯಾದರೆ, ಅನೌನ್ಸ್‌ಮೆಂಟ್ ಮಾಡಿ ಜನರನ್ನು ಕುಳ್ಳಿರಲು ಸೂಚಿಸಿ, ಪ್ರಧಾನಿಯನ್ನು ಬೀಳ್ಕೊಟ್ಟು ಭಾಗವಹಿಸಿದ್ದ ಮಠಾಧೀಶರಿಗೆ ಒಂದು ಹೂಮಾಲೆ ಅಥವಾ ಒಂದು ಗುಲಾಬಿ ಹೂವನ್ನು ಗೌರವ ಪೂರ್ಣವಾಗಿ ಹೆಸರು ಹೇಳಿ ಕೊಡಲು ಬರುತ್ತಿರಲಿಲ್ಲವೆ? ರಾಜಕೀಯ ಅಧಿಕಾರ, ದೌಲತ್ತು, ಶ್ರೀಮಂತಿಕೆ, ಅಂತಸ್ತಿನ ಬಲದಿಂದ ಎಷ್ಟೇ ಮೆರೆದರೂ, ತ್ಯಾಗಿಗಳ ಹಿಂದೆ ಮಾತ್ರ ಅನುಯಾಯಿಗಳು ಇರುತ್ತಾರೆ ಎಂಬುದನ್ನು ಶ್ರೀ ಅರವಿಂದ ಜತ್ತಿ, ಬಸವ ಸಮಿತಿ, ವೀರಶೈವ ಮಹಾಸಭಾ ಅರಿತರೆ ಒಳ್ಳೆಯದು.

# ಮಹಾನ್ ಶರಣ ಚೇತನಗಳಾದ

# ಲಿಂ॥ಫ.ಗು.ಹಳಕಟ್ಟಿ ಮತ್ತು ಹರ್ಡೇಕರ್ ಮಂಜಪ್ಪ

- ಮಾತಾಜಿ

ಕಲ್ಯಾಣ ಕ್ರಾಂತಿಯ ನಂತರ ವಚನ ಸಾಹಿತ್ಯ ಕಾನನವನ್ನು ಸೇರಿ ವನವಾಸಕ್ಕೆ ಒಳಗಾಗಿ, 15ನೆಯ ಶತಮಾನದಲ್ಲಿ ಹೊರಬಂದರೂ ಶೈವದ ಮುಸುಕು ಹೊದ್ದು ಅಜ್ಞಾತವಾಸ ಅನುಭವಿಸಿ, ಬೆಳಕಿಗೆ ಬಂದುದು 20ನೆಯ ಶತಮಾನದ ಆದಿಭಾಗದಲ್ಲಿ. 1876ರಲ್ಲಿ ಮೈಸೂರ್ ಗೆಜೆಟಿಯರ್‌ದಲ್ಲಿ ಲಿಂಗಾಯತ ಸಮಾಜದ ಬಗ್ಗೆ ರೈಸ್ ಬರೆದಾಗ ವಚನ ವಾಙ್ಮಯವು ಬೆಳಕಿಗೆ ಬಂದಿರಲೇ ಇಲ್ಲ. ಭೀಮಕವಿಯ ಬಸವ ಪುರಾಣ, ವಿರುಪಾಕ್ಷ ಪಂಡಿತನ ಚೆನ್ನಬಸವ ಪುರಾಣ ಮಾತ್ರ ಲಭ್ಯವಿದ್ದವು. ಶರಣ ಫ.ಗು ಹಳಕಟ್ಟಿಯವರ ಗಮನಕ್ಕೆ ವಚನಗಳು ಬಂದುದು 1905ರಲ್ಲಿ, ಗುಬ್ಬಿ ಮಲುಹಣರ ಗಣಭಾಷ್ಪರತ್ನ ಮಾಲೆಯ ಕೈಬರಹದ ಪ್ರತಿಯೊಂದು ಸಿಕ್ಕಾಗ. ಕುತೂಹಲಗೊಂಡು ಓದಿ, ಸಂಗ್ರಹಿಸ ತೊಡಗಿದಾಗ 1918ರಲ್ಲಿ ಸಂಗ್ರಹಕ್ಕೆ ಮೂರ್ತ ಸ್ವರೂಪ ಕೊಡಲು ಅವರು ಆರಂಭಿಸಿ, ಮೊದಲನೆಯ ಆವೃತ್ತಿಯಾಗಿ ವಚನ ಶಾಸ್ತ್ರಸಾರವನ್ನು 1923ರಲ್ಲಿ ಪ್ರಕಟಿಸಿದರು. ಅಲ್ಲಿಂದ ವಚನ ಸಾಹಿತ್ಯ ಸೂರ್ಯನು ಅಜ್ಞಾತವಾಸದ ಕಾರ್ಮೋಡಗಳ ತೆರೆ ಸರಿಸಿ ಇಣುಕ ತೊಡಗಿದನು.

ಶರಣ.ಹರ್ಡೇಕರ್ ಮಂಜಪ್ಪನವರು ಗುರು ಬಸವಣ್ಣನವರ 108 ವಚನಗಳನ್ನು ಸಂಪಾದಿಸಿ ವ್ಯಾಖ್ಯಾನ ಬರೆದು 1927ರಲ್ಲಿ ಪ್ರಕಟಿಸಿದರು. ಸುಮಾರು 4 ವರ್ಷಗಳ ಅವಧಿಯಲ್ಲಿ ವಚನ ಸಾಹಿತ್ಯ ತನ್ನ ತಾತ್ತ್ವಿಕ ದಾರ್ಶನಿಕ ದಿಗ್‌ದರ್ಶನವನ್ನು ಆರಂಭಿಸಿತು. ಅದರ ಫಲಶ್ರುತಿಯೇ ಬಸವ ಬೋಧಾಮೃತ. ಈ ಹೊಸ ಬಗೆಯ ಸಾಹಿತ್ಯ ಕುತೂಹಲ ಹುಟ್ಟಿಸಿದ್ದು ಮಾತ್ರವಲ್ಲದೆ ಬಸವ ಸಿದ್ಧಾಂತಕ್ಕೆ ಕೂಡಲ ಸಂಗಮದೇವ ವಚನಾಂಕಿತ ಸೈದ್ಧಾಂತಿಕವಾಗಿ ಸೂಕ್ತವಾಗದು ಎಂಬ ಅರಿವು ಹರ್ಡೇಕರ್ ಮಂಜಪ್ಪನವರಲ್ಲಿ ಮೂಡಿದುದು, ಅವರು ಆ ಕೃತಿಯಲ್ಲಿ "ಕೂಡಲ ಸಂಗಮದೇವ" ವಚನಾಂಕಿತ ಬರುವಲ್ಲಿ, ವ್ಯಾಖ್ಯಾನದಲ್ಲಿ "ಲಿಂಗದೇವ" ಬಳಸಿರುವುದು ನನಗೆ ಆನಂದ-ಆಶ್ಚರ್ಯ ಉಂಟು ಮಾಡಿದೆ. ಬಸವ ವಚನ ದೀಪಿ ಪ್ರಕಟಿಸುವಾಗ ನನಗಿದು ತಿಳಿದಿದ್ದರೆ ಖಂಡಿತಾ ಶರಣ.ಹರ್ಡೇಕರ್ ಮಂಜಪ್ಪನವರನ್ನು ಸ್ಮರಿಸುತ್ತಿದ್ದೆ. "ಲಿಂಗದೇವ" ಸಲುವಾಗಿ ಗದ್ದಲವು ಜೋರಾದಾಗ ನಮ್ಮ ಶರಣರು 1.ಬಸವ ಸಮಿತಿ ಪ್ರಕಟಿಸಿದ ಬಸವ ಬೋಧಾಮೃತ ಮತ್ತು 2. ಗದುಗಿನ ವೀರಶೈವ ಅಧ್ಯಯನ ಸಂಸ್ಥೆ ಪ್ರಕಟಿಸಿದ ಆವೃತ್ತಿಗಳನ್ನು ನಮಗೆ ಕಳಿಸಿಕೊಟ್ಟರು. ತತ್ತ್ವಜ್ಞಾನಿ, ಅನುಭಾವಿಗಳ ಚಿಂತನೆ ಒಂದೇ ರೀತಿಯಲ್ಲಿ ಸಾಗುತ್ತದೆ ಎಂಬುದಕ್ಕೆ ಇದು ಉದಾಹರಣೆ.

ಲಿಂಗದೇವ ಪದವನ್ನು ಕೂಡಲ ಸಂಗಮದೇವಕ್ಕೆ ಪರ್ಯಾಯವಾಗಿ ಹೆಚ್ಚಿನ ವಚನಗಳಲ್ಲಿ ಬಳಸಿ 4-5 ಕಡೆ ಮಾತ್ರ ಲಿಂಗಮೂರ್ತಿ ಎಂದು ಬಳಸಿದ್ದಾರೆ. ಇಷ್ಟಲಿಂಗವು ಮೂರ್ತಿಯಲ್ಲವಾದುದರಿಂದ ಅದನ್ನು ಕೈಬಿಟ್ಟು ಲಿಂಗದೇವ ಪದಕ್ಕೇ ಮಂಜಪ್ಪನವರು ಒತ್ತುಕೊಟ್ಟಿದ್ದಾರೆ. ಒಂದೆರಡು ಉದಾಹರಣೆ ಕೊಡುತ್ತೇನೆ.

1. ತನು ಮನ ಧನವೆಂಬ ಕನ್ನಡಿ ನೋಡಯ್ಯಾ;

ಎನ್ನದೂ ಅಲ್ಲ, ನಿನ್ನದೂ ಅಲ್ಲ, ಬರಿಯ ಭ್ರಮೆಯ ಮಾತು.

ಆ ಭ್ರಮೆಗೊಳಗಾಗಿ ನಿಮ್ಮ ಶ್ರೀ ಚರಣವ ಬಿಡೆ, ಲಿಂಗದೇವಾ.

ವ್ಯಾಖ್ಯಾನ : <u>ಲಿಂಗದೇವನೇ</u> ನಿನ್ನ ಚರಣವನ್ನು ಹಿಡಿದುಕೊಂಡಿರುವೆನು; ಇನ್ನೆಂದಿಗೂ ಬಿಡೆನು.

2. ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ;

ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ,


ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ

ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹೊ ಕೂಡಲ ಸಂಗಮದೇವ.


ವ್ಯಾಖ್ಯಾನ : ನನ್ನನ್ನು ನಿಮ್ಮ ಶರಣರ ಪಾದ ಸೇವೆಗೆ ಒಪ್ಪಿಸು. ಹಾಗೆ ಮಾಡಿದರೆ <u>ಲಿಂಗದೇವನೇ,</u> ನೀನು ನನ್ನನ್ನು ರಕ್ಷಿಸಿದಂತಾಗುವುದು.

[ಈ ಪುಸ್ತಕವು ಓದುಗರಿಗೆ ಲಭ್ಯವಿರದ್ದರಿಂದ ನಮ್ಮ ಪ್ರಕಾಶನದಿಂದ ಅದನ್ನು ಬಿಡುಗಡೆ ಮಾಡಿದ್ದೇವೆ. ಬೆಲೆ : 25 ರೂ. ಆಸಕ್ತರು ತರಿಸಿಕೊಳ್ಳಿರಿ.]





ಬೀದರ್ ಜಿಲ್ಲೆ ಔರಾದ ತಾಲೂಕಿನಲ್ಲಿರುವ ಎಕಲಾರ ಗ್ರಾಮದಲ್ಲಿ ದಿ.11-5-2006 ರಂದು ಬಸವ ತತ್ತ್ವ ಸಮಾವೇಶ. ತರನೆ ಚಂದ್ರಮ್ಮ ಮಾತೆ ಸತ್ಯಾದೇವಿ, ಪೂಜ್ಯ ಮಾತಾಜಿ, ಪೂಜ್ಯ ಚನ್ನಬಸವಾನಂದ ಸ್ವಾಮಿಗಳು, ಮಾಜಿ ಸಚಿವ ಗುರುಪಾದಪ್ಪ ನಾಗಮಾರಪಳ್ಳಿ, ಬೀದರ್ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ದಿವಾಕರ್, ಗಂಗಶೆಟ್ಟಿ ಪಾಟೀಲ್ ವಕೀಲರು.




ಎಕಲಾರ ಗ್ರಾಮದಲ್ಲಿ ಬಸವ ಸಮುದಾಯ ಭವನಕ್ಕೆ ಶಂಕು ಸ್ಥಾಪನ ಫಲಕ ಅನಾವರಣ. ಮಾಜಿ ಸಚಿವರಾದ ಗುರುಪಾದಪ್ಪ ನಾಗಮಾರಪಳ್ಳಿ ಚಿತ್ರದಲ್ಲಿದ್ದಾರೆ.



ಬಸವ ತತ್ತ್ವ ಸಮಾವೇಶವನ್ನು ಉದ್ಘಾಟಿಸುತ್ತಿರುವ ಬಿ.ಜೆ.ಪಿ ಜಿಲ್ಲಾಧ್ಯಕ್ಷ ಮತ್ತು ವಿಧಾನ ಪರಿಷತ್ ಸದಸ್ಯರಾದ ಜನಾರ್ಧನ ರೆಡ್ಡಿ
ಕನ್ನಡ ಸಾಹಿತ್ಯ ಪರಿಷತ್ ಬಳ್ಳಾರಿ ಜಿಲ್ಲಾಧ್ಯಕ್ಷರಾದ ನಿಷ್ಠಿ ರುದ್ರಪ್ಪನವರು ಚಿತ್ರದಲ್ಲಿದ್ದಾರೆ.




ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ ಅಧ್ಯಕ್ಷರಾದ ಶರಣ ವೀರಣ್ಣ ಲಿಂಗಾಯತ್ ಅವರಿಂದ "ಲಿಂಗಾಯತ ಧರ್ಮ ಸಾರ" ಪುಸ್ತಕ ಬಿಡುಗಡೆ



ಬಳ್ಳಾರಿ ರಾಷ್ಟ್ರೀಯ ಬಸವ ದಳದವರು ಏರ್ಪಡಿಸಿದ್ದ ಬಸವ ಧರ್ಮ ಸಮಾವೇಶ ಮತ್ತು ಗುರು ವಂದನೆ.




ಬಳ್ಳಾರಿ ರಾಷ್ಟ್ರೀಯ ಬಸವ ದಳದ ಯುವ ಕಾರ್ಯಕರ್ತರಿಂದ "ಕಲ್ಯಾಣ ಬಸವಣ್ಣ" ಕೋಲಾಟ




ಬಳ್ಳಾರಿ ರಾಷ್ಟ್ರೀಯ ಬಸವ ದಳದವರಿಂದ ಪೂಜ್ಯ ಮಾತಾಜಿ 60 ವರ್ಷ ಪೂರೈಸಿ 61ಕ್ಕೆ ಪಾದಾರ್ಪಣ ಮಾಡಿದ್ದಕ್ಕಾಗಿ ಗುರು ವಂದನೆ.




ಪೂಜ್ಯ ಮಾತಾಜಿಯವರಿಗೆ ಭಕ್ತಿಪೂರ್ಣವಾಗಿ ಆರತಿ




ಹುಮ್ನಾಬಾದ್ ನಗರದಲ್ಲಿ ನಡೆದ ಪೂಜ್ಯ ಗಂಗಾಮಾತಾಜಿಯವರ ಪ್ರವಚನ ಮಂಗಲ ಸಮಾರಂಭಕ್ಕೆ ದಿ.24-6-2006ರಂದು ಪೂಜ್ಯ ಮಾತಾಜಿ ಆಗಮಿಸಿದಾಗ




ಭವ್ಯ ಸ್ವಾಗತ ಕೋರಿ ಪ್ರವಚನ ವೇದಿಕೆಗೆ ಪೂಜ್ಯ ಮಾತಾದ್ವಯರನ್ನು ಕರೆತರುತ್ತಿರುವ ಶರಣ ಸಮೂಹ




ಮೆರವಣಿಗೆ ಹಾಗೂ ಪಥ ಸಂಚಲನದಲ್ಲಿ ಕೋಲಾಟ ಮಾಡುತ್ತಿರುವ ಬೀದರ್ ರಾ.ಬ.ದಳ, ಗಣಾಚಾರ ದಳದ ಕಾರ್ಯಕರ್ತರು.




ಧ್ವಜಾರೋಹಣ ಶರಣ. ಮಲ್ಲಪ್ಪ ಉದಗೀರ್, ಗುಲಬರ್ಗಾ ಇವರಿಂದ



ಪ್ರವಚನ ಸಮಾರೋಪ ಸಮಾರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡುತ್ತಿರುವ ಪೂಜ್ಯ ಮಾತೆ ಗಂಗಾದೇವಿ.




ಕಾರ್ಯಕ್ರಮದ ಉದ್ಘಾಟನೆ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಅವರಿಂದ



ಕಾರ್ಯಕ್ರಮದ ವೇದಿಕೆಯ ಮೇಲೆ ಎಡದಿಂದ ಬಲಕ್ಕೆ ಸುಭಾಷ್ ಅಷ್ಟೀಕರ್, ಬಸವ ರತ್ನಾ ಮಾತಾಜಿ, ಪೂಜ್ಯ ಮಾತಾಜಿ, ಗಂಗಾ ಮಾತಾಜಿ, ಹುಮ್ನಾಬಾದ್ ರಾ.ಬ.ದಳ ಅಧ್ಯಕ್ಷೆ ಶಾರದಾ ಕಂಟೆಪ್ಪ ದಾನಾ, ಶಿವರಾಜ್ ಪಾಟೀಲ್ ಅತಿವಾಳ, ಆರ್.ಜಿ. ಶೆಟಗಾರ್.



ಬಸವಕಲ್ಯಾಣ ಬಸವ ಮಹಾಮನೆಯಲ್ಲಿರುವ ಅಕ್ಕನಾಗಲಾಂಬಿಕಾ ಅನಾಥಾಲಯದ ಮಕ್ಕಳಿಂದ ಒಂದು ಗೀತ ನೃತ್ಯ.



ದಿ.25-6-2006ರಂದು ಬೆಳಿಗ್ಗೆ ಬಸವ ತತ್ತ್ವ ಸಮಾವೇಶ. ಆಂಧ್ರ ಪ್ರದೇಶ್ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಧನರಾಜ್ ಜೇರಿಗೆ ಅವರಿಂದ ಉದ್ಘಾಟನೆ.



ಹುಮ್ನಾಬಾದ್ ರಾಷ್ಟ್ರೀಯ ಬಸವ ದಳದ ಉದ್ಘಾಟನೆ ದಿ.25-6-2006, ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿ, ರಾ.ಬ.ದಳ ಅಧ್ಯಕ್ಷೆ ಶರಣೆ ಶಾರದಾ ಕಂಟೆಪ್ಪ ದಾನಾ, ಪ್ರಧಾನ ಸಂಚಾಲಕರಾದ ಪಾರ್ವತಮ್ಮ ವೈರಾಗಿ, ಹೈದರಾಬಾದ್ ರಾ.ಬ.ದಳ ಅಧ್ಯಕ್ಷರಾದ ಧನರಾಜ್ ಜೇರಿಗೆ

# ವಿಚಾರ ಕಿರಣ

**1. ರತ್ನ ಮೌಕ್ತಿಕದಚ್ಚು ನಮ್ಮ ಶರಣರು** - ಮಾತಾಜಿ

ಗುರು ಬಸವಣ್ಣನವರು ಶರಣರನ್ನು ಆದರಿಸುವುದು ಮಾತ್ರವಲ್ಲ ಅಪಾರವಾಗಿ ಪ್ರೀತಿಸುತ್ತಿದ್ದರು. ಅದಕ್ಕಾಗಿಯೇ ಒಂದು ವಚನದಲ್ಲಿ ರತ್ನ ಮೌಕ್ತಿಕದಚ್ಚು ನಮ್ಮ ಲಿಂಗದೇವನ ಶರಣರು ಎನ್ನುತ್ತಾರೆ. ಅವರೊಡನೆ ಸುಖದುಃಖ ಮಾತ್ರವಲ್ಲ ತಮ್ಮ ಜ್ಞಾನವನ್ನು ಹಂಚಿಕೊಳ್ಳುತ್ತಿದ್ದರು. ಮತ್ತು ಶರಣರಿಂದ ಅಪಾರವಾದ ಮಾರ್ಗದರ್ಶನ, ಸಲಹೆ ಸಿಗುವುದೆಂದು ಸಹ ನಂಬಿದ್ದರು. ಇಂಥ ಕೆಲವು ಅನುಭವ ನಮಗೂ ಆಗುತ್ತವೆ.

ದಿ.4-6-2006 ರಂದು ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆಯ ನಂತರ ಶೂನ್ಯ ಸಂಪಾದನೆಯ ಮೇಲೆ ಪ್ರವಚನ ಹೇಳುತ್ತಿದ್ದೆ. ಮರುದಿನ ಸೋಮವಾರ ಬೆಂಗಳೂರಲ್ಲಿ ಒಂದು ವಿಚಾರ ಸಂಕಿರಣವನ್ನು ದೇವಾಂಗ ಸಂಘದವರು ದೇವರ ದಾಸಿಮಯ್ಯನ ಕುರಿತು ಏರ್ಪಡಿಸಿರುವ ಬಗ್ಗೆ ಪ್ರಸ್ತಾಪಿಸುತ್ತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ದಾಸಿಮಯ್ಯ ಪೀಠವನ್ನು ಮಾಡಲಾಗುತ್ತಿದೆ. ಸಂತೋಷ, ದೇವರ ದಾಸಿಮಯ್ಯನವರೂ ಒಬ್ಬ ಮಹಾತ್ಮರೆ. ದೇವರ ದಾಸಿಮಯ್ಯ - ಜೇಡರ ದಾಸಯ್ಯ ಬೇರೆ ಬೇರೆ; ದೇವರ ದಾಸಿಮಯ್ಯ ವಚನಕಾರರಲ್ಲ, ಜೇಡರ ದಾಸಯ್ಯ ವಚನಕಾರರು; ಅವರನ್ನು ಮೊದಲನೆಯ ವಚನಕಾರರು ಎನ್ನುವುದು ತಪ್ಪು, ಅವರು ಅನುಭವ ಮಂಟಪದಲ್ಲಿ ಇದ್ದ ಶರಣರು ಎಂದು ನಾನು ವಿವಿಧ ಆಧಾರಗಳನ್ನು ಮಂಡಿಸುತ್ತಿದ್ದೆ. ಆಗ ಶರಣೆ.ಸುಧಾ ಎನ್ನುವವರು "ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ." ಎಂದು ಜೇಡರ ದಾಸಯ್ಯನವರು ಹೇಳಬೇಕಾದರೆ ಇತರ ಶರಣರು ಇದ್ದರು, ಅವರ ಸೂಳ್ನುಡಿಗಳಿದ್ದವು ಎಂದು ಅರ್ಥವಾಗುವುದಲ್ಲವೆ ?" ಎಂದು ಹೇಳಿದರು. ನನಗೆ ಬಹಳ ಸಂತೋಷವೆನಿಸಿತು. ಒಬ್ಬ ಸಾಮಾನ್ಯ ಗೃಹಣಿ ಸುಧಾ ಎಷ್ಟು ಚೆನ್ನಾಗಿ ಚಿಂತನೆ ಮಾಡಿದಳಲ್ಲ ಎನಿಸಿತು. ಮಾತ್ರವಲ್ಲ ದೇವರ ದಾಸಿಮಯ್ಯ ಆದ್ಯ ವಚನಕಾರ, ಗುರು ಬಸವಣ್ಣನವರಿಗೂ ಸುಮಾರು 100 ವರ್ಷ ಹಿಂದಿನವರ ಎಂದು ಹೇಳುವ ಕೆಲವು ಸಂಶೋಧಕರು, ಸಾಹಿತಿಗಳ ಬಗ್ಗೆ ಮರುಕ ಉಂಟಾಯಿತು.

**2. ಗುರು ಬಸವಣ್ಣನವರು ಗಣಾಧಿಪತಿ**

ಸೋಮವಾರ, ದಿ.5 ರಂದು ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ವೀರಣ್ಣ ಲಿಂಗಾಯತ್ ಅವರು ದೂರವಾಣಿ ಮಾಡಿ ಹೇಳಿದರು. "ಗುರು ಬಸವಣ್ಣನವರಿಗೆ ಎಲ್ಲರಿಗಿಂತಲೂ ಹೆಚ್ಚಿನ ಸ್ಥಾನ ಕೊಡಬೇಕು. ಏಕೆಂದರೆ ಅವರು ಕೊಟ್ಟ ತತ್ತ್ವಗಳಿಂದಲೇ ಉಳಿದ ಶರಣರು ಬಾಳನ್ನು ಬೆಳಗಿಸಿಕೊಂಡರು. ಆದ್ದರಿಂದ ಷಡ್‌ಗಣಾಧೀಶರಲ್ಲಿ ಒಬ್ಬರು ಎಂದು ಭಾವಿಸಬಾರದು. ಇನ್ನೊಬ್ಬ ಶರಣರನ್ನು ಸೇರಿಸಿ ಷಟ್‌ಗಣಾಧೀಶರನ್ನು ಮಾಲೆ ಮಾಡಬೇಕು." ಎಂದರು. ನನಗೆ ತುಂಬಾ ಸಂತೋಷವಾಯಿತು. ನಮ್ಮ ಶರಣ ಬಂಧುಗಳು ಹೇಗೆ ಸದಾ ಧರ್ಮದ ಬಗ್ಗೆ ಚಿಂತನೆಯನ್ನು ಮಾಡುವರು ಎಂದು ಅಭಿಮಾನವೆನಿಸಿತು.

"ನಿಜ. ನನ್ನಲ್ಲೂ ಅದೇ ವಿಚಾರ ಬಂದಿತ್ತು. ಉಳಿದ ಶರಣರಿಗಿಂತ ಗುರು ಬಸವಣ್ಣನವರನ್ನೇ ಮಾತಾಜಿ ತುಂಬಾ ಎತ್ತಿಹಿಡಿಯುತ್ತಾರೆ. ಎಂಬ ಭಾವ ಆ ಶರಣರುಗಳ ಅಭಿಮಾನಿಗಳಲ್ಲಿ ಬರಬಾರದು ಎಂಬ ಆತಂಕದಿಂದ ಷಡ್‌ಗಣಾಧೀಶರಲ್ಲಿ ಪ್ರಥಮರನ್ನಾಗಿ ಗುರು ಬಸವಣ್ಣನವರನ್ನು ನಾನು ಇಟ್ಟೆ." "ನೀವು ಮಾಡಲು ಆನಾದೆನಲ್ಲದೆ ಎನಗೆ ಬೇರೆ ಸ್ವತಂತ್ರವುಂಟೆ?" ಎಂದು ಅಲ್ಲಮ ಪ್ರಭು ದೇವರಂತಹವರೇ ಹೇಳಿರುವಾಗ ಇನ್ನು ಸಂಕೋಚವೇಕೆ? ಈಗ ನಮ್ಮ ಶರಣ ಬಂಧುಗಳು ಸಹ "ಬಸವ ದರ್ಶನ" ಓದಿ ಗುರು ಬಸವಣ್ಣನವರ ವ್ಯಕ್ತಿತ್ವವನ್ನು ಅರಿತುಕೊಂಡಿದ್ದಾರೆ. ಆದ್ದರಿಂದ ಕಾಲ ಪಕ್ವವಾಯಿತು. ಗುರು ಬಸವಣ್ಣನವರನ್ನು "ಗಣಾಧಿಪತಿ" ಎನ್ನೋಣ. ಷಡ್‌ಗಣಾಧೀಶರಲ್ಲಿ ವಚನ ಸಾಹಿತ್ಯ ಸಂರಕ್ಷಣೆ ಮಾಡಿದ್ದಲ್ಲದೆ ನಂತರ ಬಸವ ಧರ್ಮವನ್ನು ಪಸರಿಸಿದ ವೀರ ಮಾತೆ ಅಕ್ಕನಾಗಲಾಂಬಿಕೆಯನ್ನು ಆರನೆಯವರನ್ನಾಗಿ ಇಡೋಣ. ಮುಂದಿನ ಶರಣ ಮೇಳದಲ್ಲಿ ಈ ಬದಲಾವಣೆಯನ್ನು ಅಧಿಕೃತವಾಗಿ



ಘೋಷಿಸೋಣ." ಎಂದು ಶರಣ ವೀರಣ್ಣನವರಿಗೆ ಹೇಳಿದೆ. ನನ್ನ ಅಂತರಂಗದಲ್ಲಿದ್ದ ಆಲೋಚನೆಗೆ ಅವರು ಧ್ವನಿ ಕೊಟ್ಟಿದ್ದು ಸಂತೋಷ ತಂದಿತು.

### 3. ಗುರು ಬಸವಣ್ಣ

ಒಂದು ದಿವಸ ಅವಿನಾಶ್ ಎಂಬ ವೈದ್ಯಕೀಯ ವಿದ್ಯಾರ್ಥಿ ಬಂದಿದ್ದರು. ಚಿಕ್ಕ ಹುಡುಗನಿಂದಲೂ ಪ್ರವಚನ ಕೇಳಿ, ಸಂಸ್ಕಾರಗೊಂಡ ವ್ಯಕ್ತಿ. "ಗುರು ಬಸವಣ್ಣನವರ ಬಗ್ಗೆ ನಮ್ಮ ಚಿತ್ತಭಿತ್ತಿಯಲ್ಲಿ ದಿವ್ಯ ಭವ್ಯ ಚಿತ್ರಣ ಮೂಡಿರುವುದು. ಆಗ ಭಾಷಣಕಾರರು ಯಾವುದೇ ವಿಶೇಷಣವಿಲ್ಲದೆ ಬಸವ, ಬಸವಣ್ಣ , ಬಂದ ಹೋದ ಎಂದೆಲ್ಲ ಅಂದಾಗ ತುಂಬಾ ದುಃಖವಾಗುತ್ತದೆ. ಸಿಖ್ಖರು ಹೇಗೆ ಕೇವಲ ನಾನಕರು ಎನ್ನದೆ ಗುರು ನಾನಕ್ ಎಂದು ಜನರಲ್ಲಿ ರೂಢಿ ಮಾಡಿದ್ದಾರೋ ಹಾಗೆ ನಾವು ಸಹ ಗುರು ಬಸವಣ್ಣ ಎಂದೇ ಪ್ರಯೋಗಿಸಬೇಕು ಮತ್ತು ಲೇಖನದಲ್ಲಿ ಉಪನ್ಯಾಸದಲ್ಲಿ ರೂಢಿಗೆ ತರಬೇಕು." ಎಂದು ಹೇಳಿದರು.

ಇದಕ್ಕೆ ನಮ್ಮ ಪೂರ್ಣ ಅನುಮೋದನೆ ಇದೆ ಎಂದು ಬೇರೆ ಹೇಳಬೇಕಾಗಿಲ್ಲವಷ್ಟೆ !

### 4. ಶರಣರ ಪ್ರಾಮಾಣಿಕತೆ

ಬಳ್ಳಾರಿಯಲ್ಲಿ ಬೆಳಗಿನ ವಿವಾಹ ಕಾರ್ಯಕ್ರಮ ಮುಗಿದು ಸಂಜೆಯ ಬಸವ ತತ್ತ್ವ ಸಮಾವೇಶಕ್ಕೆಂದು ವೇದಿಕೆಯ ಮೇಲೆ ಕುಳಿತಿದ್ದೆ. ನಮ್ಮ ಸಹಾಯಕರು ಗಾಡಿಯ ಬಳಿ ಸಾಮಾನು ಇಡುವುದರಲ್ಲಿ ನಿರತರಾಗಿದ್ದರು. ವೇದಿಕೆಯ ಮೇಲೆ ನಾನು ಕಾಣುತ್ತಲೇ ಶರಣ ಬಂಧುಗಳು ಧಾವಿಸಿ ಬಂದು ದರ್ಶನ ಪಡೆದುಕೊಳ್ಳಲಾರಂಭಿಸಿದರು. ಅವರು ಕೊಟ್ಟ ಕಾಣಿಕೆಗಳನ್ನು ಮುಂದಿನ ಟೀಪಾಯ್ ಮೇಲೆ ಇಡುತ್ತಿದ್ದೆ. ಅಷ್ಟರಲ್ಲಿ ಒಬ್ಬರು ಒಂದು ಬಟ್ಟಲನ್ನು ತಂದು ಇಟ್ಟು, ಟೀಪಾಯ್ ಮೇಲೆ ಇದ್ದ ಹಣವನ್ನು ಅದರಲ್ಲಿ ಹಾಕಿಟ್ಟರು. ನಂತರ ಬಂದ ಹಣವನ್ನು ಅದರಲ್ಲೇ ಹಾಕಿದೆ. ಕಾರ್ಯಕ್ರಮದ ಮಧ್ಯೆ ನಮಗೆ ಪುಷ್ಪವೃಷ್ಟಿ ಮಾಡಲೆಂದು ಆ ಟೀಪಾಯನ್ನು ಬೇರೆಡೆ ಇಟ್ಟರು. ವೇದಿಕೆಯ ಮೇಲೆ ಬಹಳ ಜನ ಬಂದರು; ಕಾರ್ಯಕ್ರಮ ನಡೆಯಿತು. ಮುಗಿದ ಮೇಲೆ ನಾವು ರಾತ್ರಿ 10 ಗಂಟೆಗೆ ಪ್ರಯಾಣ ಬೆಳೆಸಿದೆವು. ರಾತ್ರಿ 11-30ರ ಸುಮಾರಿಗೆ ಬಳ್ಳಾರಿಯ ಶರಣ ಮಲ್ಲಿಕಾರ್ಜುನರಿಂದ ಫೋನ್ ಬಂದಿತು. ದೊಡ್ಡ ವಿಭೂತಿ ಇಡುವ ಬಟ್ಟಲಲ್ಲಿ ಹಣ ಇದೆಯೆಂದೂ, ಸಾಮಾನು ಎತ್ತುವಾಗ ಕಂಡಿತು ಎಂದು. ಎಣಿಸಿದಾಗ 4120 ರೂ ಇದ್ದವಂತೆ. ಅವನ್ನು ಡಿ.ಡಿ ಮಾಡಿ ಕಳಿಸುವುದಾಗಿ ತಿಳಿಸಿದರು. ರಾ.ಬ.ದಳದ ಶರಣರ ಪ್ರಾಮಾಣಿಕತೆ ಕಂಡು ತುಂಬಾ ಸಂತೋಷವಾಯಿತು.

### 5. ಪ್ರಚಾರಕ್ಕಾಗಿ ಓಟ

ಬೆಂಗಳೂರಿನಲ್ಲಿ ವಿಧಾನ ಸೌಧದ ಮುಂದೆ ಆಗಾಗ ಓಟಗಳು ನಡೆಯುತ್ತವೆ. ಏಡ್ಸ್ ನಿರ್ಮೂಲನೆಗಾಗಿ, ಪರಿಸರ ಸಂರಕ್ಷಣೆಗಾಗಿ. ಕೆಲವೊಮ್ಮೆ ಶಾಲೆಯ ಮಕ್ಕಳನ್ನು ಓಡಲು ಬಳಸಿಕೊಳ್ಳಲಾಗುವುದು. ಆ ಮಕ್ಕಳ ಕೈಲಿ ಏಡ್ಸ್‌ಗೆ ಸಂಬಂಧಿಸಿದ ಘೋಷಣಾ ಫಲಕಗಳು, ಚಿತ್ರಗಳು ಕಂಡಾಗ ಮನಸ್ಸಿಗೆ ವಿಷಾದವೆನಿಸುತ್ತದೆ.

ಅಂಥ ಒಂದು ಓಟ ಹೈಕೋರ್ಟ್ ನ್ಯಾಯಧೀಶರುಗಳಿಂದ ನಡೆಯಿತು. ಅದರ ಉದ್ದೇಶ "ತ್ವರಿತ ನ್ಯಾಯದಾನಕ್ಕಾಗಿ". ಓದಿದಾಗ ಬಹಳ ತಮಾಷೆ ಎನಿಸಿತು. ನ್ಯಾಯವನ್ನು ಕೊಡುವವರೇ ನ್ಯಾಯಾಧೀಶರು. ವಕೀಲರುಗಳ ಜಗ್ಗಾಟ ಮತ್ತು ನ್ಯಾಯಾಧೀಶರ ನಿಧಾನ ಗತಿಯಿಂದಾಗಿ ನಮ್ಮ ದೇಶದಲ್ಲಿ ಶ್ರೀ ಸಾಮಾನ್ಯರು ಬಳಲಿ ಬೆಂಡಾಗುತ್ತಿದ್ದಾರೆ. ಪ್ರಾಜ್ಞರು ನ್ಯಾಯ ಮೂರ್ತಿಗಳಲ್ಲಿ ವಿಶ್ವಾಸವನ್ನೇ ಕಳೆದುಕೊಳ್ಳುವಂತಾಗಿದೆ. ಹೀಗಿದ್ದಾಗ ನ್ಯಾಯ ಮೂರ್ತಿಗಳೇ ತ್ವರಿತ ನ್ಯಾಯದಾನಕ್ಕಾಗಿ ಓಟ ಕೈಗೊಳ್ಳುವುದು ಹಾಸ್ಯಾಸ್ಪದವೆನಿಸದೆ?

ಈ ಓಟಗಳ ಉದ್ದೇಶ ಜನಸಾಮಾನ್ಯರನ್ನು ಜಾಗೃತಿಸುವುದಕ್ಕಿಂತಲೂ ಪತ್ರಿಕೆಗಳಲ್ಲಿ ಫೋಟೋಗಳು ಕಾಣಿಸಿಕೊಳ್ಳುವುದರಿಂದ ಅವುಗಳಲ್ಲಿ ಮಿಂಚುವುದೇ ಆಗಿದೆ ಎನ್ನಿಸದಿರದು.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಮೈಸೂರು ನಗರದ ರೇಲ್ವೆ ಸಮುದಾಯ ಭವನದಲ್ಲಿ

(ರೇಲ್ವೆ ವರ್ಕ್‌ಶಾಪ್ ಬಳಿ, ಮಾನಂದವಾಡಿ ರೋಡ್)

# ವಿಶ್ವಗುರು ಬಸವಣ್ಣನವರ ಸೇವಾರ್ಥ ಬಸವ ಜ್ಯೋತಿ ಕಾರ್ಯಕ್ರಮ

ರವಿ(ದೇವ)ವಾರ, ದಿ.16-7-2006 ರಂದು

ವೇಳೆ : ಬೆಳಿಗ್ಗೆ 10-00

ದಿವ್ಯ ಸನ್ನಿಧಿ : ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರು, ಶರಣ ಮೇಳದ ರೂವಾರಿಗಳೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು.



ವಿವಿಧ ರಾಷ್ಟ್ರೀಯ ಬಸವ ದಳಗಳವರು ಈ ಶರಣ ಸಮಾಗಮದಲ್ಲಿ ಪಾಲ್ಗೊಳ್ಳಬೇಕೆಂದು ಹೃತ್ಪೂರ್ವಕವಾಗಿ ಆಹ್ವಾನಿಸುತ್ತಿದ್ದೇವೆ.

## * ಸರ್ವರಿಗೂ ಆದರದ ಸುಸ್ವಾಗತ *

ಆಹ್ವಾನಿಸುವವರು :

ಶರಣೆ.ರತ್ನಮ್ಮ ಮತ್ತು ಶರಣ. ಎಂ.ಜಯಣ್ಣ (ಆರ್.ಪಿ.ಎಫ್)
ಮನೆ.ಸಂ.77, ರೇಲ್ವೆ ವರ್ಕ್‌ಶಾಪ್
ಮಾನಂದವಾಡಿ ರೋಡ್, ಮೈಸೂರು ದಕ್ಷಿಣ
ದೂರವಾಣಿ-0821-5520269/9844441672

[ ರೇಲ್ವೆ ಸಮುದಾಯ ಭವನವು ಮೈಸೂರು ದಕ್ಷಿಣ ಭಾಗದ ಮಾನಂದವಾಡಿ ರಸ್ತೆಯಲ್ಲಿದ್ದು ಸಿಟಿ ಬಸ್ ನಿಲ್ದಾಣದ ಪ್ಲಾಟ್ ಫಾರ್ಮ್ 3 ರಿಂದ, ರೂಟ್ ನಂ.2 ಮತ್ತು 8 ಬಸ್ಸುಗಳು ಸಂಚರಿಸುತ್ತವೆ. ]



ಸ್ಫುರಣ - ಕಿರಣ :

## ದೇವರು ಆಡಂಬರ ಪ್ರಿಯನೆ ?

-ಮಾತಾಜಿ

ಪ್ರವಾಸದ ವ್ಯಾಪಕತೆ ಮತ್ತು ಒತ್ತಡದಿಂದ; ಕಾರ್ಯಕ್ಷೇತ್ರವು ವಿಸ್ತಾರವಾಗಿರುವುದಲ್ಲದೆ ಬಸವ ಧರ್ಮ ಪೀಠದ ಅಂಗ ಸಂಸ್ಥೆಗಳ ಸಂಖ್ಯೆಯೂ ಜಾಸ್ತಿಯಾಗಿರುವುದರಿಂದ ಒಂದೇ ಜಾಗದಲ್ಲಿ ಇರುವುದೂ ಸಾಧ್ಯವಾಗುತ್ತಿಲ್ಲ. ಹೀಗಾಗಿ ಬೆಂಗಳೂರಿನಿಂದ ಹೊರಟು ಬಳ್ಳಾರಿ, ಧಾರವಾಡ, ಅಲ್ಲಮ ಪ್ರಭು ಗಿರಿ ಮುಂತಾಗಿ ಸಂಚರಿಸಿ ಕೂಡಲ ಸಂಗಮಕ್ಕೆ ಬರುತ್ತಿದ್ದೇನೆ ಎಂದು ತಿಳಿಸಿದಾಗ ಸಾಧಕ ವರ್ಗದವರಿಗೆ ಖುಷಿಯೋ ಖುಷಿ.

ಸಂಭ್ರಮದಿಂದ ಸ್ವಾಗತಿಸಿದರು ; ನನ್ನ ಕೋಣೆಗೆ ಬರುವಾಗ ಮಾರ್ಗದಲ್ಲಿರುವ ಹಾಲ್‌ವಲ್ಲಿ ಎಲ್ಲಾ ಕಡೆ ಲಭ್ಯವಿದ್ದ ಎಲ್ಲ ದೀಪಗಳನ್ನು ಹಚ್ಚಿ ಜಗಜಗಿಸುವಂತೆ ಮಾಡಿದ್ದಾರೆ. ಕೋಣೆಯಲ್ಲಿ ದೀಪಗಳನ್ನು ಹಚ್ಚಿ ಜಗಜಗಿಸುವಂತೆ ಮಾಡಿದ್ದಾರೆ. ಕೋಣೆ ಸ್ವಚ್ಛ ಮಾಡಿದ್ದಾರೆ. ಇದೇನೋ ಸರಿ. ಯಾರೂ ಇಲ್ಲದಲ್ಲಿ ಅನವಶ್ಯಕ ಲೈಟ್ ಇಷ್ಟೊಂದು ಹಚ್ಚಿಡುವ ಅಗತ್ಯವೇನಿತ್ತು ಎಂದು ಆಕ್ಷೇಪಿಸಿದೆ.

ಅಗತ್ಯವಿರುವಷ್ಟು ಲೈಟ್ ಮಾತ್ರ ಬಿಟ್ಟು ಉಳಿದವನ್ನು ಆರಿಸುತ್ತ ಬಂದೆ. ಆಗ ಆಲೋಚಿಸಿದೆ. ಬಹುಶಃ ನನ್ನನ್ನು ಸಂತೋಷಪಡಿಸಲೆಂದು ಹೀಗೆ ಲೈಟುಗಳನ್ನು ಹಚ್ಚಿದ್ದಾರೆ. ಅಂದಾಗ ನಾನು ಆಕ್ಷೇಪಿಸಿದ್ದು ಸರಿಯೆ ? ಎಂದು ನನ್ನಲ್ಲಿ ನಾನೇ ಪ್ರಶ್ನೆ ಕೇಳಿಕೊಂಡೆ.

ಅಂತರಾತ್ಮ ನುಡಿಯಿತು, "ಆಕ್ಷೇಪಿಸಿದ್ದು ಸರಿ; ಏಕೆಂದರೆ ಹಣವೇ ಇರಲಿ, ವಿದ್ಯುತ್ತೇ ಇರಲಿ; ಅಗತ್ಯಕ್ಕಿಂತ ಹೆಚ್ಚು ವ್ಯಯವಾದರೆ ಅದು ಅಪವ್ಯಯ. ಎಷ್ಟು ಜನ ಕಷ್ಟ ಪಟ್ಟು ದುಡಿದು ಕಾಣಿಕೆ ರೂಪದಲ್ಲಿ ಕೊಡುತ್ತಾರೆ. ಪೈಸೆ ಪೈಸೆಯೂ ಸದುಪಯೋಗವಾಗಬೇಕು."

ಆಗ ಒಂದು ಸ್ಫುರಣ ಮೂಡಿತು. "ನನ್ನನ್ನು ಹರ್ಷಗೊಳಿಸಲೆಂದೇ ಇಷ್ಟೆಲ್ಲ ದೀಪಗಳನ್ನು ಹಚ್ಚಿದರೂ ನನಗೆ ಸಂತೋಷವಾಗಲಿಲ್ಲ, ವಿದ್ಯುತ್ ತನ್ಮೂಲಕ ಹಣದ ಅಪವ್ಯಯವಾಯಿತಲ್ಲ ಎಂದು ಆತ್ಮೀಯ ಸಾಧಕರ ಮೇಲೇ ಸಿಟ್ಟು ಬಂದಿತು. ಅದೇ ರೀತಿ ದೇವರ ಹೆಸರಿನಲ್ಲಿ, ದೇವರನ್ನು ಸಂತೋಷ ಪಡಿಸಬೇಕೆಂದು ಜನರು ಲಕ್ಷ ದೀಪೋತ್ಸವ, ಸಹಸ್ರ ಕುಂಭಾಭಿಷೇಕ, ಯಾಗ ಮುಂತಾಗಿ ಮಾಡಿ ಎಣ್ಣೆ ನೀರು, ಹಾಲು, ತುಪ್ಪ ಮುಂತಾಗಿ ಚೆಲ್ಲಿ ಸುಟ್ಟು ಅಪವ್ಯಯ ಮಾಡಿದರೆ ದೇವರು ಸಂಪ್ರೀತನಾಗುವ ಬದಲಿಗೆ ಸಿಟ್ಟಾಗುವುದಿಲ್ಲವೆ ?."

## ಇಳೆಯನ್ನಗಲಿದ ಶರಣ.ಬಸವರಾಜ

ಲುಕ್ಕ ದಿ.17-6-2006, ಬಳ್ಳಾರಿಯ ರಾಘವ ಕಲಾ ಮಂದಿರಕ್ಕೆ ಬಂದೆವು. ಮದುವೆಯಾಗಲಿದ್ದ ವಧುವರರಿಗೆ ದೀಕ್ಷಾ ಸಮಾರಂಭ. ವೇದಿಕೆಗೆ ಸಂಜೆ 6-30ಕ್ಕೆ ಹೋಗುತ್ತಲೇ ಬಾಗಲಕೋಟೆ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷ ಶರಣ ಬಸವರಾಜ ಲುಕ್ಕ ಅವರು ನಗುನಗುತ್ತಾ ವೇದಿಕೆಗೆ ಬಂದರು. "ಅಪರೂಪಕ್ಕೆ ಬಂದು ಬಿಟ್ಟರಲ್ಲಾ." ಎಂದು ನಾನು ಶರಣೆ.ಲೀಲಾವತಿ ನಾಡಗೌಡರು ತಮಾಷೆ ಮಾಡಿದೆವು. ಅಪರೂಪಕ್ಕೆ ಅವರ ಶ್ರೀಮತಿಯವರನ್ನು ಕರೆತಂದಿದ್ದರು. ಎಲ್ಲರನ್ನೂ ಮಾತನಾಡಿಸಿ ನಕ್ಕು ನಲಿದರು. ಎದುರಿಗೇ ಕುಳಿತು ಇಷ್ಟಲಿಂಗ ಪೂಜೆ ನೋಡಿ ದೀಕ್ಷಾ ಸಮಾರಂಭ ವೀಕ್ಷಿಸಿದರು. ಬೆಳಗಿನ ಜಾವ 4 ಗಂಟೆಗೆ ಯಾಕೋ ಕಸಿವಿಸಿಯಾಗುತ್ತದೆ ಎಂದು ಶೌಚಕ್ಕೆ ಹೋಗಬೇಕೆಂದವರನ್ನು ಅವರ ಶ್ರೀಮತಿ ಕರೆದೊಯ್ದಾಗ ಅಲ್ಲೇ ಕುಸಿದರಂತೆ. ತಡಮಾಡದೆ ಆಸ್ಪತ್ರೆಗೆ ಕರೆದೊಯ್ದರೂ ಸಹ ಪರೀಕ್ಷಿಸಿದ ವೈದ್ಯರು ಹೃದಯಾಘಾತವಾಗಿದೆ; ಪ್ರಾಣಪಕ್ಷಿ ಹಾರಿ ಹೋಗಿದೆ ಎಂದರಂತೆ. 75 ವರ್ಷಗಳ ತುಂಬು ಜೀವನ ನಡೆಸಿದ ಶರಣ ಬಸವರಾಜ ಲುಕ್ಕ ಬಸವ ಪಥಿಕರು. ಶರಣರ ಜೀವನವನ್ನು ಮರಣದಲ್ಲಿ ನೋಡು ಎಂಬಂತೆ ನಗುನಗುತಲೇ ಗುರು ಲಿಂಗ ಜಂಗಮದ ದರ್ಶನ ಪಡೆದು ಇಹಲೋಕ ಯಾತ್ರೆ ಮುಗಿಸಿದರು. ಅವರ ಪಾರ್ಥಿವ ಶರೀರವನ್ನು ಬಳ್ಳಾರಿಯಲ್ಲಿ ಬಸವ ನಗರದಲ್ಲಿರುವ ಬಸವ ಮಂಟಪಕ್ಕೆ ಒಯ್ದು ಸ್ನಾನ-ಪೂಜೆ ಮಾಡಿಸಿ, ಪುಷ್ಪವೃಷ್ಟಿ-ಆರತಿ ಮಾಡಿ ಬೀಳ್ಕೊಟ್ಟೆವು ಶರಣ.ಅಂಗಡಿಯವರು ಟ್ಯಾಕ್ಸಿಯಲ್ಲಿ ಬಾಗಲಕೋಟೆಗೆ ಒಯ್ದರು. ಕಡೆಯ ಕ್ಷಣದವರೆಗೂ ಕ್ರಿಯಾಶೀಲರಾಗಿದ್ದ ಬಸವರಾಜ್ ಲುಕ್ಕ ಅಭಿನಂದನೀಯರು. ಅವರ ನಿಧನ ಬಾಗಲಕೋಟೆ ರಾ.ಬ.ದಳಕ್ಕೆ ತುಂಬಿ ಬಾರದ ನಷ್ಟ.

# ಘೋಟಾ ಮಹಾಬಳೇಶ್ವರ
## ಅಲ್ಲಮ ಪ್ರಭು ಗಿರಿ - ಒಂದು ವೀಕ್ಷಕ ವಿವರಣೆ

-ಮಾತಾಜಿ

2006ರ ಜನವರಿ 31ಕ್ಕೆ ಸುಮಾರು 14 ಎಕರೆ ಜಮೀನನ್ನು ಅಲ್ಲಮ ಪ್ರಭು ಗಿರಿಯಲ್ಲಿ ಖರೀದಿಸಿ, ಲಭ್ಯವಿದ್ದ ಅತ್ಯಲ್ಪ ಸಮಯದಲ್ಲಿ ನೀರಿನ ಒಂದು ದೊಡ್ಡ ಟ್ಯಾಂಕ್, ಸಾಮಾನು ಸಂಗ್ರಹಣೆ ಮತ್ತು ವಸತಿಗಾಗಿ 22 ಅಡಿ 50 ಅಡಿ ಅಳತೆಯ ಶೆಡ್ ನಿರ್ಮಾಣ ಮಾಡಿ, ಮಾರ್ಚ್ 29, 30, 31 ರಂದು 3 ದಿವಸಗಳ ಸಮ್ಮೇಳನ ಪ್ರಥಮ ಲಿಂಗಾಯತ ಗಣ ಮೇಳವನ್ನು ನಡೆಸಲಾಯಿತು. ಪೆಂಡಾಲ್, ತಾತ್ಕಾಲಿಕ ವಸತಿಗೆ ಟೆಂಟ್, ಅಡಿಗೆ-ಊಟಕ್ಕಾಗಿ ಟೆಂಟ್ ಮಾಡಿ ಕಾರ್ಯಕ್ರಮವನ್ನು ನಡೆಸಿದೆವು. ಅವೆಲ್ಲವೂ ಬೇಸಿಗೆಯ ಸಮಯ; ಬಿಸಿಲು ಬಹಳವಿದ್ದರೂ ಗುಡ್ಡದ ನೆತ್ತಿಯ ಮೇಲೆ ನಮ್ಮ ಜಾಗ ಇರುವುದರಿಂದ ಯಾವಾಗಲೂ ಗಾಳಿ ಬೀಸುವುದರಿಂದ ಅಷ್ಟೊಂದು ಬಿಸಿಲ ಧಗೆಯ ಅನುಭವ ಆಗುವುದಿಲ್ಲ. ಪುನಃ ಒಂದೆರಡು ಬಾರಿ ಸಂದರ್ಶಿಸಿದೆನು.

ಇಲ್ಲಿಯ ಗಾಳಿಯನ್ನು ಉಸಿರಾಡುವುದೇ ಒಂದು ಅದ್ಭುತ ಅನುಭವ. ನಮ್ಮ ಜಾಗ ಇರುವುದು ಗುಡ್ಡದ ನೆತ್ತಿಯ ಮೇಲೆ; ಇದರ ಸುತ್ತಲೂ ಕಣಿವೆಗಳು. ಒಂದು ಬದಿಗಂತೂ ಆಳವಾದ ಕಣಿವೆ. ಇಲ್ಲಿ ಯಾವುದೇ ವಾಹನಗಳ ಸಂಚಾರಕ್ಕೆ ಅವಕಾಶವಿಲ್ಲ. ಶುದ್ಧ ತಂಗಾಳಿ ಬೀಸಿ ಶ್ವಾಸಕೋಶಗಳನ್ನು ಶುದ್ಧೀಕರಿಸುತ್ತದೆ.

ಸೂರ್ಯೋದಯ - ಸೂರ್ಯಾಸ್ತ ಎರಡೂ ನಮ್ಮ ಜಾಗದಲ್ಲಿ ನಿಂತವರಿಗೆ ಬಹಳ ಸುಂದರವಾಗಿ ಕಾಣುತ್ತವೆ.

ಚೈತ್ರ ಪ್ರತಿಪದೆ ಯುಗಾದಿ - ಮರಾಠಿಯಲ್ಲಿ ಗುಡಿ ಪಾಡ್ವ ಅನ್ನುವರು, ನಿಮಿತ್ತ ಸಮ್ಮೇಳನ ಇಟ್ಟುಕೊಂಡೆವು. ಅಲ್ಲಮ ಪ್ರಭು ದೇವರು ಹುಟ್ಟಿದ್ದು ಮತ್ತು ಶೂನ್ಯ ಪೀಠಾರೋಹಣ ಮಾಡಿದ್ದು ಯುಗಾದಿ ಪ್ರತಿಪದೆಯಂದು ಎಂಬ ಐತಿಹಾಸಿಕ ಸಂಗತಿಯ ಹಿನ್ನೆಲೆಯಲ್ಲಿ ಸಮ್ಮೇಳನವನ್ನು ಅಲ್ಲಮ ಪ್ರಭು ಗಿರಿಯಲ್ಲಿ ಏರ್ಪಡಿಸಲಾಗಿತ್ತು. ಆಗ ರಸ್ತೆಯುದ್ದಕ್ಕೂ ಇದ್ದ ಗಿಡಗಳು ಚಿಗುರೊಡೆದಿರಲಿಲ್ಲ. ಒಣಗಿಯೇ ನಿಂತಿದ್ದವು. ಈಗ ಮಳೆಗಾಲವಾದ್ದರಿಂದ ದಿ.20-6-2006ರಂದು ಗುಡ್ಡವನ್ನು ಏರುತ್ತ ಬಂದಂತೆ ಗಿಡಗಳ ಹಸಿರು ಸಂಭ್ರಾಂತಗೊಳಿಸಿತು. ಆಗ ಕಡು ಬೇಸಿಗೆ; ಹುಲ್ಲು ಒಣಗಿದ್ದರೆ ಈಗ ಗುಡ್ಡಗಳಿಗೆಲ್ಲ ಹಸಿರು ರತ್ನಗಂಬಳಿ ಹಾಸಿದಂತೆ ಹುಲ್ಲಿನ ಹಾಸಿಗೆ, ನೋಡುತ್ತಾ ಬಂದಂತೆ ಕಣ್ಣು ತುಂಬಿತು. ಜಾಗ ಖರೀದಿಸಿ ತಕ್ಷಣ ಮಾಡಿದ ಮೊದಲ ಕೆಲಸವೆಂದರೆ ಬೋರ್ ಹಾಕಿಸಿದ್ದು. ಸ್ಫಟಿಕದಷ್ಟು ಶುಭ್ರವಾದ ಸಿಹಿ ರುಚಿಯ ನೀರು ಸಿಕ್ಕಾಗ ಎಲ್ಲರಿಗೂ ಬಹಳ ಸಂತೋಷ. ಹೆಚ್ಚಿನ ಪ್ರಮಾಣದಲ್ಲಿ ನೀರು ಸಿಕ್ಕಿಲ್ಲವಾದರೂ ದಿನಕ್ಕೆ ಸುಮಾರು 2000 ಲೀಟರ್ ಸಿಕ್ಕುವುದು. ಆದರೆ ಸುತ್ತಲೆಲ್ಲೂ ನೀರು ಇಲ್ಲವಾದ ಕಾರಣ ಪ್ರಾಣಿಗಳಿಗೆ, ದನ - ಕುರಿ ಮೇಯಿಸಲು ಬರುವವರಿಗೆ ನಮ್ಮ ನೀರು ಅಮೃತವೇ ಸರಿ.

ಮಳೆಗಾಲವಾದ್ದರಿಂದ ಮೋಡಗಳು ಧಾವಿಸಿ ಬರುವ ರೀತಿ ಅದ್ಭುತ. ಪಶ್ಚಿಮ ದಿಕ್ಕಿನಲ್ಲಿ ಕೆಲವು ಕಿಲೋಮೀಟರ್ ದೂರದಲ್ಲಿ ಸಮುದ್ರವಿದೆ. ಮೋಡಗಳು ನಿರ್ಮಾಣಗೊಂಡು ಮೇಲೆ ಮೇಲೆ ಏರುತ್ತ, ತೂಗುತ್ತ ತೊನೆಯುತ್ತ ಮುಟ್ಟಾಟ ಆಡುವಂತೆ ಒಂದನ್ನೊಂದು ಅಟ್ಟಿಸಿಕೊಂಡು ಬಂದು ನಮ್ಮ ಗುಡ್ಡದ ನೆತ್ತಿ ದಾಟಿ ಕೆಲವು ಮುಂದೆ ಓಡಿದರೆ, ಮತ್ತೆ ಕೆಲವು ನಾವಿನ್ನು ಓಡಲಾರೆವು, ಸೋತೆವು ಎಂದು ಶರಣಾಗುವಂತೆ ನೆಲಕ್ಕೆ ಮಳೆಯ ರೂಪದಲ್ಲಿ ಬೀಳುತ್ತವೆ. ಗುಡ್ಡದ ನೆತ್ತಿಯ ಮೇಲೆ ನಿಂತು ಸುತ್ತಲಿನ ಕಣಿವೆ, ತಗ್ಗು ಪ್ರದೇಶಗಳಲ್ಲಿ ಮೇಘಗಳು ಒಂದನ್ನೊಂದು ಅಟ್ಟಿಸಿಕೊಂಡು ಹೋಗುವ ಲೀಲಾವಿಲಾಸವನ್ನು ನೋಡುವುದೇ ಒಂದು ರೋಚಕ ದೃಶ್ಯ. ದಟ್ಟ ಕಪ್ಪು ಮೋಡಗಳಂತೂ ಕಣ್ಣು ಕಿಸಿದು ನೋಡುವಂತೆ ಮಿಂಚು ಹಾರಿಸುತ್ತ ಮೇಲೆ ಎರಗುವಂತೆ ಧಾವಿಸುತ್ತವೆ. ಮೋಡಗಳನ್ನು ಓಡಿಸಿಕೊಂಡು ಮೇಘಗಳ ಈ ಮಾರಥಾನ್ ರೇಸ್‌ಗೆ ಇನ್ನಷ್ಟು ಬಲ ಕೊಡುವುದು ಭರ್ ಎಂದು



ಬೀಸುವ ಗಾಳಿ. ಅಲ್ಲಮ ಪ್ರಭು ಗಿರಿಯ ಎದುರಿನಲ್ಲಿರುವ ಸಿದ್ದೋಬಾ ಡೋಂಗರ್ (ಸಿದ್ಧರಾಮ ಗಿರಿ) ಈ ಪ್ರದೇಶದಲ್ಲೇ ಎತ್ತರದ ಬೆಟ್ಟ. ಅಲ್ಲಿಗೊಮ್ಮೆ ಹೋಗಿ ಆ ಎತ್ತರದಲ್ಲಿ ನಿಂತು ಸುತ್ತಲಿನ ದೃಶ್ಯವನ್ನು ಸವಿಯುವ ಹಂಬಲ ನನಗಿದೆ. ನಡೆಯಲಾಗದ ಭಯದಿಂದ ಇನ್ನೂ ಬೆಟ್ಟವನ್ನು ಹತ್ತಿಲ್ಲ. ಅಲ್ಲಮ ಪ್ರಭು ಗಿರಿಯ ಎತ್ತರವೇ ಈ ಚಂದವಾದರೆ ಇನ್ನು ಸಿದ್ಧರಾಮಗಿರಿ ಹೇಗಿರಬಹುದು ಎಂದು ಊಹಿಸುತ್ತ ಹರ್ಷಿಸುತ್ತಿದ್ದೇನೆ.

ಮೋಡಗಳ ಸರಸ- ವಿರಸ, ಮುಟ್ಟಾಟ ನೋಡುತ್ತ ಸಂಭ್ರಮಿಸುವಾಗಲೇ ಒಂದು ಬೃಹತ್ ಕರಿಯ ಮೋಡಗಳ ಸರಿಮಾಲೆ ಬಂದು ಸಿದ್ಧರಾಮ ಗಿರಿಯನ್ನು ಬಳಸಿ ತನ್ನ ಕಪ್ಪು ಮುಸುಕಿನಲ್ಲಿ ಹುಗಿದುಕೊಂಡು ಬಿಟ್ಟಿತು. ಓಹ್! ಆ ಗಿರಿ ಏನು ಬೆದರುವುದೆ? ಅದು ಅಚಲ, ಮೋಡಗಳು ನಾಚಿ, ಕರಗಿ, ನೀರಾಗಿ ಅವನತ ಮುಖಿಗಳಾಗಿ ಕೆಳಗಿನ ಕಣಿವೆ, ಬಯಲುಗಳಲ್ಲಿ ಬಿದ್ದವು. ಮಹಾತ್ಮರ ಆತ್ಮ ವಿಶ್ವಾಸದ ಪ್ರತೀಕವಾಗಿಯೇ ಎಂಬಂತೆ ಸಿದ್ಧರಾಮ ಗಿರಿ ಅಚಲವಾಗಿ ನಿಂತಿತ್ತು.

ಮೋಡಗಳ ಮತ್ತೊಂದು ಸರಮಾಲೆ ಮತ್ತಷ್ಟು ಶಕ್ತಿಯನ್ನು ಮೈಗೂಡಿಸಿಕೊಂಡು ಕೆಳಗಿನ ಮಟ್ಟದಲ್ಲಿ ಬಂದು ಸಿದ್ಧರಾಮ ಗಿರಿ ಶ್ರೇಣಿಯ ಮತ್ತೊಂದು ಗುಡ್ಡಕ್ಕೆ ಡಿಕ್ಕಿ ಹೊಡೆದು ಛಿದ್ರಗೊಂಡು, ಮೋಡಗಳು ಸಣ್ಣ ಸಣ್ಣ ತುಂಡುಗಳಾಗಿ ಒಡೆದು ಮತ್ತೆ ಚೇತರಿಸಿಕೊಂಡು ಮೇಲೇರಿ ಹಿಂಜಿದ ಅರಳೆಯ ತುಂಡಿನಂತೆ ಮುಂದೆ ಸಾಗುತ್ತ ಬಂದವು. ದಟ್ಟ ಮೋಡಗಳ ಸಂದಿಯಿಂದ ಸ್ವಲ್ಪವೇ ಮುಖ ತೂರಿಸಿ ಬೆಳಕು ಚೆಲ್ಲಿ ಸೂರ್ಯನು ಅಸ್ತಂಗತನಾದ. ಕತ್ತಲೆ ಕವಿಯುವವರೆಗೂ ಮೋಡ ಗಾಳಿಗಳ ಸರಸಾಟ ನೋಡಿ, ಸಂಜೆ 7 ಗಂಟೆಯಾದ್ದರಿಂದ ನೆನಹು ಮಾಡಲು ಒಳಗೆ ಹೋದೆವು. ಬೆಳಗಿನ ಜಾವ ಹೊರಗೆ ಇಣುಕಿದರೆ ದಟ್ಟವಾದ ಮಂಜು, ಇಡೀ ಪ್ರದೇಶವನ್ನು ಮುಚ್ಚಿ ಬಿಟ್ಟಿದೆ. ಕುಳಿರ್ಗಾಳಿ ಹೊರಗೆ ಬೀಸಿ ಕಚಗುಳಿ ಇಡುತ್ತಿದೆ. ಇವತ್ತು ಸೂರ್ಯನ ದರ್ಶನವಾದರೂ ಆಗುವುದೋ ಇಲ್ಲವೋ ಎಂಬಷ್ಟು ಮಂಜು. ಏಳು ಗಂಟೆ ದಾಟಿತು. ಸೂರ್ಯನು ಕೆಳಗಿನ ಬಯಲಿನಿಂದ ಮೇಲೇರುತ್ತ ಗುಡ್ಡಗಳ ಮೇಲೆ ಕಿರಣಗಳನ್ನು ಚೆಲ್ಲುತ್ತಲೇ ಸರ್ಕಾರಿ ಶಾಲೆಯಲ್ಲಿನ ಮಕ್ಕಳು ತರಗತಿಯೊಳಕ್ಕೆ ಹೋಗದೆ ಹೊರಗಡೆಯ ಬಯಲಲ್ಲಿ ಆಟವಾಡುತ್ತ ಗಲಾಟೆ ಮಾಡುವಾಗ ಶಿಕ್ಷಕ ಬರುತ್ತಿದ್ದಂತೆಯೇ ತುಂಟಾಟ ನಿಲ್ಲಿಸಿ ಓಟಕಿತ್ತು ತರಗತಿಯೊಳಗೆ ಗಂಭೀರವಾಗಿ ಕುಳಿತುಕೊಳ್ಳುವಂತೆ, ಸೂರ್ಯನ ಬಿಸಿಲಿಗೆ ಮಂಜು ಕರಗತೊಡಗಿತು. ಅಬ್ಬಾ! ಈಗ ಮತ್ತೊಂದು ದೃಶ್ಯ ವೈಭವ, ಪ್ರಕೃತಿಯ ಲೀಲಾ ವಿಲಾಸ, ಪರಮಾತ್ಮನ ದಿವ್ಯ ಲೀಲೆ! ಇಡೀ ಪ್ರಕೃತಿ, ತಲೆಗೆ ಸ್ನಾನ ಮಾಡಿ ಬಿಸಿಲಿನಲ್ಲಿ ಕೂದಲು ಒಣಗಿಸಿಕೊಳ್ಳುವ ನೀಳ ಕೇಶದ ಮಹಿಳೆಯಂತೆ ಈಗ ನೆಲದ ಮೇಲಿನ ಹುಲ್ಲಿನಲ್ಲಿ ಅಡಗಿ ಕೊಂಡ ನೀರಿನ ಬಿಂದುಗಳನ್ನು ತೆರೆದಿಡುತ್ತಿತ್ತು. ದಟ್ಟವಾದ ಹಸಿರು ಹುಲ್ಲಿನ ನೆಲಹಾಸಿನ ಮೇಲೆ ಬಿದ್ದ ನೀರಿನ ಬಿಂದುಗಳು ಸೂರ್ಯಕಿರಣಗಳನ್ನು ಪ್ರತಿಫಲಿಸಿ ಫಳಫಳ ಹೊಳೆಯುತ್ತ ಹಸಿರುಗಂಬಳಿಯ ಮೇಲೆ ಹೆಣೆದ ಗಾಜಿನ ಗೋಲಗಳಂತೆ ಕಾಣುತ್ತಿದ್ದವು. ಮಳೆ ನೀರಿನ ಸ್ನಾನದಿಂದ ಹಸಿರು ಹುಲ್ಲಿಗೆ ಮತ್ತಷ್ಟು ಜೀವ ತುಂಬಿತ್ತು. ಹಿತಕರವಾದ ಬಂಗಾರ ವರ್ಣದ ಬಿಸಿಲು, ಸುಯ್ಯೆಂದು ಸಂಗೀತ ಹಾಡುತ್ತ ವಯ್ಯಾರದಿಂದ ಬೀಸುವ ಕುಳಿರ್ಗಾಳಿ; ಮೇಲೆ ಆಗಸದಲ್ಲಿ ತೇಲುವ ಶುಭ್ರ ಬಿಳಿಯ ಮೋಡಗಳು; ಈ ಜೀವಂತ ಗೋಲ (Living globe) ವಾದ ಭೂಮಿಯ ಹೊರತು ಬೇರೊಂದು ಸ್ವರ್ಗ ಎಲ್ಲಿದ್ದೀತು? ಈ ಮರ್ತ್ಯಲೋಕದ ರಸಾಸ್ವಾದ ಮಾಡದೆ ಸ್ವರ್ಗದ ಕಾಲ್ಪನಿಕ ಕುದುರೆಯ ಬೆನ್ನೇರಿ ನಡೆಯುವವ ಎಂಥಾ ಮೂರ್ಖ ಎನ್ನಿಸಿತು. ಸಿನಿಮಾಗಳಲ್ಲಿ ದೇವತೆಗಳು ಮೋಡಗಳ ಮೇಲೆ ತೇಲುವಂತೆ ತೋರಿಸಲಾಗುವುದು. ಗುಡ್ಡದ ತುದಿಯ ಮೇಲಿರುವ ನಮ್ಮ ಮೇಲೆ ಮೋಡಗಳು ತುಂಡು ತುಂಡಾಗಿ ಹಾದು ಹೋಗುವಾಗ ಬಹುಶಃ ಕಣಿವೆಯಲ್ಲಿ ನಿಂತವರಿಗೆ ನಾವೇ ದೇವತೆಗಳಂತೆ ಕಾಣಬಹುದಲ್ಲವೆ?

ಜನ ಜಂಗುಳಿಯಿಂದ ದೂರವಾದ ಎತ್ತರವಾದ ಗುಡ್ಡದ ಮೇಲೆ ಇರುವ ಈ ಅಪೂರ್ವ ಅನುಭವ 1966ರಲ್ಲಿ ಋಷಿಕೇಶಕ್ಕೆ ಹೋದಾಗ ಆಗಿತ್ತು. ಆ ಅನುಭವವನ್ನು ಎಷ್ಟೋ ಗೀತೆಗಳ ರೂಪದಲ್ಲಿ ನಾನಾಗಲೇ ಗಂಗಾ ತರಂಗ ಎಂಬ ಕೃತಿಯಲ್ಲಿ ಬರೆದಿದ್ದೇನೆ.

ಸೂರ್ಯನ ಬಿಸಿಲು ಗುಡ್ಡ, ಕಣಿವೆಗಳನ್ನೆಲ್ಲ ಬಳಸಿದ್ದರಿಂದ ಎಲ್ಲವೂ ಸ್ಪಷ್ಟವಾಗಿ ಕಾಣುತ್ತವೆ. ಪಂಚಗಂಗಾ ಮತ್ತು ವಾರಣಾ ನದಿಗಳು ಅಂಕುಡೊಂಕಾಗಿ ಹರಿಯುವುದು, ಗ್ರಾಮಗಳ ಬಳಿಯ ಕೆರೆಗಳು ಪ್ರಕೃತಿಗೆ ಕನ್ನಡಿ ಹಿಡಿದಂತೆ, ಹಸಿರು ಗದ್ದೆಗಳ ನಡುವೆ ಮಲಗಿದ ಗ್ರಾಮಗಳು, ಮಧ್ಯೆ ಹೊಗೆಯನ್ನುಗುಳುವ ಎತ್ತರವಾದ ಸಕ್ಕರೆ ಕಾರ್ಖಾನೆಯ ಚಿಮಣಿಗಳು ಎಲ್ಲವೂ ಕಾಣುತ್ತವೆ.

ಇದನ್ನೆಲ್ಲ ನೋಡುತ್ತ ನನಗೆ ಊಟಿಯ ದೊಡ್ಡ ಬೆಟ್ಟದ ನೆನಪು ಬಂದಿತು. ಸರಿಯಾಗಿ ಅಭಿವೃದ್ಧಿ ಪಡಿಸಿದರೆ ಮಹಾಬಳೇಶ್ವರ, ಊಟಿಯಂತಹ ಗಿರಿಧಾಮವಾಗುವುದರಲ್ಲಿ ಸಂದೇಹವಿಲ್ಲ. ಫಲವತ್ತಾದ ಭೂಮಿ, ಸಾಕಷ್ಟು ಮಳೆ ಇದ್ದರೂ ಈ ಪ್ರದೇಶವು ಬೋಳು ಬೆಟ್ಟವಾಗಿಯೇ ಉಳಿದಿರುವುದಕ್ಕೆ ಜನರಲ್ಲಿರುವ ಅಜ್ಞಾನ-ಸೋಮಾರಿತನಗಳೇ ಕಾರಣ ಎನ್ನಿಸುತ್ತದೆ. ಮಳೆಗಾಲದಲ್ಲಿ ತಮ್ಮ ತಮ್ಮ ಜಮೀನುಗಳಲ್ಲಿ ಬೇವಿನ ಬೀಜ, ಹುಣಿಸೆ ಬೀಜ, ಅರಳಿ-ಆಲ ಇತ್ಯಾದಿ ಹಾಕಿದ್ದರೂ ಅವು ತಮ್ಮ ಪಾಡಿಗೆ ತಾವು ಬೆಳೆದುಕೊಂಡಿರುತ್ತಿದ್ದವು. ಜನರಿಗೆ - ಪ್ರಾಣಿಗಳಿಗೆ ನೆರಳಾದರೂ ಇರುತ್ತಿತ್ತು. ಜನರ ಆಲಸ್ಯ - ಅಜ್ಞಾನ ನೋಡಿದರೆ ನನಗೆ ನಿಜಕ್ಕೂ ಆಶ್ಚರ್ಯವೆನಿಸುತ್ತದೆ. ಬಸವ ಕಲ್ಯಾಣದಲ್ಲಿ ಮೊದಲನೆಯ ಕಲ್ಯಾಣ ಪರ್ವದಲ್ಲಿ ಕಲ್ಲು - ಮುಳ್ಳು ತುಳಿದು ಜನರು ಗುಡ್ಡ ದಾಟಿ ಬಂದರು. ಮುಳ್ಳಿನ ಕಂಟಿ ಗುಡ್ಡದ ಮೇಲೆಲ್ಲ ತುಂಬಿದ್ದವು. ನಂತರ ಅದನ್ನು ಖರೀದಿಸಿ ಶರಣ ಶೈಲ ಎಂದು ಹೆಸರಿಟ್ಟೆವು. ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳ ಕಾಯಕ ಯೋಗದ ಫಲವಾಗಿ ಆ ಶರಣ ಶೈಲದ ಮೇಲೆ ನೂರಾರು ಬೇವಿನ ಗಿಡಗಳು, ಬದಾಮಿ, ತೇಗ, ಮುತ್ತುಗ, ಬಿಲ್ವ ನಳನಳಿಸುತ್ತಿವೆ. ನಯನ ಮನೋಹರ ದೃಶ್ಯ ಕಾಣಬರುತ್ತದೆ.

ಬೇಸಿಗೆಯಲ್ಲಿ ಗಿಡಗಳನ್ನು ರಕ್ಷಿಸಲು ನೀರಿನ ಆಸರೆ ಬೇಕು. ಇದಕ್ಕೆ ವ್ಯವಸ್ಥೆ ಮಾಡಿಕೊಂಡು ಅಲ್ಲಮ ಪ್ರಭುಗಿರಿಯ ಮೇಲೆ ಸಹ ವೃಕ್ಷಸಂಪತ್ತನ್ನು ಬೆಳೆಸುವ ಇಚ್ಛೆ ಇದೆ. ಸದ್ಯ ದಟ್ಟ ಮಳೆಗಾಲ; ವಾಹನ ಸಂಚಾರಕ್ಕೆ ತೊಂದರೆ. ಅಲ್ಲಮ ಪ್ರಭು ದಿವ್ಯಾಲಯದವರೆಗೆ (ಬಸ್ಸು ಬರುವುದಿಲ್ಲ) ಚಿಕ್ಕ ವಾಹನಗಳಾದ ಕಾರು, ಜೀಪು, ಟಾಟಾ ಸುಮೋ ಇತ್ಯಾದಿ ಬರಬಹುದು. ನಂತರ ಸದ್ಯ ನಡೆದು ಬರಬೇಕು. ಪೂಜೆ - ಧ್ಯಾನ - ಏಕಾಂತ ಸಾಧನೆಯ ಹಂಬಲ ಇದ್ದವರಿಗೆ ಅತ್ಯಂತ ಸೂಕ್ತ ಸ್ಥಳ. ಇಲ್ಲೀಗ ನಮ್ಮ ಮಠದ ಸಾಧಕರು ಇದ್ದಾರೆ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳ ನೇತೃತ್ವದಲ್ಲಿ ಕೃಷಿ ಕೆಲಸ, ವಾರದ ಪ್ರಾರ್ಥನೆ, ಅಮವಾಸ್ಯೆ ದಿನ ವಿಶೇಷ ಕಾರ್ಯಕ್ರಮ ನಡೆದಿವೆ. ಬಂದವರಿಗೆ ಊಟ-ವಸತಿಗೆ ಮತ್ತು ಅಧ್ಯಾತ್ಮಿಕ ಸಾಧನೆಗಾಗಿ ಒಂದೆರಡು ದಿನಗಳ ಮಟ್ಟಿಗೆ ಇರಬೇಕೆನ್ನುವವರಿಗೆ ಅವಕಾಶವಿದೆ. ನೀರವವಾದ ಮೌನದಿಂದ ಕೂಡಿದ ಪ್ರಶಾಂತ ವಾತಾವರಣ ಬಯಸುವವರಿಗೆ ನಿಜಕ್ಕೂ ಇದು ಪ್ರಶಸ್ತ ಸ್ಥಳ. ಅನೇಕ ಸಾಧಕರು, ಸಿದ್ಧ ಪುರುಷರು ಬೆಟ್ಟ - ಗುಡ್ಡ, ನದಿಯ ತಟ, ಕಾಡು ಮುಂತಾದುವುಗಳನ್ನು ಹುಡುಕಿಕೊಂಡು ನೆಲೆಸಿ ತಪಸ್ಸು ಮಾಡುವಲ್ಲಿ ಅವರು ಎಷ್ಟು ಪರಿಸರ ಪ್ರೇಮಿಗಳು, ನಿಸರ್ಗ ಸೌಂದರ್ಯವನ್ನು ಆರಾಧಿಸುವವರು ಎನಿಸುತ್ತದೆ.

ಇನ್ನೂ ವಿದ್ಯುತ್ ವ್ಯವಸ್ಥೆ ನಮ್ಮ ಜಾಗದವರೆಗೆ ಬಂದಿಲ್ಲ; ರಾತ್ರಿಯ ವೇಳೆ ಬಯಲಲ್ಲಿ ನಿಂತರೆ ಅತ್ಯದ್ಭುತ ದೃಶ್ಯವು ಗೋಚರವಾಗುತ್ತದೆ. ಅಲ್ಲಮಪ್ರಭು ಗಿರಿಯ ಸುತ್ತಲೂ ಇರುವ ಬೃಹತ್ ನಗರಗಳಾದ ಕೊಲ್ಹಾಪುರ, ಇಚಲ ಕರಂಜಿ, ವಡಗಾಂವ ಮತ್ತು ವಿದ್ಯುತ್ ವ್ಯವಸ್ಥೆ ಸಮೃದ್ಧವಾಗಿರುವ ಮಹಾರಾಷ್ಟ್ರದ ಹಳ್ಳಿಗಳಿಂದ ಹೊರಹೊಮ್ಮುವ ಝಗಮಗಿಸುವ ವಿದ್ಯುತ್ ಬೆಳಕು ಬೆಳಕಿನ ಸಮುದ್ರವನ್ನೇ ನಯನ ಮನೋಹರವಾಗುವಂತೆ ಸೃಷ್ಟಿಸಿರುತ್ತದೆ. ಸಮುದ್ರದ ಮಧ್ಯೆ ಒಂದು ದ್ವೀಪವಿರುವಂತೆ ಬೆಳಕಿನ ಛಾಯೆಯ ನಡುವೆ ಅಲ್ಲಮ ಪ್ರಭು ಗಿರಿ, ಸಿದ್ಧರಾಮ ಗಿರಿ ಎದ್ದು ನಿಂತಿವೆ. ಲೌಕಿಕ ಜನರ ಮೋಜು ಮಜಗಳಿಗೆ ಬೇಕಾದಷ್ಟು ಪಂಚತಾರಾ ರೆಸಾರ್ಟ್‌ಗಳಿವೆ. ಅಧ್ಯಾತ್ಮಿಕ ಪ್ರವೃತ್ತಿಯ ಸಾತ್ವಿಕ ಜನರಿಗೆ ಶಾಂತಿಧಾಮವಾಗಬಲ್ಲ ಪರಿಸರ ಅಲ್ಲಮ ಪ್ರಭು ಗಿರಿಯದು ಎಂದರೆ ಉತ್ಪ್ರೇಕ್ಷೆಯಲ್ಲ. ಮೂಲಭೂತ ಸೌಕರ್ಯಗಳೂ ಇಲ್ಲದ ಇಲ್ಲಿ ಮೊದಲು ಮೂಲಭೂತ ಸೌಕರ್ಯ ಕಲ್ಪಿಸುವ ಉದ್ದೇಶ ನಮ್ಮದಾಗಿದೆ.



# ☹ ಸಮಸ್ಯೆ..? - ಸಮಾಧಾನ..! ☺

⍓ ಎಳನಡು ಸೋಮಶೇಖರಯ್ಯ, ತೋಟದ ಮನೆ

? ದಿ.13-15-2006ರಂದು ತಿಪಟೂರಿನಲ್ಲಿ ಒಂದು ಆಶ್ರಮದವರ ಕಾರ್ಯಕ್ರಮವಿತ್ತು. ಮಠದ ಸ್ವಾಮಿಗಳ ನೇತೃತ್ವದಲ್ಲಿ 5 ಜನ ದೊಡ್ಡ ದೊಡ್ಡ ಸ್ವಾಮಿಗಳು ಬಂದಿದರು. ಶರಣರು ಆಸ್ತಿಕರೋ ನಾಸ್ತಿಕರೋ ಎಂಬ ವಿಷಯ ಪ್ರಸ್ತಾಪವಾಯಿತು. ಆಗ ಇಮ್ಮಡಿ ಕರಿಬಸವ ದೇಶೀಕೇಂದ್ರ ಸ್ವಾಮಿಗಳು ನಿರಾಕಾರವಾದ ತತ್ತ್ವವನ್ನು ನಂಬುವವರು ನಾಸ್ತಿಕರು. ಯಾವುದಾದರೂ ರೂಪವನ್ನು ಆರಾಧಿಸುವವರು ಆಸ್ತಿಕರು. ಶರಣರು ನಿರಾಕಾರವನ್ನು ನಂಬುವ ಕಾರಣ ಅವರು ನಾಸ್ತಿಕರು ಎಂದು ಪ್ರತಿಪಾದಿಸಿದರು. ಶರಣರು ನಾಸ್ತಿಕರೆ?

★ ಪ್ರೀ ನರ್ಸರಿ, ನರ್ಸರಿ, ಪ್ರೈಮರಿಯಿಂದ ಹಿಡಿದು ಬಿ.ಎಡ್‌ವರೆಗೆ ಪಾಠ ಹೇಳುವ ಬೋಧಕರಿಗೆ ತರಬೇತಿ ಉಂಟು. ದುರ್ದೈವವೆಂದರೆ ಸಮಾಜವನ್ನು ಮುನ್ನಡೆಸುವ ಲಿಂಗಾಯತ ಧರ್ಮದ ಮಠಾಧೀಶರಿಗೆ ತಾತ್ತ್ವಿಕ ತರಬೇತಿ ಇಲ್ಲ. ಕ್ರೈಸ್ತರಿಗೆ ಥಿಯೋಲಾಜಿಕಲ್ ಕಾಲೇಜುಗಳಲ್ಲಿ, ಮುಸಲೀಮರಿಗೆ ಮದರಸಾಗಳಲ್ಲಿ ಹೀಗೆ ಎಲ್ಲ ಬೋಧಕರಿಗೂ ಅವರ ಧರ್ಮಗಳ ಬಗ್ಗೆ ತರಬೇತಿಯುಂಟು. ಲಿಂಗಾಯತ ಮಠಾಧೀಶರಿಗೆ ತರಬೇತಿಯೇ ಇಲ್ಲ, ಹೀಗಾಗಿ ಅವರು ಜನರಿಗೆ ಏನೇನೋ ಬೋಧಿಸುತ್ತಾರೆ.

ಲಿಂಗಾಯತ ಧರ್ಮ ಸೇಶ್ವರವಾದಿ ಆಸ್ತಿಕ ಧರ್ಮ; ಇದರಲ್ಲಿ ದೇವರಿಗೆ ಅತ್ಯಂತ ಪ್ರಮುಖ ಸ್ಥಾನ. ಜೈನ-ಬೌದ್ಧ ಧರ್ಮಗಳು ಸೃಷ್ಟಿಕರ್ತ ದೇವರನ್ನು ಒಪ್ಪುವುದಿಲ್ಲ. ಆದರೂ ಅವನ್ನು ನಾಸ್ತಿಕ ಎನ್ನಬಾರದು. ಚೈತನ್ಯವನ್ನು ಒಪ್ಪುವವರು ಆಸ್ತಿಕರು. ಜೈನ-ಬೌದ್ಧರು ದೇವರನ್ನು ಒಪ್ಪದಿದ್ದರೂ ಆತ್ಮವನ್ನು ಒಪ್ಪುವರು. ಆದ್ದರಿಂದ ಅವರನ್ನು ನಿರೀಶ್ವರವಾದಿಗಳು ಎನ್ನಲಾಗುವುದು. ಸಿಖ್ಖರೂ ದೇವರು ನಿರಾಕಾರ ಎನ್ನುತ್ತಾರೆ. ಇಡೀ ಜಗತ್ತಿನಲ್ಲಿ ಹಿಂದು ಧರ್ಮ ಮಾತ್ರ ಹಲವಾರು ಆಕಾರಗಳನ್ನು ಕಲ್ಪಿಸಿದೆ; ಬೇರೆ ಯಾವ ಧರ್ಮವೂ ದೇವರಿಗೆ ರೂಪ ಉಂಟೆಂದು ಒಪ್ಪುವುದಿಲ್ಲ. ಕೆಲವು ಕಾಲ ಗ್ರೀಕ್ ದೇಶದಲ್ಲಿ ಅಂಥ ಪೌರಾಣಿಕ ನಂಬಿಕೆ ಇದ್ದವು. ಕ್ರೈಸ್ತ, ಇಸ್ಲಾಂಗಳು ಹಬ್ಬಿದಂತೆ ಆ ಪೌರಾಣಿಕ ನಂಬಿಕೆಗಳು ಕರಗಿ ಹೋಗಿವೆ. ದೇವರಲ್ಲಿ ಭಕ್ತಿ, ಅನುರಕ್ತಿ ಎರಡನ್ನು ಹೊಂದಿ ಶರಣ ಸತಿ - ಲಿಂಗಪತಿ ಸಂಬಂಧ ಬೋಧಿಸುವ ಲಿಂಗಾಯತ ಧರ್ಮ ಶುದ್ಧ ಆಸ್ತಿಕ ಧರ್ಮ.

? 2. ಒಬ್ಬ ಸ್ವಾಮಿಗಳು ಲಿಂಗಾಯತ ಧರ್ಮೀಯರಿದ್ದೂ ಸಹ ಸುಬ್ರಹ್ಮಣ್ಯ ಮುಂತಾಗಿ ನಾನಾ ದೇವತೆಗಳನ್ನು ಪೂಜಿಸುವರು. ಅವರಿಗೆ ಗುರು ಬಸವಣ್ಣನವರಲ್ಲಿ ಅಪಾರ ಅಭಿಮಾನವಿದೆ. ಆದರೂ ಹೀಗೇಕೆ ಮಾಡುತ್ತೀರಿ? ಎಂದರೆ ಬರೀ ಬಸವಣ್ಣನವರನ್ನೇ ಹಿಡಿದರೆ ಇಲ್ಲಿಗೆ ಒಂದು ನೊಣ ಸಹ ಬರುವುದಿಲ್ಲ, ಮಠವು ನಡೆಯುವುದಿಲ್ಲ. ಅದಕ್ಕೇ ಎಲ್ಲರನ್ನೂ ಆಕರ್ಷಿಸಲು, ಕಾಣಿಕೆಗಾಗಿ ಅನ್ಯ ದೇವತೆಗಳನ್ನು ಆರಾಧಿಸಬೇಕಾಗಿದೆ. ನನ್ನೊಳಗೆ ಇಷ್ಟಲಿಂಗ ನಿಷ್ಠೆ ಇದೆ ಎನ್ನುತ್ತಾರೆ.

★ ಲಿಂಗಾಯತ ಧರ್ಮವು ಪಾತಿವ್ರತ್ಯ ಭಕ್ತಿಯನ್ನು ಹೇಳುತ್ತದೆ. ಜನರನ್ನಾಗಲೀ ಹಣವನ್ನಾಗಲೀ ಆಕರ್ಷಿಸಲು ತನ್ನ ಧರ್ಮವನ್ನು ಗುರು-ಲಿಂಗ-ಜಂಗಮ ನಿಷ್ಠೆಯನ್ನು ಬಿಡುವುದನ್ನು ಖಂಡಿಸುತ್ತದೆ. ತತ್ತ್ವವನ್ನರಿತ ಗೃಹಸ್ಥರು ಸಹ ದೃಢ ಮನಸ್ಕರಾಗಿ ಏಕದೇವೋಪಾಸನೆಯ ದಾರಿಯಲ್ಲಿ ನಡೆಯುವಾಗ ವಿರಕ್ತರಾದ ಮಠಾಧೀಶರು ಜನರನ್ನು, ರಾಜಕಾರಣಿಗಳನ್ನು, ಶ್ರೀಮಂತರನ್ನು ಆಕರ್ಷಿಸಲು ಯಾವ್ಯಾವುದೋ ದಾರಿಯನ್ನು ಹಿಡಿಯುವುದು ಬಹಳ ಅಸಹ್ಯಕರವಾದ ಸಂಗತಿ. ತತ್ತ್ವಹೀನ ಶ್ರೀಮಂತಿಕೆಗಿಂತಲೂ ತತ್ತ್ವನಿಷ್ಠೆಯ ಬಡತನ ಅತ್ಯಂತ ಸಂತೋಷಕರ.

⍓ ಹೆಸರು, ಊರು ಬೇಡ

? ನಾನೊಬ್ಬ ಟಿ.ಸಿ.ಹೆಚ್ ಎರಡನೆಯ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿ. ಈಗ ನನ್ನ ಮನಸ್ಸು ಕವಲು ದಾರಿಯಲ್ಲಿದೆ. ಒಂದು ಮನಸ್ಸು ಸನ್ಯಾಸಿಯಾಗಿ ಧರ್ಮಪ್ರಚಾರ ಮಾಡು ಎನ್ನುತ್ತಿದೆ. ಇನ್ನೊಂದು, ಒಬ್ಬ ಆದರ್ಶ ಶಿಕ್ಷಕನಾಗಿ ಸಾವಿರಾರು ಮಕ್ಕಳ ಬಾಳನ್ನು ಬೆಳಗಿಸು ಎನ್ನುತ್ತಿದೆ. ಶಿಕ್ಷಕನಾಗಿಯೂ ತತ್ತ್ವ ಪ್ರಚಾರ ಮಾಡಬಹುದಲ್ಲವೆ?

★ ಒಬ್ಬ ನಿಸ್ವಾರ್ಥಿ, ಬೋಧಕ ಸನ್ಯಾಸಿ (ಜಂಗಮ ಕಾಯಕ) ಯಿಂದ ಆದಷ್ಟು ಸಮಾಜ ಪರಿವರ್ತನೆಯ ಕಾರ್ಯ ಶಿಕ್ಷಕನಿಂದ ಆಗಲು ಸಾಧ್ಯವಿಲ್ಲ. ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರಿಗೆ ಶಿಕ್ಷಕ ವೃತ್ತಿ ಸಿಕ್ಕಿತ್ತು. ಅವರಲ್ಲಿ ನಾಯಕತ್ವದ ಲಕ್ಷಣವಿದ್ದುದರಿಂದ ರಾಜಕೀಯದಲ್ಲೂ ಮುಂದೆ ಬರಲು ಸಾಧ್ಯವಿತ್ತು. ಅವೆಲ್ಲವನ್ನೂ ತ್ಯಜಿಸಿ ವೈರಾಗ್ಯ ಜೀವನ ಸ್ವೀಕರಿಸಿ, ಬೋಧಕರಾದುದರಿಂದ ಅಧ್ಯಾತ್ಮಿಕವಾಗಿ ಬಸವ ಸಾಮ್ರಾಜ್ಯವನ್ನೇ ನಿರ್ಮಾಣ ಮಾಡಿದರು. ಮಠಾಧೀಶರು ನೂರಾರು ಶಾಲೆ - ಕಾಲೇಜು ನಡೆಸುತ್ತಾರೆ. ಎಷ್ಟು ಜನ ಆದರ್ಶವಂತರು ಧರ್ಮವಂತರು ತಯಾರಾಗಿದ್ದಾರೆ? ಪ್ರವಚನಗಳಿಂದಾಗಿ ಬಹಳ ಸಂಖ್ಯೆಯಲ್ಲಿ ಆದರ್ಶವಂತರು ತಯಾರಾಗುತ್ತಾರೆ ಎಂಬುದು ಈಗ ಎಲ್ಲರಿಗೂ ಮನವರಿಕೆಯಾಗುತ್ತಿದೆಯಲ್ಲವೆ? ಹೆಚ್ಚು ಜನ ತ್ಯಾಗಿಗಳಾದ ಬೋಧಕರು ತಯಾರಾದರೆ ಮಾತ್ರ ಸಮಾಜ ಪರಿವರ್ತನೆ ಸಾಧ್ಯ. ಇದನ್ನು ಕ್ರೈಸ್ತರಿಂದ ನಾವು ಕಲಿಯಬೇಕು.

☐ ಶಿವಶರಣಪ್ಪ ವಲ್ಲೇಪುರೆ, ಬೆಳಕುಣಿ, ಬೀದರ್ ಜಿಲ್ಲೆ

?. ಮೊದಮೊದಲು 'ಲಿಂಗದೇವ' ನನಗೂ ಅರ್ಥವಾಗಿರಲಿಲ್ಲ. ಲಿಂಗಾಯತ ಧರ್ಮದ ದೇವರು ಲಿಂಗದೇವರು; ನಾವು ದೇಹದ ಮೇಲೆ ಧರಿಸುವುದೂ ಲಿಂಗದೇವರನ್ನು ಎಂಬುದು ಈಗ ಮನದಟ್ಟಾಯಿತು. ಇಂಥ ಸತ್ಯ ಮಠಾಧೀಶರಂಥ ಜ್ಞಾನಿಗಳಿಗೆ ಏಕೆ ಅರ್ಥವಾಗುತ್ತಿಲ್ಲ? ಎಂಬುದು ಈಗ ನನ್ನ ಸಮಸ್ಯೆಯಾಗಿದೆ. ಲಿಂಗದೇವ ತಪ್ಪು ಎಂದು ಪತ್ರಿಕೆಗಳಲ್ಲಿ ಹೇಳಿಕೆಗಳು ಅನೇಕ ಮಠಾಧೀಶರು ಮತ್ತು ಅವರ ಹಿಂಬಾಲಕರಿಂದ ಬರುವುದರಿಂದ ತಿಳುವಳಿಕೆಯಿಲ್ಲದ ಅನೇಕರು ಇಷ್ಟಲಿಂಗ ಪೂಜೆ ಬಿಡುತ್ತಿದ್ದಾರೆ. ನಾವು ಹೇಳ ಹೋದರೆ ಲಿಂಗದೇವ ತಪ್ಪು ಅಂತ ಸ್ವಾಮಿಗಳು ಹೇಳುತ್ತಾರೆ. ನಿನ್ನದೇನು? ಎನ್ನುತ್ತಿದ್ದಾರೆ.

★ ಪೂರ್ವಾಗ್ರಹ ಪೀಡಿತರಾದ ಕೆಲವು ಮಠಾಧೀಶರಿಗೆ ಲಿಂಗದೇವ ಪದವು ಅರ್ಥವಾಗುತ್ತಿಲ್ಲ. ಕೆಲವರಿಗೆ ಅರ್ಥವಾದರೂ ಸಹ ನಮ್ಮ ಮೇಲಿನ ಮತ್ಸರ-ದ್ವೇಷಗಳಿಂದ ಲಿಂಗದೇವನನ್ನು ವಿರೋಧಿಸುತ್ತಾರೆ. ತಾವು ಮಾಡುವ ಅಪರಾಧವೇನು ಎಂಬ ಅರಿವೂ ಅವರಿಗೆ ಉಂಟಾಗುತ್ತಿಲ್ಲ. ಇಂದಲ್ಲ ನಾಳೆ ತಿಳಿದೀತು. ಆದರೆ ಅಷ್ಟರಲ್ಲಿ ಏನೇನು ಅಚಾತುರ್ಯಗಳಾಗುತ್ತವೊ? ಕ್ರಾಂತಿಯೋಗಿ ಬಸವಣ್ಣದಲ್ಲಿ ಕಡೆಯಲ್ಲಿ ಕೇದಾರನಾಥ ಶಾಸ್ತ್ರಿ, ಬದರಿನಾಥ ಪಂಡಿತ ಉಭಯತರೂ ಬಂದು ಅಕ್ಕನಾಗಮ್ಮನಲ್ಲಿ ಕ್ಷಮೆ ಯಾಚಿಸುತ್ತಾರೆ. "ಇಷ್ಟೆಲ್ಲ ಅನಾಹುತವಾದುದು ನಮ್ಮಿಂದಲೇ! ನಮ್ಮನ್ನು ಕ್ಷಮಿಸಿ" ಎಂದು ಕೇಳುತ್ತಾರೆ. ಕ್ಷಮಿಸಲೂಬಹುದು ಆದರೆ ಆದ ಅನಾಹುತವನ್ನು ಹೇಗೆ ಸರಿಪಡಿಸಲು ಸಾಧ್ಯ? ರಾ.ಬ.ದಳ ಸಂಘಟನೆ ಒಡೆದ ಕೆಲವರು ಇದೇ ರೀತಿ ಈಗ ಪಶ್ಚಾತ್ತಾಪ ಪಡುತ್ತಿದ್ದಾರೆ. ಆಗಿ ಹೋದ ನಷ್ಟ ತುಂಬಲು ಸಾಧ್ಯವೆ?

☐ ಬಸವ ಪ್ರಭು ಲಿಂಗಾಯತ್, ರಾ.ಬ.ದಳ, ಬಳ್ಳಾರಿ

?. ಬೆಂಗಳೂರಿನಲ್ಲಿ ಬಸವ ಜಯಂತಿ ಕಾರ್ಯಕ್ರಮ ದಿ.30-4-2006 ರಂದು ನಡೆದಾಗ ಮುಖ್ಯ ಮಂತ್ರಿ ಶ್ರೀ ಕುಮಾರ ಸ್ವಾಮಿಯವರು ಬಿಜಾಪುರದ ಮಹಿಳಾ ವಿ.ವಿಗೆ ಅಕ್ಕಮಹಾದೇವಿಯ ಹೆಸರು, ಗುಲಬರ್ಗಾ ವಿ.ವಿಗೆ ಬಸವೇಶ್ವರ ಹೆಸರನ್ನು ಇಡಲಾಗುವುದೆಂದು ಸ್ವಯಂ ಪ್ರೇರಣೆಯಿಂದ ಹೇಳಿದರು. ಇದನ್ನು ಅಭಿನಂದಿಸಿ ಅನೇಕ ಸಂಘ-ಸಂಸ್ಥೆಗಳವರು ಹೇಳಿಕೆ ಕೊಟ್ಟರು ಮತ್ತು ಮನವಿಗಳನ್ನು ಸಲ್ಲಿಸಿದರು. ನೀವೇಕೆ ಯಾವ ಹೇಳಿಕೆಯನ್ನು ಕೊಡಲಿಲ್ಲ ಮತ್ತು ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಕೊಡಲಿಲ್ಲ. ನಮಗೆಲ್ಲ ಆಶ್ಚರ್ಯವಾಗಿದೆ.

★ ಉದ್ದೇಶ ಪೂರ್ವಕವಾಗಿಯೇ ಮೌನ ತಾಳಿದ್ದೇನೆ. ಮನವಿ ಕೊಡಲು ನನಗೆ ಒತ್ತಾಯ ಮಾಡುತ್ತಿರುವ ರಾಷ್ಟ್ರೀಯ ಬಸವ ದಳದವರನ್ನು ತಡೆ ಹಿಡಿದಿದ್ದೇನೆ. ಈಗ ಹಲವು ಮಠಾಧೀಶರು, ಬಸವ ಸಮಿತಿಯವರು, ಮಠಾಧೀಶರ ಹಿಂಬಾಲಕ ಸಂಘ-ಸಂಸ್ಥೆಗಳು ಒಂದು ಜಾಡು ಹಿಡಿದು ಹೊರಟಿವೆ. ನಾವು ಹೇಳಿಕೆ ಕೊಟ್ಟು ಅಭಿನಂದಿಸಿದರೆ, ಮನವಿ ಕೊಟ್ಟಿದ್ದು ತಿಳಿದರೆ ಅವರೆಲ್ಲ ರಿವರ್ಸ್ ಗೇರ್ ಹೊಡೆಯುತ್ತಾರೆ. ಏಕೆಂದರೆ ಅವರು ತನ್ನ ಶತ್ರು (ಮುಂಗುಲಪ್ಪನ) ವಿನ ಎರಡು ಕಣ್ಣೂ ಹೋಗುವುದಾದರೆ ತನ್ನ ಒಂದು ಕಣ್ಣು ಹೋದರೆ ಹೋಗಲಿ ಎಂಬ (ಹಾವಪ್ಪನ) ಜಾಯಮಾನದವರು. ಹಿಂದೆ ಗುಲಬರ್ಗಾ ವಿ.ವಿಗೆ ಹೆಸರಿಡುವ ಬಗ್ಗೆ ಚಳುವಳಿ



ತೀವ್ರಗತಿಯಲ್ಲಿದ್ದಾಗ ಅಂದಿನ ಮುಖ್ಯ ಮಂತ್ರಿ ಶ್ರೀ ದೇವೇಗೌಡರು ಗುಲಬರ್ಗಾದಲ್ಲಿದ್ದ ನನ್ನೊಡನೆ ದೂರವಾಣಿಯಲ್ಲಿ ಮಾತನಾಡಿದರು. ಅವರ ಛೇಂಬರಿನಲ್ಲಿ ಅಂದು ಗೃಹಮಂತ್ರಿಗಳಾಗಿದ್ದ ಶ್ರೀ ಪಿ.ಜಿ.ಆರ್.ಸಿಂಧ್ಯ ಇದ್ದರು. ಚಳುವಳಿ ತುಂಬಾ ಕಾವೇರಿದ್ದರಿಂದ ಬೆಂಗಳೂರಿನಲ್ಲಿ ಶರಣ.ಎನ್.ಪುಟ್ಟರುದ್ರ, ರಾ.ಬ.ದಳ ಅಧ್ಯಕ್ಷರು, ಶರಣೆ. ದೇವಿಕಾ ಶರಣಪ್ಪ, ಪ್ರಧಾನ ಸಂಚಾಲಕರು ಮುಂತಾದವರನ್ನು ಮಾತುಕತೆಗೆ ಕರೆದಿದ್ದರು. ನಮ್ಮ ಶರಣ-ಶರಣೆಯರನ್ನು ಪೋಲೀಸರು ವಿನಾಕಾರಣ ಬಂಧಿಸಿ ಗುಲಬರ್ಗಾ ಜೇಲಿನಲ್ಲಿ ಇಟ್ಟಿದ್ದರು. ಅವರು ಜೇಲಿನಲ್ಲಿ ನಿರಶನ ಮಾಡುತ್ತಿದ್ದರು ಸತ್ಯಾಗ್ರಹಿಗಳಲ್ಲಿ ವಯಸ್ಸಿನವರು ಇದ್ದರು. ಕಟ್ಟಾ ನಿರಶನದಿಂದ ಅವರಿಗೆ ಜೀವಾಪಾಯವಾಗಬಹುದೆಂಬ ಆತಂಕ ನಿರ್ಮಾಣವಾಗಿತ್ತು. ಶ್ರೀ ದೇವೇಗೌಡರು ಹೇಳಿದರು, "ತಾಯಿ, ದಯವಿಟ್ಟು ಸತ್ಯಾಗ್ರಹ ಹಿಂತೆಗೆದುಕೊಳ್ಳಿ. ನಾನೀಗ ಮಧ್ಯಾಹ್ನ 1 ಗಂಟೆಗೆ ದೆಹಲಿಗೆ ಹೊರಟಿದ್ದೇನೆ. ಸರ್ಕಾರ ರಚಿಸುವ ಬಗ್ಗೆ ನಾಳೆ ರಾಷ್ಟ್ರಪತಿಗಳಿಗೆ ಪತ್ರ ಸಲ್ಲಿಸಿ, ನಾಳಿದ್ದು ಬಂದು ಮಾಡುವ ಮೊದಲ ಕೆಲಸ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರನ್ನು ಘೋಷಿಸುವುದು. ದೇವರಾಣೆಯಾಗೂ ಇದು ಸತ್ಯ. ನನ್ನ ಮಾತನ್ನು ನಂಬಿ; ಈ ಮಾತನ್ನು ನಡೆಸದಿದ್ದರೆ ನನ್ನನ್ನು ವಚನ ಭ್ರಷ್ಟ ಎಂದು ಕರೆಯಿರಿ." ಎಂದರು "ಇರಲಿ; ಎರಡು ದಿವಸಗಳಲ್ಲಿ ನಮ್ಮ ಶರಣರಿಗೆ ಏನೂ ಆಗದು ಹೋಗಿ ಬನ್ನಿ; ನೀವು ಪ್ರಧಾನಿಯಾದರೆ ನಮಗೂ ಹೆಮ್ಮೆಯೆ!" ಎಂದೆ. ಆಗ ಸಿಂಧ್ಯರವರು ಮಾತನಾಡಿ, "ನಾನು ಮಧ್ಯೆ ಜವಾಬ್ದಾರಿ ಇದ್ದೇನೆ. ಸತ್ಯಾಗ್ರಹ ನಿಲ್ಲಿಸಿರಿ." ಎಂದರು.

"ಇರಲಿ, ಶ್ರೀ ದೇವೇಗೌಡರು ಹೋಗಿ ಬರಲಿ. ಎರಡೇ ದಿವಸಗಳಲ್ಲಿ ಶರಣರಿಗೆ ತೊಂದರೆಯಾಗದು." ಎಂದೆ. ಮಾತು ತೆಗೆದುಕೊಂಡ ಮೇಲೆ ಶರಣ.ಪುಟ್ಟರುದ್ರ ಮತ್ತಿತರರು ವಾಪಸು ಬಂದರು. ಎರಡೇ ದಿನಗಳಲ್ಲಿ ಕೆಲಸವಾಗುತ್ತದೆ ಎಂದು ಸತ್ಯಾಗ್ರಹಿಗಳಿಗೆ ಸಂತೋಷವಾಯಿತು. ಆದರೆ, ಗದುಗಿನ ತೋಂಟದಾರ್ಯ ಜಗದ್ಗುರುಗಳಿಂದ ನನಗೆ ಫೋನ್ ಬಂದಿತು. "ಸತ್ಯಾಗ್ರಹ ನಿಲ್ಲಿಸಿರಿ." ಎಂದು.

"ಎರಡು ದಿವಸಗಳಲ್ಲಿ ಕೆಲಸವಾಗುತ್ತದೆ. ಶ್ರೀ ದೇವೇಗೌಡರು ಮಾತುಕೊಟ್ಟಿದ್ದಾರೆ. ಅವರು ಹೋಗಿ ಬರಲಿ. ಯಾಕೆ ನಿಲ್ಲಿಸುವುದು?"

"ನೀವು ಬಹಳ ಹಠಮಾರಿ; ಯಾರ ಮಾತೂ ಕೇಳೋಲ್ಲ." ಎಂದರು ಸ್ವಾಮೀಜಿ.

"ಇದು ಒಂದು ಚಳುವಳಿ ವಿಷಯ; ಒಮ್ಮೆ ಹೆಜ್ಜೆ ಇಟ್ಟ ಮೇಲೆ ಹಿಂತೆಗೆಯಬಾರದು." ಎಂದೆ.

"ಎಂಜಿನಿಯರಿಂಗ್ ಕಾಲೇಜೋ ಅಂಥ ಯಾವುದಾದರೂ ಅವಕಾಶ ಕೊಡುತ್ತಾರೆ. ಸುಮ್ಮನೇ ಚಳುವಳಿ ನಿಲ್ಲಿಸಿರಿ" ಎಂಬ ಸಲಹೆ ಸ್ವಾಮಿಗಳದು.

ನಾನು ಒಪ್ಪದಿದ್ದಾಗ ಷಡ್ಯಂತ್ರ ಮಾಡಿ ನಾವು ಚಳುವಳಿ ನಿಲ್ಲಿಸಿದೆವು ಎಂದು ಟಿ.ವಿ. ರೇಡಿಯೋ ಮೂಲಕ ಸುಳ್ಳು ಸುದ್ದಿ ಹರಡಿ, ಗದುಗಿನ ಜಗದ್ಗುರುಗಳು, ಎಂ.ಪಿ.ಪ್ರಕಾಶ್ ಜೇಲಿಗೆ ಹೋಗಿ ನಮ್ಮ ಸತ್ಯಾಗ್ರಹಿಗಳಿಗೆ ಸುಳ್ಳು ಸುದ್ದಿ ನೀಡಿದ್ದಾರೆ. ಅವರು ನಂಬದೆ, "ಸಾಧ್ಯವಿಲ್ಲ. ಮಧ್ಯಾಹ್ನ 4 ಗಂಟೆಗೆ ಮಾತಾಜಿ ಬಂದು ಹೋಗಿದ್ದಾರೆ. ಅವರು ಚಳುವಳಿ ನಿಲ್ಲಿಸಿಲ್ಲ." ಎಂದು ಅಂದುದಕ್ಕೆ ಅವರನ್ನು ಗದುಗಿನ ಶ್ರೀಗಳು ಕೀಳು ಶಬ್ದ ಬಳಸಿ ಬೈದು, ಸಂಪ್ರದಾಯ ಮಠಾಧಿಕಾರಿಗಳಾಗಿರುವ, ಸತ್ಯಾಗ್ರಹದಲ್ಲಿ ಭಾಗಿಗಳಾಗಿದ್ದ ಕೆಲವರನ್ನು ಸತ್ಯಾಗ್ರಹ ಬಿಡಿಸಿ ಚಳುವಳಿ ಕೆಡಿಸಿದರು. ಯಶಸ್ಸು ಹತ್ತಿರದಲ್ಲೇ ಇದ್ದುದು ಖಚಿತವಾಗಿತ್ತು. ನಮಗಾಗಲೀ, ರಾಷ್ಟ್ರೀಯ ಬಸವ ದಳಕ್ಕಾಗಲಿ ಕೀರ್ತಿ ಬರಬಾರದೆಂದೇ ಈ ಪಾಪದ ಕೆಲಸ ಮಾಡಿರುವುದು.

ಆದ್ದರಿಂದ ಈಗ

1. ತಮ್ಮ ತಂದೆ ಶ್ರೀ ದೇವೇಗೌಡರು ಹೊತ್ತ "ವಚನ ಭ್ರಷ್ಟ" ಎಂಬ ಕಲಂಕ ತೊಡೆದು ಹಾಕುವ ಸದವಕಾಶ ಮುಖ್ಯಮಂತ್ರಿ ಶ್ರೀ ಕುಮಾರ ಸ್ವಾಮಿಯವರಿಗೆ ಒದಗಿ ಬಂದಿದೆ.
2. ಆಗುತ್ತಿದ್ದ ಕೆಲಸಕ್ಕೆ ಕಲ್ಲು ಹಾಕಿದ (ಅಪ) ಕೀರ್ತಿ ಹೊಂದಿರುವ ಗದುಗಿನ ಜಗದ್ಗುರುಗಳ ಪರಮ ಆಪ್ತರಾದ ಶ್ರೀ ಎಂ.ಪಿ.ಪ್ರಕಾಶ್ ಗೃಹಮಂತ್ರಿಗಳೇ ಆಗಿದ್ದಾರೆ. ಈಗ ತಮ್ಮ ಹಳೆಯ ಪಾಪದ ಕೊಳೆ ತೊಳೆದುಕೊಳ್ಳಲು ಉಭಯತರಿಗೂ ಯೋಗ ಕೂಡಿ ಬಂದಿದೆ.

3. 2005ನೆಯ ಇಸವಿಯ ಶರಣ ಮೇಳದಲ್ಲಿ ಬಸವ ನಾಣ್ಯದ ಕೆಲಸ 'ನಿಮ್ಮ ಅಧಿಕಾರಾವಧಿಯಲ್ಲಿ ಆಗಲಿ' ಎಂದು ನಾವು ಅಸಂಖ್ಯಾತ ಜನರ ಎದುರಿನಲ್ಲಿ ಹೇಳಿದಾಗ, "ಖಂಡಿತಾ ಪ್ರಯತ್ನಿಸುತ್ತೇನೆ." ಎಂದು ಭಾಷಣ ಮಾಡಿದ ಶ್ರೀ ರಾಜಶೇಖರನ್ ಅವರು ನಂತರ ಅದರ 'ಎಲ್ಲ ಶ್ರೇಯಸ್ಸು' ಅರವಿಂದ ಜತ್ತಿಯವರಿಗೇ ಹೋಗಬೇಕೆಂದು ತೆರೆಯ ಹಿಂದೆ ರಾಜಕಾರಣ ಮಾಡಿದ್ದು, ಎಲ್ಲವೂ ನನ್ನಿಂದಲೇ ಎಂದು ಹಮ್ಮಿನಿಂದ ಬೀಗುತ್ತ ಕೀರ್ತಿಯನ್ನು ಬಾಚಿಕೊಳ್ಳಬೇಕೆಂಬ ಉತ್ಕಟ ಹಂಬಲದ ಅರವಿಂದ ಜತ್ತಿಯವರಿದ್ದಾರೆ.

4. ನಾವು ಒಳ್ಳೆಯದನ್ನು ಮಾಡಿದರೂ ಅದನ್ನು ಕೆಡಿಸಲು ಪಣ ತೊಟ್ಟು ನಿಲ್ಲುವ ಮುರುಘಾ (ಬಸವ) ಕೇಂದ್ರದ ನೇತಾರರಿದ್ದಾರೆ.

ಇಂಥ ಸನ್ನಿವೇಶದಲ್ಲಿ ನಾವು ತಟಸ್ಥವಾಗಿರುವುದೇ ಲೇಸು. ಏಕೆಂದರೆ ಮತ್ತೊಬ್ಬರು ಗುರು ಬಸವಣ್ಣನವರಿಗೆ, ಶರಣ ಪರಂಪರೆಗೆ ಒಳ್ಳೆಯದು ಮಾಡುತ್ತಿದ್ದರೆ ನಾವು ಎಂದೆಂದೂ ಅದಕ್ಕೆ ಅಡ್ಡಿ ಮಾಡುವುದಿಲ್ಲ. ಒಳ್ಳೆಯದು ಕಂಡಾಗ ಸಂತೋಷ ಪಡುತ್ತೇವೆ. 15-8-1947ರಂದು ದೊರಕಿದ ಸ್ವಾತಂತ್ರ್ಯ ಸಂಪಾದನೆಯ ಕೀರ್ತಿ ಮಹಾತ್ಮಾಜಿ, ನೆಹರೂ, ವಲ್ಲಭಭಾಯಿ ಪಟೇಲ್ ಮುಂತಾದವರಿಗೆ ದೊರಕಿದರೂ ಹಿಂದೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಎಂದು ಹೇಗೆ ಮೊದಲು ದುಡಿದ, ಹೋರಾಡಿದ ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಝಾನ್ಸಿ ರಾಣಿ ಮುಂತಾದವರಿಗೆ ಲಭ್ಯವಾಗುವುದೋ ಹಾಗೆ ಬಸವೇಶ್ವರ ವಿಶ್ವ ವಿದ್ಯಾಲಯ ಎಂದು ಗುಲಬರ್ಗಾ ವಿವಿಗೆ ನಾಮಕರಣವಾದಾಗ ಆ ಕೀರ್ತಿಯನ್ನು ಅರವಿಂದ ಜತ್ತಿಯವರೇ (ನಾಣ್ಯದ ಪ್ರೇರಣೆಯ ಕೀರ್ತಿಯನ್ನು ಬಾಚಿಕೊಂಡಂತೆ) ಬಾಚಿಕೊಂಡರೂ ಜನರ ಮನಸ್ಸಿನ ಒಂದು ಮೂಲೆಯಲ್ಲಾದರೂ ಒಂದು ಕಾಲದಲ್ಲಿ ನಾವು ಹೋರಾಡಿದ್ದು ಉಳಿದುಕೊಂಡಿರುತ್ತದೆಂದು ನಂಬಿದ್ದೇನೆ. ಇನ್ನು ಮುಂದೆ ಆಗಬೇಕಾದ ಕೆಲಸಗಳ ಬಗ್ಗೆ ಆಲೋಚನೆ ಮೂಡುತ್ತಲೇ ಬಸವ ಸಮಿತಿ ಮೂಲಕ ಶ್ರೀ ರಾಜಶೇಖರನ್ ಅವರ ಗಮನಕ್ಕೆ ತರುತ್ತೇವೆ.

☐ ವೀರೇಶ್ ತಿಮ್ಮಪ್ಪಯ್ಯನಹಳ್ಳಿ, ಕುಂಬಳಗೋಡು

? "ಬಸವ ಪೀಠವು ಎದ್ದು" ಎಂಬ ಸರ್ವಜ್ಞ ವಚನವನ್ನು ಅರ್ಥೈಸುವಾಗ ಬಸವ ಸಮಿತಿ, ಬಸವ ಕೇಂದ್ರ, ಬಸವ ಧರ್ಮ ಪೀಠ ಎಂದು ಯಾವುದನ್ನು ಕುರಿತು ಅನ್ವಯಿಸಬೇಕು. ?

★ ನೀವೇ ಕೊಂಚ ಆಲೋಚಿಸಿರಿ. "ಪೀಠ" ಎಂಬ ಪದವು ಧಾರ್ಮಿಕ ಹಿನ್ನೆಲೆಯಿಂದ ಬಳಕೆಯಾಗುವಂಥದು. ಬಸವೇಶ್ವರ ಅಧ್ಯಯನ ಪೀಠ ಎಂಬ ವಿಶ್ವವಿದ್ಯಾಲಯಗಳ ಪೀಠಗಳಾಗಲಿ, ಸಮಿತಿ, ಕೇಂದ್ರ ಎಂಬ ಪದ ಉಳ್ಳ ಸಂಸ್ಥೆಗಳಾಗಲೀ ಆ ಪದದ ಘನತೆ, ಭವ್ಯತೆ, ದಿವ್ಯತೆಗಳನ್ನು ಪ್ರತಿಬಿಂಬಿಸಲಾರವು. "ಗುರು" ಇದ್ದುದು ಧರ್ಮಪೀಠ. ಆದ್ದರಿಂದ ಸರ್ವಜ್ಞನು ಭವಿಷ್ಯ ನುಡಿದಿರುವುದು ಕೂಡಲ ಸಂಗಮದ "ಬಸವ ಧರ್ಮ ಪೀಠ" ಕುರಿತೇ ಎಂಬುದು ಯಾರಿಗಾದರೂ ಮನವರಿಕೆಯಾಗುವಂಥದೆ.

☐ ಅಕ್ಕಮಹಾದೇವಿ ತಿಪ್ಪೇಸ್ವಾಮಿ ಮತ್ತು ಗಂಗಮ್ಮ ಚನ್ನಯ್ಯ, ಚಿತ್ರದುರ್ಗ

?ಪ್ರ.1. "ಬಸವ ನಾಣ್ಯ" ಬಿಡುಗಡೆಯ ದೃಶ್ಯವನ್ನು ಸಂತೋಷದಿಂದ ದೂರದರ್ಶನದಲ್ಲಿ ನೋಡುತ್ತಿದ್ದೆವು. ವೇದಿಕೆಯ ಮೇಲಿಟ್ಟ ಎರಡೂ ತೋಳಿಲ್ಲದ ಗುರು ಬಸವಣ್ಣನವರ ಮೂರ್ತಿಯನ್ನು ನೋಡಿದಾಗಲೆಲ್ಲ ತುಂಬಾ ದುಃಖವಾಗುತ್ತಿತ್ತು. ಯಾರೋ ತೋಳನ್ನು ಕಡಿದಿದ್ದಾರೆ ಎಂಬಂತೆ, ಆ ಮೂರ್ತಿ ಅಮಂಗಲ ಎಂಬಂತೆ ಭಾಸವಾಗುತ್ತಿತ್ತು. ಇಂಥ ಮೂರ್ತಿ ಸರಿಯೆ?

★ ಖಂಡಿತಾ ಸರಿಯಲ್ಲ. ಮನುಷ್ಯನ ಎದೆಯ ಭಾಗದವರೆಗಿನ ಫೋಟೋ, ಮೂರ್ತಿ ಇರುತ್ತದೆ. ಅದೂ ಅಷ್ಟು ಸೂಕ್ತವಲ್ಲ. ಆದರೆ ಮುಖ ಎದ್ದು ಕಾಣಲೆಂದು ಅರ್ಧ ಚಿತ್ರಣದ ಫೋಟೋ ಮಾಡಲಾಗುತ್ತದೆ. ಆದರೆ ತೋಳಿಲ್ಲದ ಮೂರ್ತಿ ತೀರಾ ಅಮಂಗಲ. ಬಸವ ಸಮಿತಿಯವರು ಯಾವಾಗಲೂ ತುಂಡು ಮಾಡಿ, ಕಡಿದೇ ಗುರು ಬಸವಣ್ಣನವರನ್ನು ಗೌರವಿಸುವುದು. ಅವರ ಅಂತರಂಗದ ಭಾವಕ್ಕೆ ತಕ್ಕಂತೆ ಮೂರ್ತಿಯನ್ನು ಮಾಡಿಸಿದ್ದಾರೆ.

ಪ್ರ.2 ? ನನ್ನ ಒಬ್ಬ ಮಿತ್ರ ಕೇಳುತ್ತಾನೆ; ಲಿಂಗಾಯತ ಧರ್ಮವು ಮೂರ್ತಿ ಪೂಜಕ ಧರ್ಮವಲ್ಲ; ಕಲ್ಲು



ದೇವರು ದೇವರಲ್ಲ. ಮಣ್ಣ ದೇವರು ದೇವರಲ್ಲ ಎನ್ನುತ್ತದೆ. ಇಷ್ಟಲಿಂಗವು ಒಂದು ಶಿಲೆ. ಅದನ್ನು ಏಕೆ ಪೂಜಿಸಬೇಕು. ಮತ್ತು ಧರಿಸಬೇಕು ?

★ ಇಷ್ಟಲಿಂಗವು ಒಂದು ಕುರುಹು, Symbol; ನಿರಾಕಾರ ನಿರ್ಗುಣನಾದ ದೇವರನ್ನು ಮಾನವರು, ಪಶು ಪಕ್ಷಿ ಮುಂತಾದ ಆಕಾರದಲ್ಲಿ ಪೂಜಿಸದೆ ದೇವನೇ ಸೃಷ್ಟಿಸಿಕೊಟ್ಟ ವಿಶ್ವದ ಆಕಾರದಲ್ಲಿ ಪೂಜಿಸಬೇಕೆಂದು ಧರ್ಮಪಿತ ಬಸವಣ್ಣನವರು ಇಷ್ಟಲಿಂಗವನ್ನು ಕೊಟ್ಟರು. ಇದು ಶಿಲೆಯಂತೆ ಗಟ್ಟಿಯಾಗಿ ಇರುವುದೇ ವಿನಾ ಕಲ್ಲು ಅಲ್ಲ. ಅನೇಕ ರಾಸಾಯನಿಕ ವಸ್ತುಗಳನ್ನು (ಅಷ್ಟಬಂಧ) ಸೇರಿಸಿ ಇಷ್ಟಲಿಂಗದ ಕಂತೆಯನ್ನು ತಯಾರಿಸಲಾಗುವುದು. ಇಷ್ಟಲಿಂಗ ಯೋಗದಲ್ಲಿ ಭಕ್ತಿಯಷ್ಟೆ ಇರದು ದೃಷ್ಟಿ(ತ್ರಾಟಕ) ಯೋಗವಿದೆ. ಇದಕ್ಕೆ ಅನುಕೂಲವಾಗಲು ಹೊಳಪುಳ್ಳ ಕಂಥೆಯ ಹೊರಮೈ ಇರುತ್ತದೆ. ಇದನ್ನೇಕೆ ಪೂಜಿಸಬೇಕು ಎಂದರೆ ಸೃಷ್ಟಿಯನ್ನು ಕೊಟ್ಟ ಕರ್ತನನ್ನು ಪೂಜಿಸಬೇಕಾದುದು ಆದ್ಯ ಕರ್ತವ್ಯ; ಪೂಜೆಗೆ ಒಂದು ವಸ್ತು ಬೇಕು. ಇಷ್ಟಲಿಂಗವು ಅತ್ಯಂತ ಮಹತ್ವಪೂರ್ಣ ತಾತ್ವಿಕ ಹಿನ್ನೆಲೆಯ ಕುರುಹು. ಇಷ್ಟಲಿಂಗವನ್ನು ಸದಾ ಏಕೆ ಧರಿಸಬೇಕು? ಒಂದು (ಕನ್‌ವರ್ಜಿಂಗ್) ಲೆನ್ಸ್ ಅನ್ನು ಹಿಡಿದಾಗ ಅದು ಸೂರ್ಯ ಕಿರಣಗಳನ್ನೆಲ್ಲ ಒಂದು ಬಿಂದುವಿಗೆ ಕೇಂದ್ರೀಕರಿಸುತ್ತದೆ. ಆಗ ಅದರ ಕೆಳಗೆ ಹಿಡಿದ ಕಾಗದ ಸುಡುವುದಷ್ಟೆ. ಹಾಗೆ ಇಷ್ಟಲಿಂಗವು ವಿಶ್ವ ಶಕ್ತಿ (Cosmic energy) ಯನ್ನು ತನ್ನಲ್ಲಿ ಕೇಂದ್ರೀಕರಿಸಿಕೊಳ್ಳುವುದು. ಸಾಧಕನು ದೃಷ್ಟಿ ಇಟ್ಟು ನೋಡಿದಾಗ ದೃಷ್ಟಿಯ ಮೂಲಕ ಅಂತರಂಗವನ್ನು ಪ್ರವೇಶಿಸುವುದು. ಇಷ್ಟಲಿಂಗವು ಶಕ್ತಿಕೇಂದ್ರ. ಅದನ್ನು ತೆಗೆದು ತೆಗೆದು ಇಡುವುದರಿಂದ ಶಕ್ತಿ ಪತನವಾಗುವುದು. ಅದಕ್ಕಾಗಿ ಸದಾ ಧರಿಸಿರಬೇಕು. ಹುಟ್ಟುತ್ತಲೇ ಬಂಗಾರದ ತೊಟ್ಟಿಲಲ್ಲಿ ಮಲಗಿದ ಆಗರ್ಭ ಶ್ರೀಮಂತನಿಗೆ ದುಡ್ಡಿನ ಮಹತ್ವ ಹೇಗೆ ತಿಳಿದಿರುವುದಿಲ್ಲವೋ ಹಾಗೆ ಹುಟ್ಟುತ್ತಲೇ ಇಷ್ಟಲಿಂಗ ಪಡೆಯುವ ಭಾಗ್ಯವಿರುವ ನಾಮ್‌ಕೆ ವಾಸ್ತೆ ಲಿಂಗಾಯತರಿಗೂ ಇಷ್ಟಲಿಂಗದ ಮಹತ್ವ ತಿಳಿದಿಲ್ಲ. ಸ್ವಯಂ ಪ್ರೇರಣೆಯಿಂದ ಇಷ್ಟಲಿಂಗ ದೀಕ್ಷೆ ಹೊಂದುವ ಲಿಂಗಾಯತೇತರರನ್ನು ನೋಡಿರಿ. ಅವರಲ್ಲಿ ಎಂತಹ ಲಿಂಗನಿಷ್ಠೆ ಇರುತ್ತದೆ? ಹಸಿದವರಿಗೇ ಅನ್ನದ ಮಹತ್ವ ತಿಳಿದಿರುತ್ತದೆ, ಹೊಟ್ಟೆ ತುಂಬಿದವರಿಗೆ ಹುಗ್ಗಿಯೂ ಮುಳ್ಳು!

☐ ವೃಷಭೇಂದ್ರಪ್ಪ, ತಿಮ್ಮಪ್ಪಯ್ಯನ ಹಳ್ಳಿ, ಚಳ್ಳಕೆರೆ ತಾಲ್ಲೋಕು

? ಜಗದ್ಗುರು ಪದವನ್ನು ಕೇವಲ ಆಯಾ ಧರ್ಮಗಳ ಆದ್ಯರಿಗೆ ಮಾತ್ರ ಉಪಯೋಗಿಸಿ ಉಳಿದ ಮಠಾಧೀಶರನ್ನು ಸದ್ಗುರು ಎನ್ನಬೇಕು ಎಂದು ನಮ್ಮ ಮಿತ್ರರ ಅಭಿಪ್ರಾಯ ?

★ ಸರಿಯಾದ ಅಭಿಪ್ರಾಯ. ನಿಜವಾಗಿ ಹೇಳುವುದಾದರೆ ಪರಮಾತ್ಮನಷ್ಟೆ ಜಗದ್ಗುರು. ಏಕೆಂದರೆ ಬ್ರಹ್ಮಾಂಡದೊಡೆಯ ಅವನು. "ಗುರು" ಎಂಬ ಅರ್ಥದಲ್ಲಿ ಒಂದು ಧರ್ಮಕ್ಕೆ ಒಬ್ಬ ಆದಿಗುರು ಇರುತ್ತಾನೆ. ಅವನಷ್ಟೆ ಆ ಧರ್ಮ -ಸಮಾಜಕ್ಕೆ ಜಗದ್ಗುರು. ಏನು ಮಾಡುವುದು ಪದವನ್ನು ಪುರುಷಪ್ರಧಾನ ಪೀಠಕ್ಕೆ, ಜಾತಿ ಆಧಾರಿತವಾಗಿ ಬಳಸುತ್ತಿದ್ದುದರಿಂದ ಇದಕ್ಕೆ ಪ್ರತಿಯಾಗಿ ಮಹಿಳಾ ಜಗದ್ಗುರು ಪೀಠವನ್ನು, ಮಹಾಜಗದ್ಗುರು ಪೀಠವನ್ನು ಸ್ಥಾಪಿಸಬೇಕಾಯಿತು.

☐ ಬಾಳೆಹೊನ್ನೂರಿನ ಮಠವನ್ನು ವೀರಮಾತೆ ಅಕ್ಕನಾಗಲಾಂಬಿಕೆಯು ಸ್ಥಾಪಿಸಿ ರುದ್ರಮುನಿ ದೇವರಿಗೆ ಪಟ್ಟ ಕಟ್ಟಿದರು ಎಂದು ನೀವು ಹೇಳುತ್ತೀರಿ. ಪಂಚ ಪೀಠದವರ ಅನುಯಾಯಿಗಳು ಕೃತಯುಗದಲ್ಲಿ ಐದು ಆಚಾರ್ಯರು ಲಿಂಗೋದ್ಭವರಾಗಿ ಧರ್ಮ ಸ್ಥಾಪನೆ ಮಾಡಿದರು ಎನ್ನುತ್ತಾರೆ. ನಿಮ್ಮ ಹೇಳಿಕೆಗೆ ಆಧಾರವೇನು ?

★ ದಿ॥ತ.ಸು.ಶಾಮರಾಯರು ಪ್ರಕಟಿಸಿರುವ ಶಿವಶರಣರ ಕಥಾರತ್ನ ಕೋಶ ಓದಿರಿ. ಇದಕ್ಕಿಂತ ಅಧಿಕೃತ ಕಲ್ಯಾಣ ಕಿರಣ ಮೇ-ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿರುವ 1876ರಲ್ಲಿ ಪ್ರಕಟವಾದ ಮೈಸೂರ್ ಗೆಜೆಟಿಯರ್‌ದಲ್ಲಿ "ಲಿಂಗಾಯತರು" ಕುರಿತ ರೈಸ್ ಸಾಹೇಬರ ಸಮೀಕ್ಷೆ. 1876ರವರೆಗೆ ಸಮಾಜದಲ್ಲಿ ವೀರಶೈವ ಪದ ಬಳಕೆ ಇರಲಿಲ್ಲ. ಪಂಚಾಚಾರ್ಯರ ಕಲ್ಪನೆ ಇರಲಿಲ್ಲ. ಬಸವಣ್ಣನವರೇ ಲಿಂಗಾಯತ ಧರ್ಮ ಸ್ಥಾಪಕರೆಂದು ಜನ ನಂಬಿದ್ದರು. ಲಿಂಗಾಯತ ಸಮಾಜದ ಪ್ರಮುಖ ಮಠಗಳೆರಡು- ಚಿತ್ರದುರ್ಗದ ಮುರುಘಾಮಠ ಮತ್ತು ಬಾಳೇಹೊನ್ನೂರು ಮಠ ಎಂದು ರೈಸ್

ಬರೆದಿದ್ದಾರೆ. ಪಂಚಾಚಾರ್ಯರ ಕಲ್ಪನೆ ಇಪ್ಪತ್ತನೇ ಶತಮಾನದಲ್ಲಿ ಕೃತಕವಾಗಿ ಹೆಣೆದುದು. ವಚನ ಸಾಹಿತ್ಯ ಹೊತ್ತು ಉಳಿವೆಯ ಕಾನನವನ್ನು ಪ್ರವೇಶಿಸಿದ ಅಕ್ಕನಾಗಲಾಂಬಿಕೆ ಚನ್ನಬಸವಣ್ಣನವರ ಲಿಂಗೈಕ್ಯದ ನಂತರ ರುದ್ರಮುನಿ ದೇವರು, ನುಲಿಯ ಚಂದಯ್ಯ ಮುಂತಾದ ಶರಣರೊಡನೆ ಮಲೆನಾಡಿನಲ್ಲಿ ಧರ್ಮ ಪ್ರಚಾರ ಮಾಡಿ ಅಲ್ಲಿ ಧರ್ಮ ಪೀಠವೊಂದರ ಅಗತ್ಯ ಕಂಡು ಅದನ್ನು ಸ್ಥಾಪಿಸಿ ರುದ್ರಮುನಿದೇವರಿಗೆ ಪಟ್ಟಕಟ್ಟಿ, ಸಮೀಪದ ತರೀಕೆರೆಯ ಬಳಿ ಲಿಂಗೈಕ್ಯಳಾಗಿದ್ದಾಳೆ. ಆ ತಾಯಿಯ ಗದ್ದುಗೆ ಅಲ್ಲಿದೆ ಮತ್ತು ಹತ್ತಿರದಲ್ಲೇ ನಂದಿ ಗ್ರಾಮದ ಬಳಿ ನುಲಿಯ ಚಂದಯ್ಯನವರ ಗದ್ದುಗೆ ಮಠವಿದೆ.

☐ ಬಸವರಾಜ ನಾಡಗೌಡ, ಬಿಜಾಪುರ

? "ಮುಖ್ಯ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದ ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಮಹಾಮಾನವತಾವಾದಿ ಬಸವಣ್ಣನವರ ಜನ್ಮಸ್ಥಳ ಇಂಗಳೇಶ್ವರ ಎಂದು ನಿರ್ಣಯಿಸಿರುವುದು ಬಸವ ಭಕ್ತರನ್ನು ತೀವ್ರವಾಗಿ ಕೆರಳಿಸಿದೆ." ಎಂದು ಹೇಳಿಕೆಯನ್ನು ನೀಡಿದ್ದಲ್ಲದೆ ಸರ್ಕಾರದ ವಿರುದ್ಧ ಹೋರಾಟಕ್ಕೆ ಬಸವ ಸೈನ್ಯ ಸಜ್ಜಾಗಿದೆ. ಎಂದು ಬಸವ ಸೈನ್ಯದ ಅಧ್ಯಕ್ಷ ಭೀಮು ಗೊಳಸಂಗಿ ಮತ್ತು ಪ್ರಮುಖರಾದ ವಿಶ್ವನಾಥ ಹಾರಿವಾಳ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಇದೇನು ಸಮಸ್ಯೆ; ನಮಗೆ ಗೊಂದಲ ಉಂಟಾಗಿದೆ?

★ ಗೊಂದಲ ಇಲ್ಲದಲ್ಲಿ ಗೊಂದಲ ಹುಟ್ಟಿಸಿ ಒಬ್ಬರಿಗೊಬ್ಬರು ಬೀದಿಗಿಳಿದು ಹೋರಾಡುವುದರಲ್ಲಿ ಲಿಂಗಾಯತರು ಪರಿಣಿತರು. ನೀವೇನು ವರ ಕೇಳುತ್ತೀರೋ ಕೇಳಿ ಎಂದು ದೇವರು ಹಾವಪ್ಪ ಮುಂಗುಲಪ್ಪನನ್ನು ಕೇಳಿದಾಗ ನನ್ನ ಶತ್ರುವಿನ ಎರಡೂ ಕಣ್ಣು ಹೋಗುವುದಾದರೆ ನನ್ನ ಒಂದು ಕಣ್ಣು ಹೋಗಲಿ ಎಂದು ಹಾವಪ್ಪ ವರ ಕೇಳಿದಂತಿದೆ ಬಸವ ಸೇನೆಯವರ ವರ್ತನೆ. ಕೂಡಲ ಸಂಗಮ, ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದಿಂದ ಶರಣರ ಸ್ಥಾನಗಳನ್ನೆಲ್ಲ ಅಭಿವೃದ್ಧಿ ಪಡಿಸುತ್ತೇವೆ ಎಂದು ಸರ್ಕಾರವು ಸ್ವಯಂ ಪ್ರೇರಣೆಯಿಂದ ಮುಂದೆ ಬಂದಿದೆ. ಈಗ 20 ಕೋಟಿ ಬಿಡುಗಡೆ ಮಾಡಲಾಗಿದೆ. ಅಗತ್ಯವೆನಿಸಿದರೆ ಇನ್ನೂ ಕೊಡಲಾಗುವುದು ಎಂದಿದ್ದಾರೆ. ಹೀಗಿರುವಾಗ ಬಸವನ ಬಾಗೇವಾಡಿಯವರು ಇಂಗಳೇಶ್ವರದ ಅಭಿವೃದ್ಧಿಗೆ ಏಕೆ ವಿರೋಧಿಸಬೇಕು? ಇಂದಿನ ಬಸವನ ಬಾಗೇವಾಡಿಗೆ ಅಂದು ಇಂಗಳೇಶ್ವರ ಬಾಗೇವಾಡಿ ಎಂದೇ ಹೆಸರು ಇದ್ದುದು. ಬೆಳಗಾವಿ ಜಿಲ್ಲೆಯಲ್ಲಿ ಹಿರೇಬಾಗೇವಾಡಿ, ಬೆಲ್ಲದ ಬಾಗೇವಾಡಿ ಎಂಬುವು ಇವೆ. ಇಂಗಳೇಶ್ವರದಲ್ಲೂ ಬಾಗೇವಾಡಿಯಂತೆ ಅಗ್ರಹಾರ, ವಿಪ್ರ ಸಮೂಹ ಇದ್ದುದರಿಂದ ಅದೂ ವಿಶೇಷ ಖ್ಯಾತಿ ಹೊಂದಿದ್ದರಿಂದ ಬಾಗೇವಾಡಿಯನ್ನು ಇಂಗಳೇಶ್ವರ(ಸಮೀಪದ) ಬಾಗೇವಾಡಿ ಎಂದೇ ಕಾವ್ಯಗಳಲ್ಲಿ ಗುರುತಿಸಲಾಗಿದೆ. ಇಂಗಳೇಶ್ವರವು ಗುರು ಬಸವಣ್ಣನವರ ತಾಯಿಯ ತಾಯಿ(ಹೆಸರು ಮುತ್ತಬ್ಬೆ)ಮನೆ; ಬಾಗೇವಾಡಿ ಮಾದಿರಾಜನ ವಾಸಸ್ಥಳ, ಸಾಮಾನ್ಯವಾಗಿ ಹೆಣ್ಣು ಮಕ್ಕಳ ಹೆರಿಗೆ ತೌರಿನಲ್ಲಿಯೇ ಆಗುತ್ತದೆ. ಆದುದರಿಂದ ಮಗುವು ಹುಟ್ಟಿದುದು ಇಂಗಳೇಶ್ವರದ ಅಜ್ಜಿಯ ಮನೆಯಲ್ಲಿ, ತಂದೆಯ ಊರು ಯಾವುದೋ ಆ ಊರಿನ ಹೆಸರು ವ್ಯಕ್ತಿಯ ಜೊತೆಗೆ ಪ್ರಸಿದ್ಧವಾಗುತ್ತದೆ. ಹೀಗಾಗಿ ಬಾಗೇವಾಡಿ ಗುರು ಬಸವಣ್ಣನವರ ಹುಟ್ಟೂರು ಎಂದು ಹೆಸರಾಗಿದೆ. ಇಂದಿಗೂ ಒಂದು ಮನೆಯನ್ನು ಇಂಗಳೇಶ್ವರದಲ್ಲಿ ಬಸವಣ್ಣನವರ ಜನ್ಮಸ್ಥಳವೆಂದು ಗುರುತಿಸಲಾಗುತ್ತಿದೆ. ಗುರು ಬಸವಣ್ಣನವರ ಜೀವನದೊಡನೆ ಬೆಸೆದುಕೊಂಡ ಇನ್ನೂ 2 ಐತಿಹಾಸಿಕ ಸ್ಥಳಗಳು ಇಂಗಳೇಶ್ವರದಲ್ಲಿ ಇವೆ. 1.ಭಾವಿ, 2. ಊರ ಹೊರಗೆ ಗುಡ್ಡದ ಮೇಲಿರುವ ಅಕ್ಕನಾಗಮ್ಮನ ಗವಿ; ಉಪನಯನವನ್ನು ತಿರಸ್ಕರಿಸಿ ಬಸವರಸ ಮನೆ ಬಿಟ್ಟ ಬಳಿಕ ಅಜ್ಜ ಮನೆಗೆ ಹೋಗಿರಬೇಕು. ಹುಡುಕಿಕೊಂಡು ಬಂದವರು ಉಪನಯನಕ್ಕಾಗಿ ಒತ್ತಾಯಿಸಿದಾಗ ಅಲ್ಲಿಂದಲೂ ಬಾಲಕ ಹೊರಡುವನು. ಇನ್ನು ನಮ್ಮ - ನಿನ್ನ ಸಂಬಂಧ ಹರಿಯಿತು. ಎಂದು ಬಂಧುಗಳು ಕೋಪಾವಿಷ್ಟರಾಗಿ ನುಡಿದಾಗ ಬಸವರಸ ಅಲ್ಲಿರುವ ಭಾವಿಯ ನೀರನ್ನು ತೆಗೆದುಕೊಂಡು ಎಳ್ಳು ನೀರು ಬಿಟ್ಟಿರಬಹುದು.

ಸ್ವಭಾವತಃ ಆಧ್ಯಾತ್ಮಿಕ ಪ್ರವೃತ್ತಿಯ ಅಕ್ಕನಾಗಲಾಂಬಿಕೆ ಊರ ಹೊರಗಿನ ಗುಡಕ್ಕೆ ಹೋಗಿ ಧ್ಯಾನಾಸಕ್ತಳಾಗುತ್ತಿದ್ದಳು. ಹೀಗಾಗಿ ಅಕ್ಕನಾಗಮ್ಮನ ಗವಿ ಎಂದು ಅದಕ್ಕೆ ಹೆಸರು ಬಂದಿದೆ. ಈ



ಮೂರು ಐತಿಹಾಸಿಕ ಸ್ಥಳಗಳನ್ನು ಉಳಿಸಿಕೊಂಡು, ಸಂರಕ್ಷಿಸಿ, ಹುಟ್ಟಿದ ಮನೆ ಎಂದು ಹೇಳುವಲ್ಲಿ ಒಂದು ಸ್ಮಾರಕವನ್ನು ರಚಿಸುವುದು ಅತ್ಯಗತ್ಯ. ಇದಕ್ಕೆ ಬಸವನ ಬಾಗೇವಾಡಿಯ ಜನರು ಅಡ್ಡಗಾಲು ಹಾಕದೆ, ತಮ್ಮೂರಲ್ಲಿ ಏನು ಆಗಬೇಕೆಂದು ಅಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದರೆ ಸಾಕು.

ನಾನು ಇನ್ನೊಂದು ಸ್ಥಳದ ಬಗ್ಗೆ ಅಭಿವೃದ್ಧಿ ಪ್ರಾಧಿಕಾರದ ಗಮನ ಸೆಳೆಯಲು ಬಯಸುತ್ತೇನೆ. ಅದೆಂದರೆ ಬಸವನ(ಹೋರಿ) ಮರಡಿ. ಇದು ಬಾಗೇವಾಡಿ ಮತ್ತು ಇಂಗಳೇಶ್ವರದ ಮಧ್ಯೆ ಇದೆ. ಅದು ಒಂದು ಚಿಕ್ಕ ಮರಡಿ (ಮಣ್ಣಿನ ಗುಡ್ಡ). ಅಲ್ಲಿ ಒಂದು ಪುಟ್ಟ ಗುಡಿ ಕಟ್ಟಲಾಗಿದ್ದು, ಒಳಗೆ ಒಂದು ಜಾಗ ತೋರಿಸಿ ಇದೇ ಬಸವಣ್ಣ ಹುಟ್ಟಿದ ಜಾಗ ಎನ್ನುತ್ತಾರೆ. ಬಾಗೇವಾಡಿಯಲ್ಲಿ ಬಸವೇಶ್ವರರ ರಥೋತ್ಸವ ದಿನದಂದು ತೇರು ಎಳೆಯುವ ಮೊದಲು ಪಲ್ಲಕ್ಕಿ ಒಯ್ದು ಆ ಜಾಗದಲ್ಲಿ ಹೇಳಿಕೆ ಅಂತ ಮಾಡಿ, ಅಲ್ಲಿಂದ ಬಂದ ಮೇಲೆ ತೇರು ಎಳೆಯುತ್ತಾರಂತೆ. ಈ ಆಚರಣೆಯ ಹಿಂದೆ ಒಂದು ಮಹತ್ವರವಾದ ಇತಿಹಾಸವನ್ನು ಗುರುತಿಸಬಹುದು.

ಗರ್ಭಿಣಿ ಮಾದಲಾಂಬಿಕೆ ಹೆರಿಗೆಗಾಗಿ ತೌರಿಗೆ ಹೊರಟಿದ್ದಾಳೆ. ಮಧ್ಯೆ ಬರುವ ಆ ಮರಡಿಯ ಮೇಲೆ ಇಳಿದು ವಿಶ್ರಾಂತಿ ಪಡೆಯುವಾಗ ಹೆರಿಗೆಯ ಬೇನೆ ಶುರುವಾಗಿ, ಹೆರಿಗೆ ಆಗಿ ಬಿಟ್ಟಿದೆ. ಅಲ್ಲಿಂದ ತಾಯಿ-ಮಗುವನ್ನು ಇಂಗಳೇಶ್ವರದ ಅಜ್ಜ ಮನೆಗೆ ಒಯ್ದಿದ್ದಾರೆ. ಇಂದು ಕರಾರುವಾಕ್ಕಾಗಿ ವೈದ್ಯರು ಹೆರಿಗೆಯ ದಿನವನ್ನು ಕೊಡುತ್ತಾರೆ. ಆದರೂ ಎಷ್ಟೋ ಜನ ವಿಮಾನ, ಟ್ರೇನ್, ಬಸ್ಸುಗಳಲ್ಲಿ ಹೆರುತ್ತಾರೆ. 2005ರ ಶರಣ ಮೇಳದಲ್ಲಿ ಅದೇ ರೀತಿ ಒಬ್ಬ ಕುಮಾರಿ ಹುಟ್ಟಿದಳು. ವೇದಿಕೆಯ ಮೇಲೆಯೇ ಶರಣ ಕುಮಾರಿ ಎಂದು ಹೆಸರನ್ನು ಇಟ್ಟೆವು. ಅದೇ ರೀತಿ ಮಾದಲಾಂಬಿಕೆ ಮಗುವನ್ನು ಹೆತ್ತಿರಬಹುದು ಮಾರ್ಗ ಮಧ್ಯದ ಆ ಮರಡಿಯ ಮೇಲೆ. ಅಂಥ ಬಸವನ ಮರಡಿಯ ಮೇಲೂ ಒಂದು ಸ್ಮಾರಕವನ್ನು ಮಾಡುವುದು ಅಗತ್ಯವಿದೆ.

☐ ಎಂ.ಮಲ್ಲಿಕಾರ್ಜುನ ಸ್ವಾಮಿ, ಚೇಳೂರ ಹಳ್ಳಿ, ತಾ-ಕೊಳ್ಳೇಗಾಗಲ

?.ಪ್ರ.1. ಪಿಂಡವಾಳವಿಲ್ಲದೆ ಇಷ್ಟಲಿಂಗ ಮಾಡಲು ಸಾಧ್ಯವೆ? ಪಿಂಡವಾಳವು ಸ್ಥಾವರವಲ್ಲವೆ?

★. ಪಿಂಡವಾಳ ಅಂದರೆ ಹುಟ್ಟು (ಪಂಚ ಸೂತ್ರ) ಲಿಂಗ. ಅದಿಲ್ಲದೆ ಕಂಥೆ ಇಡಬಹುದು. ಆದರೆ ಹಾಗೆ ಇಡಬಾರದು. ಏಕೆಂದರೆ ನಮ್ಮ ಧರ್ಮದ ಗುರಿಯೇ ಲಿಂಗ-ಅಂಗ ಸಾಮರಸ್ಯ. ಕಂಥೆ ಲಿಂಗದೇವನ ಸಂಕೇತ, ಹುಟ್ಟು ಲಿಂಗ ಅಂಗ ಅರ್ಥಾತ್ ಆತ್ಮದ ಸಂಕೇತ. ಬ್ರಹ್ಮಾಂಡದಲ್ಲಿ ಪಿಂಡಾಂಡವಿದೆ; ದೇವನಲ್ಲಿ ಜೀವನಿದ್ದಾನೆ ಎಂಬ ತತ್ತ್ವದ ಆಧಾರದ ಮೇಲೆ ಇಷ್ಟಲಿಂಗವನ್ನು ರೂಪಿಸಲಾಗಿದೆ. ಸ್ಥಾವರ ಎಂದರೆ ಒಂದು ಜಾಗದಲ್ಲಿ ಸ್ಥಿರವಾಗಿರುವುದು. ಇಷ್ಟಲಿಂಗವು ಜಂಗಮ(ಚರ - Mobile) ಲಿಂಗವೇ ವಿನಾ ಸ್ಥಾವರವಲ್ಲ. ಗುಡಿಯಲ್ಲಿರುವ ಸ್ಥಾವರ ಲಿಂಗವು ಕೈಲಾಸಪತಿ ಶಿವನ ಕುರುಹು. ಇಷ್ಟಲಿಂಗದೊಳಗಿರುವ ಪಂಚಸೂತ್ರಲಿಂಗವು ಆತ್ಮದ ಕುರುಹು.

?ಪ್ರ.2.ಪೂಜ್ಯ ಲಿಂಗಾನಂದ ಸ್ವಾಮಿಗಳಿಗೆ ಸೂತ್ರ ಯಾರಿಂದ ಸಿಕ್ಕಿತು? ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಿಂದ ದೀಕ್ಷೆ ದೊರಕಿತೆಂದು ತಿಳಿದಿದ್ದೇನೆ. ಸುತ್ತೂರು ಮಠ ಪಂಚ ಪೀಠದ ಶಾಖಾಮಠ; ಅಂದ ಮೇಲೆ ತಮಗೆ ಬಸವ ಪೀಠದ ಸೂತ್ರ ಮತ್ತು ಗುರು ದೀಕ್ಷೆ ಯಾರಿಂದ ಸಿಕ್ಕಿತು? ತಿಳಿಸಿರಿ.

★ ಪ್ರಶ್ನೆ ಮತ್ತು ಪಾರಿಭಾಷಿಕ ಭಾಷೆ ಬಹಳ ವಿಲಕ್ಷಣವಾಗಿದೆ. ಲಿಂಗಾಯತ ಧರ್ಮೀಯರು ಗೋತ್ರ ಮತ್ತು ಸೂತ್ರ ಎರಡನ್ನೂ ನಂಬಬಾರದು. ನಾನು ಮೊಟ್ಟ ಮೊದಲ ಬಾರಿ ಡಾ||ಜ.ಚ.ನಿ ಅವರನ್ನು ಭೇಟಿಯಾದಾಗ, "ನೀವು ನಮ್ಮ ಶ್ರೀ ಶೈಲದ ನಿಡುಮಾಮಿಡಿ ಪೀಠಕ್ಕೆ ಸೇರಿದವರು" ಎಂದಾಗ ನನಗೆ ಬಹಳ ನಗು ಬಂದಿತು. ಸಾಮಾನ್ಯ ಜನರಿಗೆ ಹೀಗೆ ಹೇಳಿದರೆ ಅವರು ಹಾಗೆಯೇ ಹೇಳಿಕೊಳ್ಳುತ್ತಾ ಹೋಗುತ್ತಾರೆ. ಪೂಜ್ಯ ಲಿಂಗಾನಂದ ಅಪ್ಪಾಜಿ ಇಷ್ಟಲಿಂಗ ದೀಕ್ಷೆಯನ್ನು ಬಿಜಾಪುರದ ಪೂಜ್ಯ ಮಲ್ಲಿಕಾರ್ಜುನ ಸ್ವಾಮಿಗಳಿಂದ ಪಡೆದಿದ್ದರು. ನಂತರ ಧಾರವಾಡದಲ್ಲಿ ಓದುವಾಗ ತಪೋವನದ ಕುಮಾರ ಸ್ವಾಮಿಗಳ ಪ್ರವಚನ ಕೇಳಿ ಪ್ರಭಾವಿತರಾದರು. ವೈರಾಗ್ಯ ಪ್ರೇರಿತರಾಗಿ ಜಂಗಮ ದೀಕ್ಷೆ ಬೇಕೆಂದರು. ಅಲ್ಲಿಗಾಗಲೇ ಜಾತಿ ಜಂಗಮತ್ವದ ಪ್ರಭಾವ ವಿಷಗಳ್ಳಿಯಂತೆ ಉತ್ತರ ಕರ್ನಾಟಕದಲ್ಲಿ ಹಬ್ಬಿದ್ದರಿಂದ ಲಿಂಗಾಯತ ಸಂಪ್ರದಾಯ ಮಠಾಧೀಶರು

ಜಂಗಮೇತರರಿಗೆ ಸಾಕಷ್ಟು ಕಿರುಕುಳ ಕೊಡುತ್ತಿದ್ದುದರಿಂದ ಕುಮಾರ ಸ್ವಾಮಿಗಳು ದೀಕ್ಷೆ ಕೊಡುವ ಧೈರ್ಯ ಮಾಡಲಿಲ್ಲ. ಧಾರವಾಡ ಮುರುಘಾಮಠ, ಮೂರು ಸಾವಿರ ಮಠ ಅಲ್ಲೆಲ್ಲ ಕೇಳಿದರು. ಪೂಜ್ಯ ಅಪ್ಪಾಜಿ ಪಂಚಮಸಾಲಿಯವರಾದ್ದರಿಂದ ಆ ಮಠಗಳವರು ಕೊಡಲಿಲ್ಲ. ನವಿಲುಗುಂದದ ಗವಿಮಠದ ಪಟ್ಟಾಧ್ಯಕ್ಷ ಪೂಜ್ಯ ಬಸವ ಲಿಂಗ ಸ್ವಾಮಿಗಳು ತಾವು ಪಂಚಮ ಸಾಲಿಯವರೇ ಇದ್ದರೂ ಮೂರು ಸಾವಿರ ಮಠದವರನ್ನು ಎದುರು ಹಾಕಿಕೊಂಡು ತಮ್ಮದೇ ಜಾತಿಯ ಯುವಕನಿಗೆ ಜಂಗಮದೀಕ್ಷೆ ಕೊಡುವ ಧೈರ್ಯ ಮಾಡಲಿಲ್ಲ. [ ಹುಬ್ಬಳ್ಳಿಯ ರುದ್ರಾಕ್ಷಿ ಮಠದವರು ಭಕ್ತರ ಪೈಕಿ ಅಧ್ಯಾತ್ಮಿಕ ಗುರುಗಳಾಗಿದ್ದುದರಿಂದ ಅವರ ಕಾಲ್ಬೆರಳನ್ನೇ ಕಡಿಸಿ ಅಂಗ ವಿಕಲರನ್ನಾಗಿ ಮಾಡಿದ್ದು ಬಾಂಬೆ ಹೈಕೋರ್ಟ್‌ವರೆಗೆ ಹೋಗಿತ್ತು ಎಂಬುದನ್ನು ಪಾಟೀಲ್ ಪುಟ್ಟಪ್ಪನವರು ಲೇಖನವೊಂದರಲ್ಲಿ ದಾಖಲಿಸಿದ್ದರು.] ತಮ್ಮ ಅಸಹಾಯಕತೆಯನ್ನು ಸಂಗಮೇಶನ ಮುಂದೆ ತೋಡಿಕೊಂಡರು. ಇದನ್ನೆಲ್ಲ ಗಮನಿಸಿ ಸಂಗಮೇಶರು ಸ್ವಯಂ ಸ್ಫೂರ್ತಿಯಿಂದ ಗುರು ಬಸವಣ್ಣನವರನ್ನೇ ತಮ್ಮ ಗುರುವೆಂದು ಭಾವಿಸಿ 19-11-1956ರಂದು ಧಾರವಾಡದ ಹೊರವಲಯದಲ್ಲಿರುವ ಬಸವ ಗಿರಿ (ಹದ್ದಿನ ಗುಡ್ಡ, ನಿಗದಿ ರಸ್ತೆಯಲ್ಲಿದೆ) ಯ ಮೇಲಿರುವ ಚಿಕ್ಕ ಗುಡಿಯಲ್ಲಿ ಕುಳಿತು ಕಾವಿ ಧರಿಸಿ, ಪ್ರತಿಜ್ಞೆ ಸ್ವೀಕರಿಸಿದರು. ಅದು ಜ್ಞಾನ ಸನ್ಯಾಸ. ನಂತರ 7-8-1961ರಂದು ಸುತ್ತೂರು ಮಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಅಧಿಕೃತವಾಗಿ ಕ್ರಿಯಾ ಸನ್ಯಾಸ ದೀಕ್ಷೆ ನೀಡಿದರು.

ಸುತ್ತೂರು ಮಠ ಪಂಚಪೀಠದ ಶಾಖಾಮಠ ಎಂದು ನಿಮಗೆ ಹೇಳಿದವರಾರು? ಅಜ್ಞಾನದಿಂದ ಶರಣ ಸಂಪ್ರದಾಯವರಾದ ಕೆಲವು ನೊಳಂಬ ಸ್ವಾಮಿಗಳು ಸಹಿತ ಪಂಚಪೀಠದವರನ್ನು ನಕಲು ಮಾಡಲು ಹೋಗುತ್ತಾರೆ. ಪಂಚ ಪೀಠಗಳಿಗಿಂತಲೂ ಸಿದ್ಧರಮೇಶ್ವರರ ಹೆಸರಿನಲ್ಲೇ ಅದ್ಭುತ ಶಕ್ತಿ ಇದೆ ಎಂಬುದನ್ನು ಅಂಥವರು ಅರಿಯರು. ಸುತ್ತೂರು ಮಠ ಬಸವ ಪೂರ್ವದಲ್ಲಿ ಕಾಳಾ ಮುಖ ಸಂಪ್ರದಾಯದ ಮಠ. ಕಲ್ಯಾಣ ಕ್ರಾಂತಿಯ ನಂತರ ಚದುರಿ ಬಂದ ಶರಣರ ಪ್ರಭಾವದಿಂದ ಲಿಂಗಾಯತ ಮಠವಾಗಿ ಬಸವ ಮಾರ್ಗಕ್ಕೆ ಬಂದಿತು. ಘನಲಿಂಗದೇವರ ವಚನ ಓದಿರಿ. ಅವರು ಸ್ಪಷ್ಟವಾಗಿ ಶರಣ ಪರಂಪರೆಯವರು ಎಂಬುದನ್ನು ದೃಢಪಡಿಸುತ್ತಾರೆ.

ನಮಗೆ ಅರ್ಥಾತ್ ನಮ್ಮ ಗುರುಗಳಿಗೆ, ನಮ್ಮ ಶಿಷ್ಯರಿಗೆ ಬಸವ ಪೀಠದ ಸೂತ್ರ ಯಾರಿಂದ ಸಿಕ್ಕಿತು? ಎಂಬ ನಿಮ್ಮ ಪ್ರಶ್ನೆ ಹಾಸ್ಯಾಸ್ಪದ. ಇಷ್ಟಲಿಂಗ ಧಾರಿಗಳೆಲ್ಲರೂ - ಬಸವ ಪರಂಪರೆಯವರೇ! 900 ವರ್ಷಗಳ ಅವಧಿಯಲ್ಲಿ ಧೂರ್ತಜಾತಿವಾದಿಗಳು ಅಪ್ಪ ಬಸವಣ್ಣ ಅವ್ವ ವಚನ ಸಾಹಿತ್ಯದ ಸೂತ್ರ ಕತ್ತರಿಸಿದ್ದರು. ಆ ಸೂತ್ರವನ್ನು ಹುಡುಕಿ ಮತ್ತೆ ಸೇರಿಸಿದ್ದೇವೆ. ಹೊಳೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ ಬೇಕೆ ? ಲಿಂಗಾಯತರೆಲ್ಲ ಬಸವ ಪರಂಪರೆಯವರು; ಮರೆತಿದ್ದನ್ನು ನೆನಪಿಸಿಕೊಟ್ಟಿದ್ದೇವೆ ಅಷ್ಟೆ.

- ಮಲ್ಲಿಕಾರ್ಜುನಪ್ಪ,ನಿ.ಶಿಕ್ಷಕ, ಮತ್ತೀಪುರ, ತಾ-ಕೊಳ್ಳೇಗಾಲ

?. ನಮ್ಮ ಪಕ್ಕದ ಗ್ರಾಮದಲ್ಲಿ ಗುರು ಮಲ್ಲೇಶ್ವರರ ದಾಸೋಹ ಮಠ ಇದೆ. ಅಲ್ಲಿ ಯಾರೂ ಸ್ವಾಮಿಗಳಿರಲಿಲ್ಲ. ನಾನು, ಸು.ಸದಾಶಿವಪ್ಪ ಅಲ್ಲಿಗೆ ಹೋಗಿ ಮಠದ ಮೇಲೆ ಷಟ್‌ಕೋನ ಇಷ್ಟಲಿಂಗ ಸಹಿತ ಬಸವ ಧ್ವಜ ಹಾಕಿಸಿ, ಜನರನ್ನು ಸಂಘಟಿಸಿ ಪ್ರಾರ್ಥನೆ ಕಲಿಸಿ ವಾರದ ಪ್ರಾರ್ಥನೆ ನಡೆಯುವಂತೆ ಮಾಡಿ ಬಂದೆವು. ಆ ನಂತರ ಊರಿನವರು ಇನ್ನೊಂದು ಊರಿನ ಮಠದ ಸ್ವಾಮಿಗಳನ್ನು ಕರೆತಂದು ಅದಕ್ಕೆ ಇಟ್ಟರು. ಆತ ಬರುತ್ತಲೇ ಧ್ವಜ ತೆಗೆಸಿದ, ಪ್ರಾರ್ಥನೆ ನಿಲ್ಲಿಸಿದ. ಗುರು ಮಲ್ಲೇಶ್ವರರು ಬಸವ ಸಂಪ್ರದಾಯದವರಲ್ಲವೆ?

★ ಲಿಂಗಾಯತ ಸಮಾಜ, ಇದರ ಮಠಾಧೀಶರ ಬಗ್ಗೆ ಮಾತನಾಡುವುದೇ ನಾಚಿಕೆ ತರುವ ವಿಷಯ. ಸಿದ್ಧಲಿಂಗೇಶ್ವರರು, ಘನ ಲಿಂಗದೇವರು, ಷಣ್ಮುಖ ಶಿವಯೋಗಿ ಇವರೆಲ್ಲರ ವಚನ ಓದಿದರೆ, ಮಲೆಯ ಮಾದೇಶ್ವರ, ಗುರು ಮಲ್ಲೇಶ್ವರ ಚರಿತ್ರೆ ತಿಳಿದುಕೊಂಡರೆ ಆ ಮಠಗಳ ಇಂದಿನ ಅಧಿಕಾರಿಗಳು ಈಗಿರುವ ರೀತಿ ಇರಲು ಸಾಧ್ಯವೇ ಇಲ್ಲ. ಬಹುಶಃ ಅವರುಗಳು ತಮ್ಮ ಪರಂಪರೆಯ ಮಹಾನುಭಾವರ ವಚನಗಳನ್ನು ಓದುವುದಿಲ್ಲ; ಅವರ ಧ್ಯೇಯಕ್ಕೆ ಬದ್ಧರಾಗುವುದಿಲ್ಲ; ಅವರ ಮಠದ ಆಸ್ತಿಗಳಿಗೆ ಮಾತ್ರ ವಾರಸುದಾರರಾಗುತ್ತಾರೆ ಲಿಂಗಾಯತ ಸಮಾಜಕ್ಕೆ ಅಗತ್ಯವಾದ ಸ್ವತಂತ್ರ ಆಚಾರ-ವಿಚಾರ ಸಂಹಿತೆ, ಪ್ರಾರ್ಥನಾ ವಿಧಾನ, ಧ್ವಜ ರೂಪಿಸುವ ಸಾಮರ್ಥ್ಯವೂ ಇರುವುದಿಲ್ಲ. ಇನ್ನೊಬ್ಬರು ಮಾಡಿದ್ದನ್ನು ಒಪ್ಪಿಕೊಳ್ಳುವುದೂ ಇಲ್ಲ. ಮಾಡಲು ಬರುವುದೊಂದೇ ಮತ್ಸರ, ಟೀಕೆ.



# ಶರಣ ಸಮಾಗಮ - ಭಕ್ತಿಯ ಹಬ್ಬ

ಸಂಸಾರವೆಂಬ ಕಟುವಾದ ವೃಕ್ಷದಲ್ಲಿ ದೊರೆಯುವ ಅಮೃತ ಸಮಾನವಾದ ಎರಡು ಸಿಹಿ ಫಲಗಳೆಂದರೆ ಒಂದು ಸಾಹಿತ್ಯ ರಸಾಸ್ವಾದನೆ ಇನ್ನೊಂದು ಸಜ್ಜನರ ಸಂಗ ಎನ್ನುತ್ತದೆ ಒಂದು ಸುಭಾಷಿತ.

★ ಜಲವ ತಪ್ಪಿದ ಮತ್ಸ್ಯ ಬದುಕುವುದೆ ಸೋಜಿಗ
ಗಣತಿಂಥಿಣಿಯೊಳಗಿರಿಸೆನ್ನನು, ತಂದೆ
ಶಿವ ಶಿವಾ, ಲಿಂಗದೇವಾ,

★ ಲಿಂಗದೇವನ ಶರಣರ ಬರುವೆನಗೆ ಪ್ರಾಣ ಜೀವಾಳವಯ್ಯಾ. -ಬ.ವ.ದೀ-368

★ ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ
ಬರುವ ಹಾರುತ್ತಿದ್ದೇನೆಲೆಗವ್ವಾ,
ತರಗೆಲೆ ಗಿರುಕೆಂದಡೆ ಹೊರಗನಾನಾಲಿಸುವೆ;
ಲಿಂಗದೇವನ ಶರಣರು ಬಂದು, ಬಾಗಿಲ ಮುಂದೆ ನಿಂದು
'ಶಿವಾ' ಎಂದಡೆ ಸಂತೋಷಬಟ್ಟೆನೆಲೆಗವ್ವಾ! -ಬ.ವ.ದೀ-375

ಇಂಥ ನೂರಾರು ವಚನಗಳು ಧರ್ಮಪಿತರ "ಶರಣ ವಿರಹ"ವನ್ನು ಕುರಿತು ಹೇಳುತ್ತವೆ. ಅಲ್ಲಲ್ಲ ಚಿತ್ರಿಸುತ್ತವೆ. ಧರ್ಮಪಿತರು ಸೆರಗೊಡ್ಡಿ ಬೇಡುವರು ದೇವನಲ್ಲಿ. ಹೆಣ್ಣು ಹೊನ್ನು ಮಣ್ಣು ಕೀರ್ತಿ ಮುಂತಾದುವನ್ನೇ ? ಇಲ್ಲ, ಶರಣರ ಸಂಗವನ್ನು, ಗಣ ತಿಂಥಿಣಿಯನ್ನು, ಶರಣರ ಬರುವಿಕೆಯನ್ನು ಇಷ್ಟೊಂದು ಹಂಬಲವೇಕೆ? ಶರಣರ ಸಂಗ, ಅವರೊಡನೆ ಸಮಾಗಮ ಅಷ್ಟು ಆನಂದವನ್ನು ಕೊಡುತ್ತದೆ. ಪರಸ್ಪರರಲ್ಲಿ ಸ್ವಾರ್ಥದ ಸೋಂಕಿಲ್ಲದ ಸ್ನೇಹ, ಪ್ರೀತಿ ಅದನ್ನು ಅನುಭವಿಸಿದವರೇ ಬಲ್ಲರು. ಅದಕ್ಕಾಗಿಯೇ ಜೇಡರ ದಾಸಿಮಯ್ಯನವರು ಅಂತಿಮ ಶರಾ ಬರೆಯುತ್ತಾರೆ. "ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತರೆ, ನಿನ್ನನ್ನೇ ಇತ್ತೆ (ಇತ್ತಂತೆ) ಕಾಣಾ ರಾಮನಾಥ." ಶರಣರ ಸಂಗ ಸಿಕ್ಕರೆ ದೇವರನ್ನು ಬೇಕಾದರೂ 'ತಡೆ' ಎನ್ನುವಂಥವರು ಶರಣರು.

ಬಳ್ಳಾರಿಯಲ್ಲಿ ದಿ.18-6-2006ರಂದು ಬೆಳಗಾಂವ ರಾ.ಬ.ದಳದ ಅಧ್ಯಕ್ಷ ಶರಣ.ಕೆ.ಬಸವರಾಜಪ್ಪ ಮತ್ತು ಶರಣೆ. ಮಧುಮತಿ ಅವರ ಮಕ್ಕಳ ವಿವಾಹ, ರಾಘವ ಕಲಾಮಂದಿರದಲ್ಲಿ ಬಸವ ಕಿರಣ-ವೀಣಾ, ಶರಣ ಪ್ರಸಾದ -ರೂಪಾರ ಬಾಳ ಸಾಂಗತ್ಯಕ್ಕೆ ಶರಣ ಬಂಧುಗಳ ಹರಕೆ. ಅವರ ಬೀಗರು ಕರ್ನೂಲಿನ ಶರಣ ಕೆಲ್ಲಾ ಚಂದ್ರಶೇಖರಪ್ಪ ಮತ್ತು ಶಿವಮ್ಮ. ವೀಣಾಳ ತಂದೆ - ತಾಯಿ. ಬೆಳಗಾವಿಯ ಮಲ್ಲಿಕಾರ್ಜುನ ಬಾಬಾ ನಗರ ಮತ್ತು ವಂದನಾರ ಸುಪುತ್ರಿ ರೂಪ. ಎಲ್ಲರೂ ಬಸವ ಪಥಿಕರು. ಹೀಗಾಗಿ ಹಾಲು-ಸಕ್ಕರೆ-ತುಪ್ಪ-ಏಲಕ್ಕಿ-ಗೋಡಂಬಿ-ದ್ರಾಕ್ಷಿ ಬೆರೆತಂತಹ ಹೊಂದಾಣಿಕೆ. ಲೌಕಿಕ ಆಡಂಬರಕ್ಕಿಂತ ಬಸವ ಭಕ್ತಿಯ ಸಡಗರ ಮದುವೆ ಮನೆಯಲ್ಲಿ.

ಮಂಟಪ ಪ್ರವೇಶಿಸುವ ಮುನ್ನವೇ "ಶರಣು ಬನ್ನಿ" ಬ್ಯಾನರ್, ಜೀವನವನ್ನು ದೈವೀಕರಿಸಿರಿ, Divinise your life ಎಂಬ ಸೂಚನಾ ತೋರಣಗಳು. ವೇದಿಕೆಯೊ? ಸಾಕ್ಷಾತ್ ಅನುಭವ ಮಂಟಪ, ಏಕೆಂದರೆ ವೇದಿಕೆಯ ಹಿಂದೆ ಷಡುಗಣಾಧೀಶರು ನಿಂತು ಎಲ್ಲರನ್ನು ಅಭಯ ಹಸ್ತ ಎತ್ತಿ ಆಶೀರ್ವದಿಸುವ ದೃಶ್ಯ. ಅನುಭವ ಮಂಟಪದ ಕಲ್ಪನೆ ಗೊತ್ತಿಲ್ಲದವರು ಕೈಲಾಸದಂತಿದೆ ಎಂದು ಉದ್ಗರಿಸುತ್ತಿದ್ದರು. ಹಲವಾರು ರಾಷ್ಟ್ರೀಯ ಬಸವ ದಳಗಳ ಶರಣ ಶರಣೆಯರು ಆಗಮಿಸಿದ್ದರು. ಪರಸ್ಪರರನ್ನು ನೋಡಿ ಕೈಮುಗಿವ ಶರಣು ಶರಣಾರ್ಥಿಯ ಸಂಭ್ರಮ. ಸಂಜೆಗೆ ಬಳ್ಳಾರಿ ರಾಷ್ಟ್ರೀಯ ಬಸವ ದಳದವರು ಬಸವ ತತ್ತ್ವ ಸಮಾವೇಶವನ್ನು ನಮಗೆ ಅಭಿನಂದನೆ ಸಲ್ಲಿಸಲು ಗುರುವಂದನೆ ಕಾರ್ಯಕ್ರಮ ಏರ್ಪಡಿಸಿದ್ದರು. ಈ ರೀತಿಯ ಕಾರ್ಯಕ್ರಮಗಳು ಶರಣರಿಗಷ್ಟೆ (Recharging) ಪುನಶ್ಚೇತನಗೊಳಿಸುವ ಕ್ರಿಯೆಗಳಲ್ಲ ನಮಗೂ ಸ್ಫೂರ್ತಿ ಚೇತಸರನ್ನಾಗಿ ಮಾಡುವ ಕ್ರಿಯೆಗಳು. ನಮಗೂ ಇದು ಎಂಥಾ ಭಾಗ್ಯವಯ್ಯ ಎನಿಸುತ್ತದೆ.

ಹುಮನಾಬಾದಿನಲ್ಲಿ ನಡೆದ ಪ್ರವಚನ ಮಂಗಲ ಸಮಾರಂಭಕ್ಕೂ ರಾಷ್ಟ್ರೀಯ ಬಸವ ದಳಗಳವರು ಬೇರೆ ಬೇರೆ ಕಡೆಯಿಂದ ಬಂದಿದ್ದು ಈ ಶರಣ ಸಮಾಗಮವು ಭಕ್ತಿ ಕುಟುಂಬದ ಮನೆ ಹಬ್ಬವಾಗಿ ಹರ್ಷವನ್ನು ನೀಡಿತು.

"ಲಿಂಗಾಯತ ಧರ್ಮಸಾರ" ಎಂಬ ಕಿರು ಹೊತ್ತಿಗೆಯನ್ನು ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಸಿದ್ಧಪಡಿಸಿ ಶರಣ ಬಸವರಾಜಪ್ಪ "ವಚನ ಪ್ರಸಾದ" ವಾಗಿ ಹಂಚಿದರು. ಹೀಗಾಗಿ ಈ ವಿವಾಹ ಅನುಕರಣೀಯವಾಗಿ, ಬಸವರಾಜಪ್ಪನವರು ಅಭಿನಂದನಾರ್ಹರಾದರು.

## ಬಸವ ತತ್ತ್ವ ಸಮಾವೇಶ

ಇದೇ ಸನ್ನಿವೇಶವನ್ನು ಉಪಯೋಗಿಸಿಕೊಂಡು ಬಳ್ಳಾರಿ ರಾಷ್ಟ್ರೀಯ ಬಸವ ದಳವು ಬಸವ ತತ್ತ್ವ ಸಮಾವೇಶ ಮತ್ತು ಗುರು ವಂದನ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಗುಲಬರ್ಗಾದ ಶರಣ ಜಗನ್ನಾಥ ಪನಸಾಲೆಯವರು ಧ್ವಜಾರೋಹಣ ಮಾಡಿದರು. ಪ್ರಧಾನ ಕಾರ್ಯದರ್ಶಿ ಕೆ.ವಿ.ರವಿಶಂಕರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಬಳ್ಳಾರಿ ನಗರ ಬಿಜೆಪಿ ಜಿಲ್ಲಾಧ್ಯಕ್ಷರು ಮತ್ತು ಅಂದು ತಾನೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಜನಾರ್ಧನ ರೆಡ್ಡಿ ಅವರನ್ನು ಸತ್ಕರಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಅವರು ಎಂಟನೆಯ ತರಗತಿಯಲ್ಲಿ ಓದುವಾಗ ಬಳ್ಳಾರಿಯ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ನಡೆದ ಪ್ರವಚನ ಕೇಳಿ ಪ್ರಭಾವಿತರಾದುದಲ್ಲದೆ ಬಸವಣ್ಣನವರ ವಿಚಾರಗಳಿಗೆ ಮಾರು ಹೋದುದಾಗಿ ಬಣ್ಣಿಸಿದರು. ಭದ್ರಾವತಿ ರಾ.ಬ.ದಳದ ಶರಣೆ. ಗಂಗಾಂಬಿಕೆ ಬಸವರಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಿ ಭಾಷಣ ಮಾಡಿದರು. ಮದುವೆ ಮತ್ತು ಸಮಾವೇಶದಲ್ಲಿ ಭಾಗಿಗಳಾಗಲು ಗಡಹಿಂಗ್ಲಾಜ್, ಗುಲಬರ್ಗಾ, ಬೆಂಗಳೂರು, ಕೊಪ್ಪಳ, ಗಂಗಾವತಿ, ಬಾಗಲಕೋಟೆ, ಹುಬ್ಬಳ್ಳಿ, ಬೆಳಗಾಂವ ಇತ್ಯಾದಿ ಊರುಗಳಿಂದ ಶರಣ ಶರಣೆಯರು ಆಗಮಿಸಿದ್ದರು.

## ಶ್ರಾವಣ ಮಾಸದಲ್ಲಿ ರಾ.ಬ.ದಳಗಳವರಿಂದ ಬಸವ ಜ್ಯೋತಿ ಕಾರ್ಯಕ್ರಮಕ್ಕೆ ಸೂಚನೆ

ಶ್ರಾವಣ ಮಾಸವು ಧಾರ್ಮಿಕಾಚರಣೆಗೆ ಅತ್ಯಂತ ಸೂಕ್ತವಾದ ಸಮಯ ದಿ.25-7-2006ರಂದು ಶ್ರಾವಣದ ಅಮವಾಸ್ಯೆ. ಪ್ರತಿಪದೆ ದಿ.26 ರಂದು ಪ್ರಾರಂಭ. ಅಂದಿನಿಂದ ದಿನಾಲೂ ಸಂಜೆ ಒಬ್ಬರ ಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮ ಏರ್ಪಡಿಸಬೇಕು. ಶ್ರೀ ಗುರು ಬಸವಣ್ಣನವರ ಭಾವಚಿತ್ರ ಇಟ್ಟು ಅಲಂಕರಿಸಿ, [ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮನೆಯವರು ಮಾಡಿಕೊಳ್ಳಬಹುದು.] ಸಂಜೆ ಸಂಕ್ಷಿಪ್ತ ಪೂಜೆ, ನೆನಹು ಮಾಡಿ ಪ್ರವಚನ ಮಾಡಬೇಕು. ಮಂಗಲವಾದ ಬಳಿಕ ತಮ್ಮ ಶಕ್ತ್ಯಾನುಸಾರ ಪ್ರಸಾದ ವಿತರಣೆ ಮಾಡಬೇಕು.

ಭಾದ್ರಪದ ತೃತೀಯ ದಿ.26ರ ವರೆಗೆ ಮನೆ ಮನೆಯಲ್ಲಿ ಮಾಡಿ ದಿ.27-8-2006 ರಂದು ಸಾಮೂಹಿಕವಾಗಿಬಸವ ಮಂಟಪಗಳಲ್ಲಿ ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ, ಪೂಜ್ಯ ಲಿಂಗಾನಂದ ಸ್ವಾಮಿಗಳವರ ಜಯಂತಿ, ಪೂಜ್ಯ ಗಂಗಾ ಮಾತಾಜಿಯವರ ವರ್ಧಂತಿ ಆಚರಿಸಿ ಬಸವ ಜ್ಯೋತಿಯ ಸಮಾರೋಪ ಮಾಡಬೇಕು; ಪ್ರಸಾದ ದಾಸೋಹ ಮಾಡಿಸಬೇಕು.

* * * * * *

## ಬೆಂಗಳೂರಿನ ಕಾರ್ಯಕ್ರಮಕ್ಕೆ ಆಹ್ವಾನ

ಬೆಂಗಳೂರಿನಲ್ಲಿ ದಿ.30-07-2006 ರಂದು 811ನೆಯ ಬಸವ ಪಂಚಮಿಯನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ. ಭಾನುವಾರವೇ ಬಂದಿರುವುದರಿಂದ ಸ್ಥಳೀಯವಾಗಿಯೂ ಆಚರಿಸಲು ಎಲ್ಲರೂ ಇಷ್ಟಪಡುವುದು ಸ್ವಾಭಾವಿಕ. ಆದರೆ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸ್ಥಳೀಯವಾಗಿ ಪೂಜೆಯನ್ನು ನೆರವೇರಿಸಿ, ಮರುವಾರ ವಿಶೇಷ ಕಾರ್ಯಕ್ರಮಗಳನ್ನು ತಮ್ಮ ಊರುಗಳಲ್ಲಿ ಇಟ್ಟುಕೊಂಡರೆ ಒಳ್ಳೆಯದು.

– ಮಾತಾಜಿ



# ಮಾತೃ ಹರಕೆ

- ಮಾತಾಜಿ

ಶರಣರ ಮನೆ ಮದುವೆಯ ಸಂಭ್ರಮವ ನೋಡಿರಣ್ಣ
ಪರಮ ಹರುಷದೊಳು ನೀವು ಓಲಾಡಿರಣ್ಣ ॥1॥

ಕಣ್ಣು ಕುಕ್ಕುವ ವೈಭವ ಇಲ್ಲಿಲ್ಲವವ್ವ
ಕಣ್ಣು ತೆರೆಸುವ ಜ್ಞಾನ ತುಂಬಿ ಇಹುದವ್ವ ॥2॥

ಬೀಗ ಬೀಗರ ನಡುವೆ ಹಮ್ಮಿಲ್ಲ ನೋಡು
ತ್ಯಾಗ ಸರಳತೆಯ ಪಾಠದ ಚನ್ನಡೆಯ ಗೂಡು ॥3॥

ವರದಕ್ಷಿಣೆ ವರ ಪೂಜೆಯ ಕಾಟವಿಲ್ಲಿಲ್ಲ
ಶರಣು ಶರಣಾರ್ಥಿಯ ಸಂಭ್ರಮವೆ ಎಲ್ಲ ॥4॥

ತೆಂಗು ಮೋಸಂಬಿ ಪಾತ್ರೆ ಪಡುಗಗಳಿಲ್ಲ
ಬಂಗಾರ ಬೆಳ್ಳಿಯ ಬೇಡಿಕೆಯು ಇಲ್ಲ ॥5॥

ಆಡಂಬರ ಗೀಡಂಬರ ಗೌಜು ಗದ್ದಲವಿಲ್ಲ
ಶರಣರ ಸಂಸ್ಕೃತಿಯೆ ತುಂಬಿಹುದು ಎಲ್ಲ ॥6॥

ಲಿಂಗಾಯತ ಧರ್ಮದ ಸಾರವನು ನೋಡು
ಮಂಗಲಮಯ ಶರಣರ ವಾಣಿಯಂ ಕೇಳು ॥7॥

ರಕ್ತ ಸಂಬಂಧಕಿಂತ ಭಕ್ತಿಸಂಬಂಧದ ಸಡಗರವ ನೋಡು
ಯುಕ್ತಿಸುಧೆಯನು ನೀಡ್ವ ತತ್ತ್ವದ ಜೇಂಗೂಡು ॥8॥

ಜಾತಕ ಮುಹೂರ್ತಗಳ ಗೊಡವೆಯೇ ಇಲ್ಲ
ವಚನ ವೈಭವದ ಹೊರತು ಮೂಢತನವಿಲ್ಲಿಲ್ಲ ॥9॥

ಸೃಷ್ಟಿಕರ್ತ ಲಿಂಗದೇವನ ಕರುಣೆಯ ಧಾರೆ
ಧರ್ಮ ಕರ್ತ ಗುರು ಬಸವಣ್ಣನ ಆಶೀರ್ವಾದ ರಕ್ಷೆ ॥10॥

ಷಡುಗಣಾಧೀಶರ ಹೃದಯ ಪೂರ್ವಕ ಹರಕೆ
ಏಳುನೂರೆಪ್ಪತ್ತು ಅಮರ ಗಣಂಗಳ ಕೃಪೆ ॥11॥

ಅಕ್ಕಿ ಅಕ್ಷತೆಗಳ ಚೆಲ್ಲಾಟ ತುಳಿದಾಟ ಇಲ್ಲವು
ಪುಷ್ಪ ವೃಷ್ಟಿಯ ಸೊಬಗು ಕಂಗಳಿಗೆ ಚೆಲುವು ॥12॥

ವಟ ವಟ ಮಂತ್ರಗಳ ಜಂಜಾಟವಿಲ್ಲಿಲ್ಲ
ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಮಂತ್ರನಾದವೆ ಎಲ್ಲ ॥13॥

ಎಲ್ಲಿ ನೋಡಿದಡಲ್ಲಿ ತತ್ತ್ವ ಚಿಂತನೆಯ ಸಂಭ್ರಮ
ಮದುವೆಯ ಮಂಟಪದಲ್ಲಿ ಶರಣ ಸಮಾಗಮ ॥14॥

ಗುರು ಬಸವ ಶರಣರ ಮನೆಯ ಮದುವೆಯು ಸಡಗರದ ಹಬ್ಬ
ಸಚ್ಚಿದಾನಂದನ ಭಕ್ತರಿಗೆ ತಂದಿಹೆ ಬಲು ಉಬ್ಬ ॥15॥

[ ದಿ.18-6-2006, ಮದುವೆಗಾಗಿ ಬರೆದ ಪದ್ಯ ]



ಧಾರವಾಡದ ಅಕ್ಕಮಹಾದೇವಿ ಆಶ್ರಮದ ಬಸವ ಮಂಟಪದಲ್ಲಿ ಪೂಜ್ಯ ಲಿಂಗಾನಂದ ಸ್ವಾಮಿಗಳ 11ನೆಯ ಸಂಸ್ಮರಣೆ. ಉದ್ಘಾಟಿಸುತ್ತಿರುವ ಡಾ.ಬಿ.ಸಿ.ಜವಳಿ, ಎಡದಿಂದ ಬಲಕ್ಕೆ, ಧಾರವಾಡದ ರಾಷ್ಟ್ರೀಯ ಬಸವ ದಳ ಅಧ್ಯಕ್ಷ ಸಿದ್ದಣ್ಣ ನಟೇಗಲ್, ಲಿಂಗಾಯತ ಧರ್ಮ ಮಹಾಸಭಾ ಧಾರವಾಡ ಘಟಕದ ಅಧ್ಯಕ್ಷ ಎಸ್.ಎಲ್.ಗೌಡರು, ಶರಣ ಹರಳಯ್ಯ ಪತ್ರಿಕೆಯ ಸಂಪಾದಕ ಮಾರ್ಕಂಡೇಯ ದೊಡ್ಡಮನಿ, ಪೂಜ್ಯ ಮಾತೆ ಸತ್ಯಾದೇವಿ, ಪೂಜ್ಯ ಮಾತೆ ಅಕ್ಕಮಹಾದೇವಿ, ಕರಿಬಸಪ್ಪ ಕೋರಿಶೆಟ್ಟರು, ಹುಬ್ಬಳ್ಳಿ ರಾ.ಬ.ದಳ ಅಧ್ಯಕ್ಷರಾದ ಕಲ್ಯಾಣಪ್ಪ ಪರಮಾದಿ.

## ಲಿಂಗಾನಂದ ಸ್ವಾಮಿಗಳ ಆಗಮನ ಲಿಂಗಾಯತ ಧರ್ಮದ ಪುನರುತ್ಥಾನ

- ಡಾ.ಬಿ.ಸಿ.ಜವಳಿ

"ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಬರುವಿಕೆಯಿಂದ ಬಸವ ತತ್ವಕ್ಕೆ ಜೀವ ಕಳೆ ಬಂದು, ಲಿಂಗಾಯತ ಧರ್ಮದ ಪುನರುತ್ಥಾನವಾಯಿತು" ಎಂದು ಡಾ॥ಬಿ.ಸಿ ಜವಳಿಯವರು ಪೂಜ್ಯರನ್ನು ಕೊಂಡಾಡಿದರು. ತಮ್ಮ ವಿದ್ಯಾರ್ಥಿ ಜೀವನದ ಕೆಲವು ಘಟನೆಗಳನ್ನು ನೆನಪಿಸಿಕೊಂಡ ಅವರು, "ನಾನು, ಡಾ॥ಎಸ್.ಆರ್ ಗುಂಜಾಳ್, ಸಂಗಣ್ಣ ಕುಪ್ಪಸದ ಮುಂತಾದ ಕೆಲವರು ಸೇರಿ, ಆದೇ ಆಗ ಬೆಳಕಿಗೆ ಬರುತ್ತಿದ್ದ ವಚನ ವಾಙ್ಮಯ ಕುರಿತು ಚರ್ಚಿಸುತ್ತಿದ್ದೆವು. ಸಂಗಮೇಶರು ಇದ್ದಕ್ಕಿದ್ದಂತೆಯೇ ಕಾವಿ ಧರಿಸಿ, ವಚನ ಸಾಹಿತ್ಯ ಪ್ರಚಾರ ಮಾಡುವ ಸಂಕಲ್ಪ ತಳೆದಾಗ ಆಶ್ಚರ್ಯ ಚಕಿತರಾದೆವು. ಅವರ ತ್ಯಾಗವೇ ಈ ಧರ್ಮದ ಪುನರುತ್ಥಾನಕ್ಕೆ ನಾಂದಿ ಹಾಡಿತು." ಎಂದು ನುಡಿದರು.

ಪೂಜ್ಯ ಅಪ್ಪಾಜಿಯವರ ಜೊತೆ ಒಡನಾಡಿದ್ದ ಶರಣ ಮಾರ್ಕಂಡೇಯ ದೊಡ್ಡಮನಿ ಅವರು, "ಗುರು ಬಸವಣ್ಣನವರು ಕೊಟ್ಟ ಪ್ರಗತಿಪರ ಧರ್ಮವನ್ನು ಜಾತಿವಾದಿಗಳು, ಪುರೋಹಿತ ಶಾಹಿಗಳು ವಿಕೃತಗೊಳಿಸಿದ್ದು ಕಂಡು ಮನನೊಂದು ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ಬಸವ ಧರ್ಮದ ಶುದ್ಧೀಕರಣ ಮತ್ತು ಪುನರುತ್ಥಾನಕ್ಕೆ ಬಹಳ ಶ್ರಮಿಸಿದರು. ವಿಶ್ವಗುರು ಬಸವಣ್ಣನವರೇ ಇದರ ಸ್ಥಾಪಕರು, ವಚನ ಸಾಹಿತ್ಯವೇ ಧಾರ್ಮಿಕ ಸಂವಿಧಾನ ಎಂಬ ಸತ್ಯವನ್ನು ಒಪ್ಪಿಕೊಂಡು ಸಮಾಜವು ಸಂಘಟಿತವಾಗಬೇಕೆಂಬುದು ಪೂಜ್ಯರ ಆಶಯವಾಗಿತ್ತು." ಎಂದು ನುಡಿದರು.


-ವರದಿ : ಕರಿಬಸಪ್ಪ ಕೋರಿಶೆಟ್ಟರು





ಮುಮ್ಬಾಯ್ ನಗರದಲ್ಲಿ ದಿನಾಂಕ 24-6-2006 ರಂದು ಪೂಜ್ಯ ಮಾತಾದ್ವಯರ ಅಭಿನಂದನಾ ಕಾರ್ಯಕ್ರಮದಲ್ಲಿ ಮಾಲಾರ್ಪಣೆ ಮತ್ತು ಪುಷ್ಪವೃಷ್ಟಿ ಮಾಡಿದಾಗ

CPMG/KA/BGW-50/2006-2008 WPP (W) - 17 R.No. 19980/70



ವಿಶ್ವಗುರು ಬಸವಣ್ಣನವರು




ದಾಸೋಹ ಮೂರ್ತಿ ನೀಲಾಂಬಿಕಾ ದೇವಿ

ABIK/06/07/KK